

ಲಂಕೇಶ್

ಮಾರ್ಚ್ 7, 2012 ಪುಟ 20 ರೂ. 14/-

ಮುಸ್ಲಿಮರಿಗೆ ಈಗ ಬೇಕು ಒಬ್ಬ ಅಂಬೇಡ್ಕರ್





ಯಡ್ಡಿ ಯಾಗದ ಕುದುರೆ ಶೆಟ್ಟರ್



ಬದಲಾಗದ ದರ್ಶನ ಹಳೇ ಚಾಳಿ ಶುರು

ಗುಲ್ಬರ್ಗಾ: HKE ಸಂಸ್ಥೆಯಲ್ಲಿ ಮಸಲತ್ತುಗಾರರು

ಇರಾನಿಗಳನ್ನು ದೋಚಿದರೆ ಬೆಂಗಳೂರು ಪೋಲೀಸರು?

ಗಾಂಧಿನಗರ ವಾರ್ಡ್ ಕೊಲೆಗಡುಕರ ಜೊತೆ ಬಿಜೆಪಿ ಪ್ರಚಾರ

ಕರಾವಳಿ: ಚೆಡ್ಡಿ ರಾಜಕಾರಣಕ್ಕೀಗ ಲೈಂಗಿಕ ರಂಗು!


ಈ ಪಠ್ಯ ಮಕ್ಕಳ ಮತ್ತು ಸಮಾಜದ ಬೌದ್ಧಿಕ ಆರೋಗ್ಯವನ್ನು ಹದಗೆಡಿಸಿ ಭಾವೀ ಭಾರತದ ಪ್ರಜೆಯ ತಲೆಯಲ್ಲಿ ಕೋಮು ವಿಷ ಮತ್ತು ಮೇಲರಿಮೆ ಮತ್ತು ಕೀಳರಿಮೆಗಳ ಸಂಘರ್ಷವನ್ನು ಹುಟ್ಟುಹಾಕುತ್ತದೆ. ಅಲ್ಲದೆ ಪ್ರತಿಯೊಂದು ಪಾಠದಲ್ಲೂ ಈ ಪಠ್ಯ ನ್ಯಾಷನಲ್ ಕರಿಕುಲರ್ ಫ್ರೇಂವರ್ಕ್ ಮತ್ತು ಡಿಎಸ್‌ಇಆರ್‌ಟಿ ಕೊಟ್ಟ ಮಾರ್ಗದರ್ಶಿ ಸೂತ್ರಗಳನ್ನೂ ಮತ್ತು ನಿರ್ದೇಶನಗಳನ್ನೂ ಸಾರಾಸಗಟು ಉಲ್ಲಂಘಿಸುತ್ತದೆ.



ಪಠ್ಯಪುಸ್ತಕಗಳ ಕೇಸರೀಕರಣ

ಭಾಗ 3

ಶಿವಸುಂದರ್



ಚಾರ್ವಾಕ

ಎಲ್ಲಕ್ಕಿಂತ ಹೆಚ್ಚಾಗಿ ಇದೀ ಉತ್ತರ ಕರ್ನಾಟಕದಲ್ಲಿ ಇಸ್ಲಾಮ್ ಪರಿಚಯವಾದದ್ದು ಮುಸ್ಲಿಂ ದೊರೆಗಳ ಕತ್ತಿಯಿಂದಲ್ಲ, ಬದಲಿಗೆ ಪ್ರೀತಿಯನ್ನು ಪ್ರತಿಪಾದಿಸುತ್ತಾ ಜನರ ನೋವಿಗೆ ಮಿಡಿಯುತ್ತಾ ಜನರಲ್ಲಿ ಬೆರೆತುಹೋದ ಸೂಫಿ ಸಂತರಿಂದ. ಸೂಫಿ ಸಂತರ ಮತ್ತು ದತ್ತ ಹಾಗೂ ನಾಥಪಂಥದ ಅವಧೂತರ ಮಿಲನದಿಂದ ಕರ್ನಾಟಕ ಸಂಸ್ಕೃತಿ, ಸಾಹಿತ್ಯ ಮತ್ತು ಜನಜೀವನ ಮತ್ತಷ್ಟು ಸಮೃದ್ಧಿ ಗೊಂಡಿದೆ. ಆದರೆ ಸಾಮಾಜಿಕ ಜನಜೀವನದಲ್ಲಿ ಧರ್ಮಾತೀತವಾದ ಈ ಮಿಲನವನ್ನು ಕೋಮುವಾದಿ ಕಣ್ಣುಗಳು ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಈ ಕಾರಣಕ್ಕೇ ಈ ಭಾಗದ ಸಾಂಸ್ಕೃತಿಕ ಇತಿಹಾಸವನ್ನು ಅದ್ಭುತವಾಗಿ ವಿಶ್ಲೇಷಿಸಿರುವ ಕನ್ನಡದ ಧೀಮಂತ ಸಾಹಿತಿ ಶಂ.ಬಾ. ಜೋಷಿಯವರು "ರಾಜಕೀಯ ರಣರಂಗದಲ್ಲಿಯ ರಾಗದ್ವೇಷಗಳ ದೃಷ್ಟಿಯಿಂದ ನೋಡುವವರಿಗೆ ಗುರುಮಾರ್ಗದಲ್ಲಿಯ ಹಿಂದೂ ಮುಸಲ್ಮಾನರ ಸಂಗಮ ವಿಚಿತ್ರವಾಗಿ ಕಾಣುತ್ತದೆ. ಇದೆಲ್ಲಾ ಮುಸಲ್ಮಾನೀಯವಾಗುವ ಮನೋವೃತ್ತಿ ಎಂದವರು ಸಾಮಾನ್ಯವಾಗಿ ಆರೋಪಿಸುತ್ತಾರೆ. ಆದರೆ ಇಂಥ ದೃಷ್ಟಿಕೋನದಿಂದ ನಮ್ಮ ಸಂಸ್ಕೃತಿಯಲ್ಲಿಯ ಸಮಸ್ಯೆಗಳು ಅರ್ಥವಾಗುವುದಿಲ್ಲ" ಎಂದು ಕಾಮತ್‌ರಂಥ, ಚಿದಾನಂದ ಮೂರ್ತಿಯವರಂಥ ಇತಿಹಾಸಕಾರರನ್ನು ಮೂದಲಿಸಿದ್ದರು. ಆದರೂ ಬಿಜೆಪಿ ಸರ್ಕಾರ ಹೈದರಾಬಾದ್ ಕರ್ನಾಟಕದ ಇತಿಹಾಸವನ್ನು ಬರೆಯುವಾಗ ಪ್ರಧಾನವಾಗಿ ಕಾಮತರ ಇತಿಹಾಸವನ್ನೇ ಆಧರಿಸಿದೆ! ಇಡೀ ಹೈದರಾಬಾದ್ ಕರ್ನಾಟಕ ಇತಿಹಾಸವನ್ನು ಪ್ರಧಾನವಾಗಿ ಹಿಂದೂ ಪ್ರಜೆಗಳ ಮೇಲೆ ಮುಸ್ಲಿಂ ದೊರೆಯ ದಾಳಿ ಎಂಬಂತೆ ಚಿತ್ರಿಸುತ್ತದೆ.

ಹೈದರಾಬಾದ್ ಕರ್ನಾಟಕವನ್ನು ನೈಜಾಮರು ಮತ್ತು ಬಹಮನಿ ಸುಲ್ತಾನರೂ ಆಳಿದ್ದಾರೆ. ಇವರಿಬ್ಬರೂ ಮುಸ್ಲಿಮರು. ಆದರೆ ಈ ಭಾಗದ ಇತಿಹಾಸ ಅವರಿಂದಲೇ ಶುರುವಾಗಿ ಅವರಿಂದಲೇ ಮುಗಿಯುವುದಿಲ್ಲ. ಅಲ್ಲದೆ ನೈಜಾಮ ಮತ್ತು ಬಹಮನಿ ಸುಲ್ತಾನರ ಆಡಳಿತ ರೀತಿ ಮತ್ತು ಕಾಲಘಟ್ಟ ಸಂದರ್ಭಗಳೇ ಬೇರೆಬೇರೆ. ಹೀಗಾಗಿ ಈ ಕಾಲಘಟ್ಟದ ಇತಿಹಾಸವನ್ನು ಅರಿಯುವಾಗ ಬಹಮನಿ ಸುಲ್ತಾನರು ಕರ್ನಾಟಕದ ಸಂಸ್ಕೃತಿ ಮತ್ತು ಜನಜೀವನಕ್ಕೆ ಕೊಟ್ಟ ಕೊಡುಗೆಗಳೇನು ಎಂಬ ಅಂಶಕ್ಕೆ ಒತ್ತುಕೊಡ ಬೇಕೆಂದು ಡಿಎಸಿಆರ್‌ಟಿ ಸಿಲಬಸ್ ಸಹ ನಿರ್ದೇಶಿಸುತ್ತದೆ. ಆದರೆ ಅವೆಲ್ಲವನ್ನೂ ಗಾಳಿಗೆ ತೂರಿ ಈ ಭಾಗದ ಇತಿಹಾಸವೆಂದರೆ ಹಿಂದೂ ಪ್ರಜೆಗಳನ್ನು ಮುಸ್ಲಿಂ ದೊರೆ ಪೀಡಿಸಿದ ಇತಿಹಾಸವೆಂಬಂತೆ ಪುಟ 102-105ರವರೆಗೆ ಸುದೀರ್ಘವಾಗಿ ಚಿತ್ರಿಸಲಾಗಿದೆ. ವಾಸ್ತವವಾಗಿ ನೈಜಾಮ್ ದೊರೆ ರಕ್ಷಿಸಿದ್ದು ಹಿಂದೂ ಭೂಮಾಲಿಕರನ್ನು; ದಮನ ಮಾಡಿದ್ದು ತನ್ನ ಮತ್ತು ತಾನು ರಕ್ಷಿಸುತ್ತಿದ್ದ ಹಿಂದೂ ಭೂಮಾಲಿಕರ ವಿರುದ್ಧ ಬಂಡೆದ್ದ ರೈತಸಮುದಾಯವನ್ನು. ಆದರೆ ಇಂಥ ಒಂದು ಊಳಿಗಮಾನ್ಯಶೋಷಣೆಯನ್ನು ಮುಸ್ಲಿಂ ದಮನವೆಂತಲೂ, ಊಳಿಗಮಾನ್ಯ ವಿರೋಧಿ ಬಂಡಾಯವನ್ನು ಹಿಂದೂ ಬಂಡಾಯವೆಂತಲೂ ಚಿತ್ರಿಸಿ ಪ್ರಸ್ತುತ ಸಂದರ್ಭದಲ್ಲಿ ಬಿಜೆಪಿಗಳು ರಾಜಕಾರಣ ಮಾಡಲು ಹೊರಟಿದ್ದಾರೆ.

ವಾಸ್ತವವಾಹಿ, ನೆಹರೂ ಸೈನ್ಯ ಬಂದು ರಜಾಕಾರರ ಉಪಟಳ ಅಡಗಿಸಿ ನೈಜಾಮ್ ಸಂಸ್ಥಾನವನ್ನು ವಿಲೀನಗೊಳಿಸಿ ಕೊಂಡಿದ್ದು 1948ರಲ್ಲಿ. ಅದರ ನಂತರವೂ 1952ರ ತನಕ ನೆಹರೂ ಅವರ ಸೈನ್ಯ ರೈತ ಬಂಡಾಯಗಾರರನ್ನು ಕೊಂದುಹಾಕುತ್ತಲೇ ಇತ್ತು. ಇಲ್ಲಿ ಕರ್ನಾಟಕ ಭಾಗದಲ್ಲಿ ನೈಜಾಮನ ಪತನದ ನಂತರ ಸಾವಿರಾರು ಸಾಮಾನ್ಯ ಮುಸ್ಲಿಮರ ಕಗ್ಗೊಲೆಯಾಯಿತು. ಇತಿಹಾಸದ ಈ ಭಾಗವನ್ನು ಮರೆಮಾಚುತ್ತಿರುವುದು ಉದ್ದೇಶಪೂರ್ವಕವಾಗಿಯೇ!

ಹಾಗೆಯೇ ಈ ಭಾಗದಲ್ಲಿ ಅರಸ ಮುಸ್ಲಿಮನಾದರೂ 800 ವರ್ಷಗಳಷ್ಟು ಹಿಂದೆಯೇ ಸೂಫಿ ಮತ್ತು ನಾಥಪಂಥರ ಸಂಯೋಗದಿಂದ ಹೊಸ ಅನುಭಾವಿಕ ಪಂಥ ಜನಮಾನಸವನ್ನು ಆಕರ್ಷಿಸಿತ್ತು. ಖ್ವಾಜಾ ಬಂದೇ ನವಾಜ್, ನಾಸಿರುದ್ದೀನ್, ಕೋಡೆಲೂರು ಸಿದ್ಧಪ್ಪ, ಮಾಣಿಕ್ ಪ್ರಭು ಇನ್ನಿತ್ಯಾದಿ ಗುರುಪಂಥೀಯರ ಇತಿಹಾಸವೇ ಇದೆ. ಇಲ್ಲಿನ ಜನರ ಜೀವನ, ಸಂಸ್ಕೃತಿ, ಭಾಷೆ, ಹೆಸರು, ಹಬ್ಬ, ಉಡುಪು ಎಲ್ಲವೂ ಈ ಸೌಹಾರ್ದ ಸಂಸ್ಕೃತಿಯಿಂದ ಪ್ರಭಾವಿತವಾಗಿದೆ. ಆದರೆ ಇಂಥಾ ಸೌಹಾರ್ದ ಬದುಕಿನ ಬಗ್ಗೆ ಪರಿಚಯಿಸ ಬೇಕೆಂದು ಸ್ಪಷ್ಟವಾಗಿ ಸಿಲಬಸ್‌ನಲ್ಲಿ ಹೇಳಲಾಗಿದ್ದರೂ ಚಿನ್ನೂರ್ ಜಲಾಲ್‌ಸಾಬ್ ಮತ್ತು ಶರೀಫರ ಪ್ರಸ್ತಾಪಬಿಟ್ಟರೆ ಕರ್ನಾಟಕದ ಹೆಮ್ಮೆಯ ಈ ಬಗೆಯ ಸಂಗಮ ಸಂಸ್ಕೃತಿಯ ಪ್ರಸ್ತಾಪವೇ 5ನೇ ತರಗತಿಯ ಪಠ್ಯದಲ್ಲಿಲ್ಲ.

ಅದೇರೀತಿ ಬೆಳಗಾವಿ ವಿಭಾಗದ ಇತಿಹಾಸವನ್ನು ಬರೆಯುವಾಗಲೂ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಸೌಹಾರ್ದ ಸಂಸ್ಕೃತಿಯ ಚಿತ್ರಣವೇ ಇಲ್ಲ. ಬೆಂಗಳೂರು ವಿಭಾಗದ ಇತಿಹಾಸದಲ್ಲಿ ಹೈದರಾಲಿಯ ವಿರುದ್ಧ ಸೆಣಸಿದ ಮದಕರಿ ನಾಯಕನ ಜೊತೆ ಒನಕೆ ಓಬವ್ವನ ಹೆಸರು ಇದ್ದರೆ ಮತ್ತೊಂದು ಕಡೆ ಬೆಳಗಾವಿ ವಿಭಾಗದ ಇತಿಹಾಸದಲ್ಲಿ ಬ್ರಿಟಿಷರ ವಿರುದ್ಧ ಸೆಣಸಿದ ಕಿತ್ತೂರು ರಾಣಿ ಚೆನ್ನಮ್ಮಳ ಪ್ರಸ್ತಾಪವಿದ್ದರೂ, ಅದೇ ಬ್ರಿಟಿಷರಲ್ಲದೆ ಸ್ಥಳೀಯ ಭೂಮಾಲಿಕ ದಲ್ಲಾಳಿಗಳ ವಿರುದ್ಧವೂ ರೈತಾಪಿಯನ್ನು ಕಟ್ಟಿಕೊಂಡು ಹೋರಾಡಿದ ಸಂಗೊಳ್ಳಿರಾಯಣ್ಣನ ಹೆಸರೇ ಇಲ್ಲ. ಮೈಸೂರು ವಿಭಾಗದ ಇತಿಹಾಸದಲ್ಲಿ ಒಡೆಯರು ಮತ್ತು ಇತರ ರಾಜರು ಮಾಡಿದ-ಮಾಡದ ಎಲ್ಲಾ ಜನಹಿತ ಕೆಲಸಗಳ ಪಟ್ಟಿಯಿದ್ದರೂ ಹೈದರಾಲಿ ಮತ್ತು ಟಿಪ್ಪು ಪ್ರಸ್ತಾಪ ಬಂದಾಗ ಅವರನ್ನು ಆಕ್ರಮಣಕಾರರೆಂದು ಚಿತ್ರಿಸುವ ಇತಿಹಾಸವನ್ನೇ ಹೆಚ್ಚು ಬರೆಯಲಾಗಿದೆ. ಟಿಪ್ಪೂ ತಂದ ಕ್ರಾಂತಿಕಾರಕ ಸಾಮಾಜಿಕ ಸುಧಾರಣೆಯ ಕಿಂಚಿತ್ತೂ ಪ್ರಸ್ತಾಪವಿಲ್ಲ. ಬೆಂಗಳೂರಿನ ಹೆಮ್ಮೆಯ ಜಾಗಗಳನ್ನು ವಿವರಿಸುವಾಗ ಇಸ್ಕಾನ್ ಸಂಸ್ಥೆ ಮಧ್ಯಾಹ್ನದ ಬಿಸಿಯೂಟಕ್ಕೆ ಸರ್ಕಾರದ ಜೊತೆ ಕೈಗೂಡಿಸಿದೆ ಎಂದು ಹೇಳಲು ಉತ್ಸುಕತೆ ತೋರುವ ಈ ಪಠ್ಯ ಬೆಂಗಳೂರಿನ ಹೆಮ್ಮೆಯಾದ ಲಾಲ್‌ಬಾಗಿನ ನಿರ್ಮಾಣ ಮತ್ತು ಅಭಿವೃದ್ಧಿಯಲ್ಲಿ ಟಿಪ್ಪೂ ಮತ್ತು ಹೈದರ ಪಾತ್ರದ ಬಗ್ಗೆ ಒಂದು ಸಾಲನ್ನು ಬರೆದಿಲ್ಲ.

ಪ್ರಾದೇಶಿಕ ಇತಿಹಾಸವನ್ನು ಬರೆಯುವಾಗ ಅಲ್ಲಿನ ಸ್ಥಳೀಯ ಜಾನಪದರ ಕಥನಗಳಿಗೆ ಮತ್ತು ವ್ಯಾಖ್ಯಾನಗಳಿಗೆ ಒತ್ತುಕೊಡಬೇಕೆಂಬ ನಿರ್ದೇಶನವಿದ್ದರೂ ಸಂಸ್ಕೃತ, ಭರತನಾಟ್ಯ ಇತ್ಯಾದಿಗಳ ಬಗ್ಗೆ ಒತ್ತಿದೆಯಾಗಲೀ ಮೈಸೂರು ವಿಭಾಗದಲ್ಲಿ ಮಂಟೇಸ್ವಾಮಿ ಎಂಬ ಸಾಂಸ್ಕೃತಿಕ ವಿದ್ಯಮಾನದ ಬಗ್ಗೆ ವಿವರಗಳೇ ಇಲ್ಲ. ಸ್ಥಳೀಯ ಪ್ರದೇಶಗಳ ಹೆಸರುಗಳ ಇತಿಹಾಸ ಬಂದಾಗ ಜಾನಪದದ ಬದಲಿಗೆ ಸಂಸ್ಕೃತಭೂಯಿಷ್ಠ ಇತಿಹಾಸಕ್ಕೆ ಒತ್ತಿದೆ.

ಉದಾಹರಣೆಗೆ ಪುಟ 106ರಲ್ಲಿ ಬೀದರ್‌ನ ಮೂಲ ಹೆಸರು ವಿದುರಾನಗರವೆಂಬ ಶಿಷ್ಟ ಪುರಾಣವಿದೆಯೇ ವಿನಃ ಬೀದರ್ ಎಂದರೆ ಚೈತನ್ಯ ಎಂಬ ಪಾರ್ಸಿ ಪದದ ಮೂಲದ ಪ್ರಸ್ತಾಪವಿಲ್ಲ. ಹಾಗೆಯೇ ಪುಟ 12ರಲ್ಲಿ ಚನ್ನಗಿರಿ ತಾಲ್ಲೂಕಿನಲ್ಲಿ ಜನಪದರಲ್ಲಿ ಸೂಳೆಕೆರೆ ಎಂದು ಪ್ರಖ್ಯಾತವಾಗಿರುವ ಅತಿದೊಡ್ಡ ಕೆರೆಯ ಹೆಸರನ್ನು ಇತ್ತೀಚಿಗೆ ಶುರುವಾದ ಸಂಸ್ಕೃತೀಕರಣದ ಭಾಗವಾಗಿ "ಶಾಂತಿಸಾಗರ" ಎಂದು ಬದಲಾಗಿಸಿದ ಹೆಸರನ್ನಷ್ಟೇ ಸೇರಿಸಲಾಗಿದೆ. ಬೆಳಗಾವಿ ವಿಭಾಗದ ಬ್ರಿಟಿಷ್ ವಿರೋಧಿ ಹೋರಾಟದ ಪ್ರಸ್ತಾಪ ಬಂದಾಗ ಹಲಗಲಿ ಬೇಡರ ಹೆಸರೇ ಇಲ್ಲ. ಉತ್ತರ ಕನ್ನಡದ ಪ್ರವಾಸಿತಾಣಗಳ ಪ್ರಸ್ತಾಪ ಬಂದಾಗ ಗೋಕರ್ಣ ಇತ್ಯಾದಿಗಳ ಪ್ರಸ್ತಾಪವಿದೆಯಾದರೂ ಬಂಡಾಯಗಾರ ಚೆನ್ನಬಸವಣ್ಣನ ಉಳವಿ, ಟಿಪ್ಪುವಿನ ಪ್ರಖ್ಯಾತ ಮಿರ್ಜಾನ ಕೋಟೆಯ ಪ್ರಸ್ತಾಪವೇ ಇಲ್ಲ. ದಕ್ಷಿಣ ಕನ್ನಡದ ಇತಿಹಾಸ ಬಂದಾಗ ಪೋರ್ಚುಗೀಸರ ವಿರುದ್ಧ ರಾಣಿ ಅಬ್ಬಕ್ಕನ ನೇತೃತ್ವದಲ್ಲಿ ಹಿಂದೂ ಮತ್ತು ಮುಸಲ್ಮಾನರು ಜಂಟಿಯಾಗಿ ಬಂಡೆದ್ದ ಇತಿಹಾಸವೇ ನಾಪತ್ತೆ. ಮೈಸೂರಿನ ವಿಭಾಗದ ಮಹನೀಯರ ಪಟ್ಟಿಯಲ್ಲಿ ಪ್ರಬಲ ಶೂದ್ರ ಸ್ವಾಭಿಮಾನಿ ಹೋರಾಟಕ್ಕೆ ಪ್ರೇರಣೆ ನೀಡಿದ ತೇಜಸ್ವಿಯಾಗಲೀ, ಎಂ.ಡಿ.ನಂಜುಂಡಸ್ವಾಮಿ ಯಾಗಲೀ ಕಾಣುವುದೇ ಇಲ್ಲ. ಇಂಥ ಹಲವು ಹತ್ತು ಉದಾಹರಣೆಗಳು 5ನೇ ತರಗತಿಯ ಪಠ್ಯದುದ್ದಕ್ಕೂ ಕಾಣುತ್ತದೆ.

ಕಾಣುವುದಕ್ಕಿಂತ ಕಾಣದೇ ಇರುವುದರಲ್ಲಿ ಸತ್ಯ ಹೆಚ್ಚು ಅಡಗಿರುತ್ತದೆ ಎಂದು ಹೇಳಲಾಗುತ್ತದೆ. ಬಿಜೆಪಿ ಸರ್ಕಾರ ಉದ್ದೇಶಪೂರ್ವಕವಾಗಿ ಮರೆಮಾಚಿರುವ ಇತಿಹಾಸದಲ್ಲೇ ಈ ನಾಡಿನ ನಿಜವಾದ ಇತಿಹಾಸವಿದೆ ಎಂದರೂ ತಪ್ಪಿಲ್ಲ. ವೈದಿಕಶಾಹಿಯನ್ನು ವೈಭವೀಕರಿಸಿ ಅದನ್ನೇ ಭಾರತೀಯ ಎಂದು ಬೋಧಿಸುವುದೂ, ವೈದಿಕ ಶ್ರೇಣೀಕರಣದ ವಿರುದ್ಧ ಬಂಡೆದ್ದ ಬೌದ್ಧ, ಜೈನ ಮತ್ತಿತರ ಹಲವಾರು ಜನಪದರ ಬಂಡಾಯಗಳನ್ನು ಪರಿಚಯಿಸುವಾಗ ಅವನ್ನು ಹಿಂದೂ ಧರ್ಮದ ಶಾಖೆಗಳೆಂಬಂತೆಯೇ ಪರಿಚಯಿಸಿ ಅವುಗಳ ಮೂಲ ಧಾತುವಾದ ವರ್ಣಾಶ್ರಮ ಪದ್ಧತಿ ವಿರೋಧಿ ಬಂಡಾಯವನ್ನು ಮರೆಮಾಚುವುದು, ಟಿಪ್ಪು-ಹೈದರ್ ನಂಥವರು ಪರಿಚಯಿಸಿದ ಕ್ರಾಂತಿಕಾರಕ ಸುಧಾರಣೆಗಳ ಪ್ರಸ್ತಾಪವನ್ನು ಮಾಡದೆ ಅವರನ್ನು ಕೇವಲ ಮತಾಂಧ ಆಕ್ರಮಣಕಾರರೆಂಬಂಥ ರೀತಿ ಇತಿಹಾಸವನ್ನು ಕಟ್ಟಿಕೊಡುವುದು, ಸ್ಥಳೀಯ ಮತ್ತು ಜನಪದರ ಸಂಸ್ಕೃತಿ ಮತ್ತು ದೃಷ್ಟಿಕೋನಕ್ಕೆ ಪ್ರಾಶಸ್ತ್ಯವನ್ನೇ ಕೊಡದೆ ಕೇವಲ ಸಂಸ್ಕೃತಭೂಯಿಷ್ಟ ವೈದಿಕ ನಿಲುವಿನ ಶಿಷ್ಟ ಸಂಸ್ಕೃತಿಗೆ ಒತ್ತುಕೊಡುವುದು, ಅರಸ-ಜನರ ಸಂಘರ್ಷವನ್ನು ಧರ್ಮದ ಆಧಾರದಲ್ಲಿ ಪರಿಗಣಿಸುವುದು, ಆರ್ಯರು ಶ್ರೇಷ್ಠರು ಮತ್ತು ಈ ದೇಶದ ಮೂಲನಿವಾಸಿಗಳೆಂಬ ಸುಳ್ಳನ್ನು ಬಿತ್ತರಿಸುವುದು...

ಇಂತಹ ಹಲವಾರು ಹುನ್ನಾರಗಳ ಮೂಲಕ 5ನೇ ತರಗತಿಯಲ್ಲಿ ಓದುವ ಮಕ್ಕಳ ತಲೆಯಲ್ಲಿ ಹಿಂದೂತ್ವವಾದಿ ಬ್ರಾಹ್ಮಣ ಮೇಲರಿಮೆಯ ರಾಡಿಯನ್ನು ಮತ್ತು ಕೋಮುದ್ವೇಷವನ್ನು ತುಂಬುವ ಪಠ್ಯವನ್ನು ಬಿಜೆಪಿ ಸರ್ಕಾರ ಸಿದ್ಧಪಡಿಸಿದೆ. ಈಗಾಗಲೇ ಹೇಳಿದಂತೆ ಬಾಬಾಬುಡನ್ ಗಿರಿಯಲ್ಲಿನ ಧಾರ್ಮಿಕ ಸ್ವರೂಪ ಕುರಿತ ವಿವಾದ ಸುಪ್ರೀಂ ಕೋರ್ಟಿನಲ್ಲಿದ್ದರೂ ಅದು ದತ್ತಪೀಠವೆಂಬ ಸುಳ್ಳನ್ನು ಬಿತ್ತರಿಸಿ ಇಡೀ ಪಠ್ಯಪುಸ್ತಕ ರಚನಾ ಸಮಿತಿ ಮತ್ತು ಸರ್ಕಾರ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕೆಂಬ ಕೋರ್ಟಿನ ಆದೇಶವನ್ನು ಉಲ್ಲಂಘಿಸಿದೆ.

ಹೀಗಾಗಿ ಈ ಪಠ್ಯ ಮಕ್ಕಳ ಮತ್ತು ಸಮಾಜದ ಬೌದ್ಧಿಕ ಆರೋಗ್ಯವನ್ನು ಹದಗೆಡಿಸಿ ಭಾವೀ ಭಾರತದ ಪ್ರಜೆಯ ತಲೆಯಲ್ಲಿ ಕೋಮು ವಿಷ ಮತ್ತು ಮೇಲರಿಮೆ ಮತ್ತು ಕೀಳರಿಮೆಗಳ ಸಂಘರ್ಷವನ್ನು ಹುಟ್ಟುಹಾಕುತ್ತದೆ. ಅಲ್ಲದೆ ಪ್ರತಿಯೊಂದು ಪಾಠದಲ್ಲೂ ಈ ಪಠ್ಯ ನ್ಯಾಷನಲ್ ಕರಿಕುಲರ್ ಫ್ರೇಂವರ್ಕ್ ಮತ್ತು ಡಿಎಸ್‌ಇಆರ್‌ಟಿ ಕೊಟ್ಟ ಮಾರ್ಗದರ್ಶಿ ಸೂತ್ರಗಳನ್ನೂ ಮತ್ತು ನಿರ್ದೇಶನಗಳನ್ನೂ ಸಾರಾಸಗಟು ಉಲ್ಲಂಘಿಸುತ್ತದೆ.

ಈ ಉಲ್ಲಂಘನೆ ಯಾವುದೋ ಒಂದು ಹೆಸರಿನ ಸೇರ್ಪಡೆಯಲ್ಲೋ ಅಥವಾ ಬಿಟ್ಟಿರುವುದರಲ್ಲೋ ಇಲ್ಲ. ಬದಲಿಗೆ ಈ ಪಠ್ಯ ರಚನೆಯ ಧಾರೆಯಲ್ಲೇ ಅದು ಅಡಕವಾಗಿದೆ. ಆದ್ದರಿಂದ ಒಂದೆರಡು ಸೇರ್ಪಡೆ ಅಥವಾ ತೆಗೆದುಹಾಕುವ ಕ್ರಮಗಳು ಕೇವಲ ಕಣ್ಣೊರೆಸುವ ಕೆಲಸ ಮಾತ್ರ ಆಗುತ್ತವೆ. ಆದ್ದರಿಂದ ಇಡೀ ಪಠ್ಯವನ್ನೇ ವಾಪಸ್ ಪಡೆಯಲು ಸರ್ಕಾರವನ್ನು ಆಗ್ರಹಿಸಿ ದೊಡ್ಡ ಹೋರಾಟವನ್ನು ಕಟ್ಟಬೇಕಿದೆ. ಅದೇ ರೀತಿ ಪಠ್ಯ ಪುಸ್ತಕ ರಚನೆಗೆ ವೃತ್ತಿ ಮತ್ತು ಕೌಶಲ್ಯ ಬಲ್ಲ ಇತಿಹಾಸಕಾರರನ್ನು ಪಠ್ಯ ರಚಿಸಲು ಮತ್ತು ಪರಿಶೀಲಿಸಲು ನೇಮಕ ಮಾಡಿಕೊಳ್ಳುವಂತೆ ಒತ್ತಾಯಿಸಬೇಕಿದೆ. ಹಾಗೂ ಸಂಘಪರಿವಾರದ ಇತಿಹಾಸ ದಾಖಲಾಗುವುದನ್ನು ಖಾತರಿಪಡಿಸಿಕೊಳ್ಳಲು ರಚಿಸಲಾಗಿರುವ ಮುಡಿಂಬಡಿತ್ತಾಯರವರ ಮುಖ್ಯ ಸಂಯೋಜಕ ಹುದ್ದೆಯೂ ರದ್ದಾಗಬೇಕೆಂದೂ ಅದರ ಬದಲಿಗೆ ಪರಿಣಿತರ ಪರಿಶೀಲನೆ ಮತ್ತು ಸಾರ್ವಜನಿಕ ಚರ್ಚೆಯ ನಂತರವೇ ಪಠ್ಯವನ್ನು ಜಾರಿಗೆ ತರಬೇಕೆಂದೂ ಆಗ್ರಹಿಸಬೇಕಿದೆ.

ಏಕೆಂದರೆ ವಿಕೃತ ಇತಿಹಾಸದ ಬುನಾದಿಯ ಮೇಲೆ ಆರೋಗ್ಯಕರ ಭವಿಷ್ಯವನ್ನು ನಿರ್ಮಿಸಲು ಸಾಧ್ಯವಿಲ್ಲ.

...8 ರೂ.ನಲ್ಲಿ ಬಡ ಭಾರತೀಯರಾಗಿ



• ಗೌರಿ ಲಂಕೇಶ್
editorlankesh@gmail.com

...ನಮ್ಮ ದೇಶದ 'ಸಾಮಾನ್ಯರು' ಮತ್ತು 'ಬಡವರು' ಹೇಗೆ ...ಬದುಕುತ್ತಾರೆ? ಅವರ ನಿತ್ಯದ ಕಾಳಜಿಗಳೇನು? ಮೇಲು ...ತ್ತು ಮಧ್ಯಮ ವರ್ಗದವರು ತಮ್ಮ 'ಹಕ್ಕು' ಎಂದು ಈಗ ...ಸಿರುವ ಹಲವಾರು ಸವಲತ್ತುಗಳಿಲ್ಲದೆ ಈ ಸಾಮಾನ್ಯರು ...ತ್ತು ಬಡವರು ಬದುಕುವುದು ಹೇಗೆ? ಇಂತಹ ಹಲವು ...ಗಳನ್ನಿಟ್ಟುಕೊಂಡು ಕೆಲವು ತಿಂಗಳ ಹಿಂದೆ ಇಬ್ಬರು ...ವಕರು ಒಂದು ಸರಳವಾದ ಪ್ರಯೋಗಕ್ಕೆ ತಮ್ಮನ್ನು ...ಕೊಂಡರು. ಆದೇಂತಹ ಪ್ರಯೋಗವೆಂದರೆ ನಮ್ಮ ದೇಶದ ...ಟ್ಯಾಂತರ ಜನ ಹೇಗೆ ಕಡಿಮೆ ಆದಾಯದಲ್ಲಿ ...ದುಕುತ್ತಿದ್ದಾರೋ ಹಾಗೆಯೇ ತಾವೂ ಒಂದು ತಿಂಗಳ ...ಟ್ಟಿಗೆ ಕಡಿಮೆ ಹಣದಲ್ಲಿ ಬದುಕಿ ನೋಡುವುದು.

ಆ ಇಬ್ಬರು ಯುವಕರಲ್ಲಿ ಒಬ್ಬನ ಹೆಸರು ತುಷಾರ್ ...ಷ್. ಹರಿಯಾಣಾದ ಪೊಲೀಸ್ ಅಧಿಕಾರಿಯೊಬ್ಬರ ...ಗನಾದ ತುಷಾರ್ ಎಲ್ಲ ಸವಲತ್ತುಗಳೊಂದಿಗೆ ...ದವನು; ಅಮೆರಿಕದಲ್ಲಿ ವಿದ್ಯಾಭ್ಯಾಸ ಮಾಡಿ ...ತರರಾಷ್ಟ್ರೀಯ ಬ್ಯಾಂಕ್ ...ದರಲ್ಲಿ ಕೆಲಸ ಮಾಡುತ್ತಿದ್ದವನು. ...ನ್ನ ಮೂವತ್ತು ವರ್ಷ ವಯಸ್ಸಿನ ...ಬಿ ರದ ತುಷಾರ್ ...ಾಪುರದಲ್ಲಿ ಕೆಲಸ ...ಡುತ್ತಿದ್ದಾಗ ತಿಂಗಳಿಗೆ ...ಂತರ ರೂಪಾಯಿಗಳ ಸಂಬಳ ...ಯುತ್ತಿದ್ದ, ಐಷಾರಾಮಿ ...ಗಲೆಯಲ್ಲಿ ವಾಸಿಸು ತ್ತಿದ್ದ ...ೀಜಿಗಾಗಿ ಸ್ಕೂಬಾ ಡೈವಿಂಗ್ ...ಡುತ್ತಿದ್ದ.

ಇನ್ನೊಬ್ಬನ ಹೆಸರು ಮಾಥ್ಯೂ ...ಯನ್. ಕೇರಳ ಮೂಲದ ತಂದೆ ...ಯಿಗೆ ಜನಿಸಿದ ಮಾಥ್ಯೂ ತನ್ನ ...ಲ್ಯವನ್ನು ಕಳೆದದ್ದು, ವಿದ್ಯೆ ಪಡೆ ...ದ್ದು ಎಲ್ಲಾ ಅಮೆರಿಕದಲ್ಲಿ. ಈತ ...ಡ ಅಮೆರಿಕದ ಒಂದು ಕಂಪನಿ ...ಲ್ಲಿ ಕೆಲಸ ಮಾಡುತ್ತಾ ಐಶ್ವರ್ಯದ ...ಪ್ಪತ್ತಿಗೆಯಲ್ಲಿ ಜೀವನ ನಡೆಸು ...ವನು.



ಈ ಯುವಕರಿಬ್ಬರಿಗೂ ಅದ್ಯಾಕೋ ಏನೋ, ತಾವು ...ರತದ ಜನರಿಗೆ ಏನನ್ನಾದರೂ ಕೊಡಬೇಕು ಅನ್ನಿಸಿತು. ...ರೆ ಅದನ್ನು ಮಾಡುವುದು ಹೇಗೆ? ಆಗ ಅವರಿಗೆ ...ಚಿದ್ದೇ ಸರ್ಕಾರ ಪ್ರಾರಂಭಿಸಿದ್ದ ಆಧಾರ್ ಗುರುತು ಚೀಟಿ ...ೀಜನೆ. ಈ ಯೋಜನೆಗಾಗಿ ಕೆಲಸ ಮಾಡಿದರೆ ತಮ್ಮ ...ಕ್ತಿ ಈಡೇರುತ್ತದೆಂದು ಭಾವಿಸಿದ ಇವರಿಬ್ಬರು ತಮಗೆ ...ದೇಶಿ ಬ್ಯಾಂಕ್ ಮತ್ತು ಸಂಸ್ಥೆಗಳಲ್ಲಿ ಬರುತ್ತಿದ್ದ ಸಂಬಳಕ್ಕಿಂತ ...ಹಳಷ್ಟು ಕಡಿಮೆ ಸಂಬಳ ನೀಡುವ ಆಧಾರ್ ...ೋಜನೆಯನ್ನು ಸೇರಿಕೊಂಡರು. ಅಲ್ಲಿಯತನಕ ...ರಿಚಿತರಾಗಿದ್ದ ಇವರಿಬ್ಬರೂ ಬೆಂಗಳೂರಿಗೆ ಬಂದು ಇಲ್ಲಿ ...ತೆಗೂಡಿ ಕೆಲಸ ಮಾಡಲು ಪ್ರಾರಂಭಿಸಿದರಲ್ಲದೆ, ಇಬ್ಬರೂ ...ಹಿತರಾಗಿ ಒಂದೇ ಫ್ಲಾಟ್‌ಅನ್ನು ಬಾಡಿಗೆಗೆ ಪಡೆದರು. ಈ ...ದೆ ಅವರಿಗೆ ಬರುತ್ತಿದ್ದ ವೇತನಕ್ಕಿಂತ ಕಡಿಮೆ ಸಂಬಳ ...ುತ್ತಿದ್ದರೂ ಅವರು ತಿಂಗಳಿಗೆ ಸುಮಾರು ಒಂದು ಲಕ್ಷ ...ಪಾಯಿಗಳ ಆದಾಯವನ್ನು ಕಾಣುತ್ತಿದ್ದರು...

ಆಧಾರ್ ಯೋಜನೆಯೊಂದಿಗಿನ ಅವರಿಬ್ಬರ ಕಾಂಟ್ರಾಕ್ಟ್ ...ಗಿಯುತ್ತಿದ್ದಂತೆ ಅವರಿಗೆ ಎರಡು ಸರಳ ಸತ್ಯಗಳು ...ವಾಗಿದ್ದವು. ಅದೇನೆಂದರೆ, ಮೊದಲನೆಯದಾಗಿ ...ಮಾನ್ಯ ಭಾರತೀಯರ' ಬಗೆಗಿನ ತಮ್ಮ ಕಾಳಜಿ ಹಾಗೆಯೇ ...ಿ ದಿದೆ ಎಂಬುದು, ಎರಡನೆಯದಾಗಿ ತಾವು ಭಾರತ ಮೂಲದವರಾಗಿದ್ದರೂ, ತಾವು ಭಾರತದಲ್ಲೇ ವಾಸಿಸುತ್ತಿದ್ದರೂ ತಮಗಿನ್ನೂ ಭಾರತದ ಸಾಮಾನ್ಯ ಜನರ ಬದುಕಿನ ಪರಿಚಯವೇ ಆಗಿಲ್ಲ ಎಂಬುದು. ಬೇರೆಯವರಾಗಿದ್ದರೆ ಈ ಕೊರತೆಯನ್ನು ನೀಗಿಸಿಕೊಳ್ಳಲು ಹಲವಾರು 'ಸಾಮಾನ್ಯ ಭಾರತೀಯರನ್ನು' ಭೇಟಿ ಮಾಡಿ ಅವರ ಜೀವನದ ಕೊರತೆಗಳ ಬಗ್ಗೆ ಚರ್ಚಿಸುತ್ತಿದ್ದರೇನೊ. ಆದರೆ ಇವರಿಬ್ಬರು ಹಾಗೆ ಮಾಡಲಿಲ್ಲ, ಬದಲಾಗಿ ಒಂದು ದಿನ ಮಾಥ್ಯೂ ಸೂಚಿಸಿದಂತೆ ತಾವು ಕೂಡ ಸಾಮಾನ್ಯರ ಆದಾಯದ ಮಿತಿಯಲ್ಲಿ ಒಂದು ತಿಂಗಳ ಮಟ್ಟಿಗೆ ಬದುಕುವ ಮೂಲಕ ಕೋಟ್ಯಾಂತರ ಭಾರತೀಯರ ಬದುಕನ್ನು ಅರಿಯಲು ಮುಂದಾದರು.

ಆದರೆ ಸಾಮಾನ್ಯ ಭಾರತೀಯನ ತಿಂಗಳ ಆದಾಯ ವೆಷ್ಟು? ಸರ್ಕಾರಿ ದಾಖಲೆಗಳನ್ನು ಆಧರಿಸಿ ಇವರಿಬ್ಬರು ಓರ್ವ 'ಸಾಮಾನ್ಯ ಭಾರತೀಯನ' ತಿಂಗಳ ಆದಾಯ ಸುಮಾರು **4,500** ರೂಪಾಯಿ ಎಂದು ಲೆಕ್ಕಹಾಕಿದರು. ಈ ನಾಲ್ಕೂವರೆ ಸಾವಿರ ರೂಪಾಯಿಗಳಲ್ಲಿ ಮೂರನೆ ಒಂದು ಭಾಗವನ್ನು ಮನೆ ಬಾಡಿಗೆಗೆ ಎತ್ತಿಟ್ಟರೆ ಇತರೆ ಎಲ್ಲ ಅಗತ್ಯಗಳಿಗೆ ಉಳಿಯುವುದು ಮೂರು ಸಾವಿರ ರೂಪಾಯಿಗಳು. ಅಂದರೆ ದಿನಕ್ಕೆ ಕೇವಲ ನೂರು ರೂಪಾಯಿಗಳು. ಇಂತಹ ಒಂದು ಲೆಕ್ಕಾಚಾರ ಮಾಡಿದ ನಂತರ ಇವರಿಬ್ಬರು ಒಂದು ತಿಂಗಳನ್ನು ದಿನಕ್ಕೆ ನೂರು ರೂಪಾಯಿಗಿಂತಲೂ ಹೆಚ್ಚು ವೆಚ್ಚ ಮಾಡದೆ ಬದುಕುವ ನಿರ್ಧಾರವನ್ನು ಮಾಡಿದರು. ಅಷ್ಟೇ ಅಲ್ಲ, ತಮ್ಮ ಐಷಾರಾಮಿ ಫ್ಲಾಟ್‌ನಲ್ಲಿ ಜೀವಿಸುತ್ತಾ ದಿನಕ್ಕೆ ಕೇವಲ ನೂರು ರೂಪಾಯಿಗಳಲ್ಲಿ ಬದುಕಿದರೆ ಜನಸಾಮಾನ್ಯರ ಬದುಕಿನ ಇತರೆ ಕಷ್ಟಗಳು ಅರಿವಾಗುವುದಿಲ್ಲ ಎಂಬ ಕಾರಣಕ್ಕೆ ತಮ್ಮ ಮನೆಯ ಕೆಲಸ ಮಾಡುತ್ತಿದ್ದ ಮಹಿಳೆಯರು ಸಂಸಾರ ವಾಸಿಸುತ್ತಿದ್ದ ಆರಡಿ/ಹತ್ತಡಿ, ಮನೆಯಲ್ಲಿ ಕೆಲದಿನ ವಾಸಮಾಡಿದರು.

ಮೊದಲ ದಿನವೇ ಕೇವಲ ನೂರು ರೂಪಾಯಿಗಳು ನೆಮ್ಮದಿಯ ಬದುಕಿಗೆ ಕಿಂಚಿತ್ತೂ ಸಾಲದು ಎಂಬುದು ಅರಿವಾಯಿತು. ಆಹಾರವೇ ಬದುಕಿಗೆ ಪ್ರಮುಖವಾಗಿರುವುದರಿಂದ ಅವರು ಅಷ್ಟು ಹಣದಲ್ಲೇ ಅಂದಿನ ಊಟ ಮಾಡಲು ಯತ್ನಿಸಿದರು. ಅಲ್ಲಿಯತನಕ ಅವರಿಗೆ ರೂಢಿ ಆಗಿದ್ದ ಹೋಟೆಲ್‌ಗಳಿರಲಿ, ಡಾಬಾಗಳು ಕೂಡ ದುಬಾರಿ ಎಂದು ಗೊತ್ತಾಯಿತಲ್ಲದೆ ಮನೆಯಲ್ಲಿ ಮಾಡುವ ಅಡುಗೆಯಲ್ಲೂ ಮಾಂಸ, ತುಪ್ಪ, ಬೆಣ್ಣೆ, ಹಾಲು, ಮೊಸರು ಮತ್ತು ತರಕಾರಿಗಳು ತಮ್ಮ ಕೈಗೆಟುಕದಂತಹ ವಸ್ತುಗಳು ಎಂದು ಗೊತ್ತಾಯಿತು.

ಯುವಕರಾದ ಇವರಿಬ್ಬರಿಗೂ ವಯಸ್ಸಿಗೆ ಸಹಜವಾಗಿ ಹೆಚ್ಚು ಹಸಿವು. ಆಗ ಅವರ ನೆರವಿಗೆ ಬಂದದ್ದು ಕಡಿಮೆ ದರದಲ್ಲಿ ಸಿಗುವ ಆದರೆ ಹೆಚ್ಚು ಪ್ರೋಟೀನ್‌ಗಳನ್ನು ಹೊಂದಿರುವ ಸೋಯಾ, ಪಾರ್ಲೆ-ಜಿ ಬಿಸ್ಕತ್ತುಗಳು ಮತ್ತು ಬಾಳೆ ಹಣ್ಣು.

ದಿನದ ಬಜೆಟ್ಟಿನಲ್ಲಿ ವಿದ್ಯುತ್ ದರ ಕೂಡ ಸೇರಿದ್ದರಿಂದ ಅವರು ಪ್ರತಿದಿನ ಕೇವಲ ಐದಾರು ಗಂಟೆಗಳ ಕಾಲ ಮಾತ್ರ ದೀಪವನ್ನು ಉರಿಸುತ್ತಿದ್ದರು. ಬಟ್ಟೆ ಒಗೆಯುವುದಿರಲಿ ಸ್ನಾನ ಮಾಡುವುದೂ ದುಬಾರಿ ಆಯಿತು. ಆಗ ಅವರು ಒಂದು ಲೈಫ್‌ಬಾಯ್ ಸೋಪನ್ನು ಖರೀದಿಸಿ ಅದನ್ನು ಎರಡು ತುಂಡು ಮಾಡಿ ಹಂಚಿಕೊಂಡರು.

ಇದೆಲ್ಲದರಷ್ಟೇ ಮುಖ್ಯವಾಗಿ ತಮ್ಮ ಈ 'ಸಾಮಾನ್ಯರ' ಬದುಕಿನಲ್ಲಿ ತಾವು ದಿನಕ್ಕೆ ಐದು ಕಿಲೋಮೀಟರ್‌ಗಿಂತ ಹೆಚ್ಚು ದೂರ ಸರ್ಕಾರಿ ಬಸ್‌ಗಳಲ್ಲೂ ಪ್ರಯಾಣಿಸಲಾಗುವುದಿಲ್ಲ (ಕಾರಣ ಬಸ್ ಟಿಕೆಟ್ ದುಬಾರಿ ಆಗಿರುವುದು), ಐದು ಕಿಲೋಮೀಟರ್‌ಗಿಂತ ಹೆಚ್ಚು ದೂರ ಹೋಗಬೇಕಿದ್ದರೆ ತಾವು ಕಾಲು ನಡಿಗೆಯಲ್ಲೇ ಹೋಗಬೇಕು ಎಂದು ಅರ್ಥವಾಯಿತು. ಇದೆಲ್ಲದರಿಂದ ಅವರಿಬ್ಬರ ಜಗತ್ತು ಎಲ್ಲ ರೀತಿಯಿಂದಲೂ ಕಿರಿದಾಗುತ್ತಾ ಹೋಯಿತು.

ಹೀಗೆ ಊಟಕ್ಕೆ, ಸಂಪರ್ಕಕ್ಕೆ, ಇತರೆ ಕನಿಷ್ಠ ಸವಲತ್ತುಗಳಿಗೆ ಅವರು ಪರದಾಡುತ್ತಿದ್ದಾಗ ಅವರಿಬ್ಬರನ್ನು ಕಾಡಿದ ಒಂದು ಮುಖ್ಯ ಪ್ರಶ್ನೆ ಯಾವುದೆಂದರೆ ಅಕಸ್ಮಾತ್ ತಮ್ಮ ಆರೋಗ್ಯ ಕೈಕೊಟ್ಟರೆ ಏನು ಮಾಡುವುದೆಂದು. ಅಂತಹ ತುರ್ತು ಪರಿಸ್ಥಿತಿ ಉದ್ಭವಿಸಿದ್ದರೆ ಈ ಯುವಕರು ತಮ್ಮ ಈ ಪ್ರಯೋಗವನ್ನು ಬಿಟ್ಟು ಅತ್ಯುತ್ತಮ ವೈದ್ಯಕೀಯ ಸೇವೆಯನ್ನು ಪಡೆಯುತ್ತಿದ್ದರು ಎಂಬುದು ಬೇರೆ ಮಾತು. ಆದರೆ ನಿಜವಾಗಲೂ 'ಸಾಮಾನ್ಯ'ರ ಆರೋಗ್ಯ ಕೈಕೊಟ್ಟರೆ ಅವರಿಗೇನು ಗತಿ ಎಂಬ ಪ್ರಶ್ನೆ ಈ ಯುವಕರನ್ನು ಕಾಡಿದ್ದು ನಿಜ.

ತುಷಾರ್ ಮತ್ತು ಮಾಥ್ಯೂ 'ಸಾಮಾನ್ಯ ಭಾರತೀಯ'ನ ಬದುಕನ್ನು ಅರಿಯುವ ಇಂತಹ ಪ್ರಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾಗಲೇ ಭಾರತದ ಪ್ರಧಾನಿ ಮನಮೋಹನ್ ಸಿಂಗ್ ಅವರ ಆಲ್ಟರ್ ಈಗೋದಂತಿರುವ ಯೋಜನಾ ಆಯೋಗದ ಮುಖ್ಯಸ್ಥ ಮಾಂಟೆಕ್ ಸಿಂಗ್ ಆಹ್ಲುವಾಲಿಯಾ ಅವರು ಸುಪ್ರೀಂಕೋರ್ಟ್ ಮುಂದೆ ಒಂದು ಪ್ರಮಾಣಪತ್ರವನ್ನು ಸಲ್ಲಿಸಿದರು. ಈಗಾಗಲೇ ಎಲ್ಲರಿಗೂ ಗೊತ್ತಿರುವಂತೆ ಆ ಪ್ರಮಾಣಪತ್ರದಲ್ಲಿ ಭಾರತದ ನಗರಗಳಲ್ಲಿ ವಾಸಿಸುತ್ತಿರುವ ಜನರ ದಿನನಿತ್ಯದ ಆದಾಯ **46** ರೂಪಾಯಿ ಆಗಿದ್ದರೆ, ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿ **26** ರೂಪಾಯಿ ಆಗಿದ್ದರೆ ಅವರನ್ನು ಬಡವರೆಂದು ಪರಿಗಣಿಸಲಾಗುವುದಿಲ್ಲ ಎಂದು ಹೇಳಲಾಗಿತ್ತು.


ಆಗ ಇದೇ ತುಷಾರ್ ಮತ್ತು ಮಾಥ್ಯೂ ತಮ್ಮ ಒಂದು ತಿಂಗಳ ಈ ಪ್ರಯೋಗದ ಕೊನೆ ವಾರದ ಏಳು ದಿನಗಳನ್ನು ದಿನಕ್ಕೆ **26** ರೂಪಾಯಿ ಗಳನ್ನು ಮಾತ್ರ ವ್ಯಯ ಮಾಡುವ ಮೂಲಕ ಬದುಕಿನೋಡಲು ನಿರ್ಧರಿಸಿದರು. ಅದಕ್ಕೆಂದು ಅವರಿಬ್ಬರು ಕೇರಳದಲ್ಲಿರುವ ಕರುಕಾಶಲ್ ಎಂಬ ಮಾಥ್ಯೂನ ಅಜ್ಜಿಯ ಹಳ್ಳಿಗೆ ಹೋದರು. ಅಲ್ಲಿಯೂ **26** ರೂಪಾಯಿಗಳಲ್ಲಿ ಮೂರನೆ ಒಂದು ಭಾಗವಾದ ಎಂಟು ರೂಪಾಯಿಗಳನ್ನು ಬಾಡಿಗೆ ಲೆಕ್ಕದಲ್ಲಿ ಬದಿಗಿಟ್ಟು ದಿನಕ್ಕೆ **18** ರೂಪಾಯಿಗಳಲ್ಲಿ ಜೀವಿಸಿದರು. ಅವರಿಗೆ ಅಷ್ಟು ಕಡಿಮೆ ಹಣಕ್ಕೆ ಅವರಿಬ್ಬರಿಗೂ ಉಣ್ಣಲು ಸಿಗುತ್ತಿದ್ದದ್ದು ಕುಸುಬಲಕ್ಕಿ, ಗೆಣಸು ಮತ್ತು ಹಾಲಿಲ್ಲದ ಕಪ್ಪು ಟೀ ಮಾತ್ರ. ಎಲ್ಲಿಗೇ ಹೋದರು ನಡೆದೇ ಹೋಗಬೇಕಿತ್ತು, ತಮ್ಮ ಬಟ್ಟೆ ಒಗೆಯಲೂ ಕಾಸಿಲ್ಲದಂತಾಗಿತ್ತು. ಅವರಿಬ್ಬರೂ ಪ್ರತಿದಿನವನ್ನು ಊಟದ ಬಗ್ಗೆ ಕನಸು ಕಾಣುವುದರಲ್ಲೇ ಕಳೆದರು.

'ಸಾಮಾನ್ಯ ಭಾರತೀಯ'ನಾಗಿ ದಿನಕ್ಕೆ ನೂರು ರೂಪಾಯಿಗಳೊಳಗೆ, ಆನಂತರ ದಿನಕ್ಕೆ **26** ರೂ.ಗಳೊಳಗೆ ಜೀವಿಸಲು ಯತ್ನಿಸಿ ಇವರ ಒಂದು ತಿಂಗಳ ಪ್ರಯೋಗ ಅಂತ್ಯಗೊಂಡಾಗ ಇಬ್ಬರೂ ಒಟ್ಟು ಒಂಬತ್ತು ಕೇಜಿ ತೂಕವನ್ನು ಕಳೆದುಕೊಂಡಿದ್ದರೂ 'ಅಪಾರ ಅನುಭವವನ್ನಂತೂ ಪಡೆದಿದ್ದರು.

ಕಳೆದ ದೀಪಾವಳಿ ಹೊತ್ತಿಗೆ ತಮ್ಮ ನಾರ್ಮಲ್ ಬದುಕಿಗೆ ಇವರಿಬ್ಬರು ಹಿಂದಿರುಗಿದಾಗ ತಮ್ಮ ಬ್ಲಾಗ್‌ನಲ್ಲಿ ತಮ್ಮ ಸ್ನೇಹಿತರಿಗೆ ಹೀಗೆ ಬರೆದರು:

"ನಾವು ನಮ್ಮ 'ನಾರ್ಮಲ್' ಜೀವನವನ್ನು ಮರಳಿ ಪಡೆದಿರುವುದರ ಬಗ್ಗೆ ನಮಗೆ ಆನಂದವಾಗುತ್ತಿದೆ ಎಂದು ಹೇಳಲು ಆಶಿಸುತ್ತೇವೆ ಎಂದುಕೊಂಡಿದ್ದೆವು. ಎರಡು ದಿನಗಳ ಹಿಂದೆ ನಾವು ತಮ್ಮ ಪ್ರಯೋಗವನ್ನು ಅಂತ್ಯಗೊಳಿಸಿದಾಗ ಸೇವಿಸಿದ ಊಟವು ನಾವು ಕಳೆದ ಒಂದು ತಿಂಗಳಿನಿಂದ ಕನಸು ಕಾಣುತ್ತಿದ್ದ ಭೂರಿ ಭೋಜನದಂತಿತ್ತು ಎಂದು ಹೇಳಲೂ ಆಶಿಸುತ್ತೇವೆ ಎಂದುಕೊಂಡಿದ್ದೆವು. ನಮ್ಮ ಅತಿಥೇಯರು ತುಂಬ ಪ್ರೀತಿಯಿಂದ ಮಾಡಿ ಕೊಟ್ಟ ಆ ಊಟವು ನಮ್ಮ ಜೀವನದಲ್ಲಿ ನಾವು ಸೇವಿಸಿರುವ ಅತಿ ರುಚಿಕರವಾದ ಊಟವಾಗಿತ್ತು, ಆದರೆ ಪ್ರತಿಯೊಂದು ತುತ್ತೂ ನಮ್ಮ ಗಂಟಲಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತಿತ್ತು, ಯಾಕೆಂದರೆ ಅಂತಹ ಒಂದು ಸಾಮಾನ್ಯ ಊಟ ಕೂಡ ನಮ್ಮ ದೇಶದ **40** ಕೋಟಿ ಜನರಿಗೆ ಕನಸಿನ ಊಟವಾಗಿಯೇ ಉಳಿದಿದೆ ಎಂಬ ಅರಿವು ನಮ್ಮನ್ನು ಕಾಡುತ್ತಿತ್ತು, ನಾವಾದರೋ ನಮ್ಮ ಸುಖಕರ ಜೀವನಕ್ಕೆ ಹಿಂದಿರುಗಬಹುದು... ಆದರೆ ಆ ಕೋಟ್ಯಾಂತರ ಜನ ಇನ್ನೂ ಬದುಕುಳಿಯಲು ಆ ರಣರಂಗದಲ್ಲಿ ಹೋರಾಡುತ್ತಿದ್ದಾರೆ. ಆ ರಣರಂಗದಲ್ಲಿ ತುಂಬಾ ಕಠಿಣ ಆಯ್ಕೆಗಳು ಮತ್ತು ಎತ್ತರದ ಸವಾಲುಗಳಿವೆ. ಅವರ ಬದುಕಿನಲ್ಲಿ ಸ್ವಾತಂತ್ರದ ಅರ್ಥ ಕುಗ್ಗಿಹೋಗಿದ್ದು ಹಸಿವಿನ ಪ್ರಶ್ನೆಯೇ ಮುಖ್ಯವಾಗಿದೆ..."

ಇಂಗ್ಲಿಷ್‌ನಲ್ಲಿ **put yourself in others' shoes** ಎಂಬ ವಾಕ್ಯ ಇದೆ. ಅದರರ್ಥ ನೀವು ಬೇರೆಯವರ ಸ್ಥಾನದಲ್ಲಿ ನಿಮ್ಮನ್ನು ಇಟ್ಟುಕೊಂಡು ನೋಡಿದಾಗ ಬೇರೆಯವರ ಬದುಕು, ಆಶಯ, ಕಷ್ಟನಷ್ಟ, ಎಲ್ಲವೂ ನಿಮಗೆ ಅರ್ಥವಾಗುತ್ತದೆ ಎಂದು. ಈ ಯುವಕರಿಬ್ಬರು ಒಂದು ರೀತಿಯಲ್ಲಿ ತಮ್ಮನ್ನು ಈ ದೇಶದ ಸಾಮಾನ್ಯರ, ಬಡವರ ಸ್ಥಾನದಲ್ಲಿಟ್ಟುಕೊಂಡು ನೋಡಿದ್ದಾರೆ. ಇವರ ಪ್ರಯೋಗ ಕುತೂಹಲಕಾರಿ ಆಗಿದ್ದರಿಂದ ಅದರ ಬಗ್ಗೆ ಇಲ್ಲಿ ಹಂಚಿಕೊಂಡಿದ್ದೇನೆ...




ಏನಿದು ಬೀದರ್‌ನಲ್ಲಿ 'ಇರಾನಿ ಕಾಲೊನಿ'? ಬೀದರ್‌ಗೂ ಇರಾನ್‌ಗೂ ಎಂತಹ ವಿಚಿತ್ರ ಸಂಬಂಧ? ಪೊಲೀಸರು ಇವರ ಮೇಲೆ ಮುಗಿಬೀಳಲು ಏನು ಕಾರಣ? ಎಂಬ ಕುತೂಹಲಕಾರಿ ಪ್ರಶ್ನೆಗಳು ಮೂಡುವುದು ಸಹಜ. ಅದರ ಸಂಕ್ಷಿಪ್ತ ಉತ್ತರ ಇಲ್ಲಿದೆ.

ಬೆಂಗಳೂರು ಪೋಲೀಸರ ಬೀದರ್ ದಂಡಯಾತ್ರೆ



• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಇದೊಂದು ಪೊಲೀಸ್ ದಂಡಯಾತ್ರೆ! ಈ ವಿಶೇಷ ದಂಡಯಾತ್ರೆಗಾಗಿ ಬೆಂಗಳೂರಿನಿಂದ 200ಕ್ಕೂ ಹೆಚ್ಚು ಪೊಲೀಸರನ್ನು ಜಮಾವಣೆ ಮಾಡಲಾಗಿತ್ತು. ಬೆಂಗಳೂರಿನಿಂದ ಸರಿಸುಮಾರು 700 ಕಿಲೋಮೀಟರ್ ದೂರವಿರುವ ಕರ್ನಾಟಕದ ಉತ್ತರ ತುದಿಯ ಬೀದರ್ ಪಟ್ಟಣಕ್ಕೆ ಈ ಪೊಲೀಸ್ ಪಡೆ ದಂಡೆತ್ತಿ ಹೋಗಿತ್ತು. ಬೀದರ್‌ನ ಪೊಲೀಸ್ ಪಡೆ ಸಹ ಈ ದಂಡಯಾತ್ರೆಯೊಂದಿಗೆ ಸೇರಿ ಕೊಂಡಿತು. ಹಲವು ಇನ್‌ಸ್ಪೆಕ್ಟರ್‌ಗಳು ದಳಾಧಿಪತಿಗಳಾಗಿದ್ದು, ಖುದ್ದು ಐಪಿಎಸ್ ಅಧಿಕಾರಿಗಳೇ ಇದರ ದಂಡನಾಯಕರಾಗಿದ್ದ ಮೇಲೆ ಕೇಳಬೇಕೆ? ಸರ್ವಸನ್ನದ್ಧವಾಗಿದ್ದ ಈ ಪಡೆ ದಾಳಿಯನ್ನು ಯಶಸ್ವಿಗೊಳಿಸುವ ಅತ್ಯುತ್ಸಾಹದಿಂದ ಮುನ್ನುಗ್ಗಿತ್ತು.


ಮಿರ್ಜಿ

ಆದರೆ ಅಷ್ಟು ಸುಸಜ್ಜಿತವಾಗಿದ್ದ, ಉತ್ಸಾಹದಲ್ಲಿದ್ದ ಈ ಪಡೆಯ ನಾಯಕರು ತನ್ನ ಗುರಿಯ ಮೇಲೆ ಹಗಲು ಹೊತ್ತಿನಲ್ಲಿ ದಾಳಿ ಮಾಡಲು ಮನಸ್ಸು ಮಾಡಲಿಲ್ಲ. ಕಾರ್ಗತ್ತಲು ಕವಿಯುವವರೆಗೆ ಕಾದುಕೂತು ನಡುರಾತ್ರಿ 1.30 ರ ಸುಮಾರಿಗೆ ಒಮ್ಮೆಲೆ ಹಠಾತ್ ದಾಳಿ ಮಾಡಿದರು. ಅಲ್ಲಿಂದ ಹೊರಬರುವ ಹಾಗೂ ಒಳಹೋಗುವ ಮಾರ್ಗಗಳನ್ನು ಬಂದ್ ಮಾಡಿ ಆ ಪ್ರದೇಶವನ್ನು ಎಲ್ಲಾ ಕಡೆಯಿಂದ ಸುತ್ತುವರೆದಿದ್ದರು.

ಹೀಗೆ ಸರ್ವಸನ್ನದ್ಧವಾಗಿ ಕಾಳರಾತ್ರಿಯಲ್ಲಿ ದಾಳಿ ಮಾಡಿದ್ದು ಮಾತ್ರ ಒಂದು ಸಣ್ಣ ಗಲ್ಲಿಯ ಮೇಲೆ ಎಂಬುದು ಮಾತ್ರ ವಿಚಿತ್ರವಾದರೂ ಸತ್ಯ! ಬೀದರ್ ನಗರದ ಚಿದ್ರಿ ರಸ್ತೆಯಲ್ಲಿರುವ ಈ ಗಲ್ಲಿಯಲ್ಲಿ ಸುಮಾರು 100 ಸಣ್ಣಪುಟ್ಟ ಮನೆಗಳಿವೆ. ಈ ಪ್ರದೇಶವನ್ನು 'ಇರಾನಿ ಗಲ್ಲಿ' ಅಥವಾ 'ಇರಾನಿ ಕಾಲೊನಿ'ಯೆಂದು ಕರೆಯಲಾಗುತ್ತದೆ. ಆ ಅಹೋರಾತ್ರಿಯಲ್ಲಿ ಪೊಲೀಸ್ ದಾಳಿ ನಡೆಯಬಹುದೆಂಬ ಯಾವ ಮುನ್ಸೂಚನೆಯೂ ಇರದಿದ್ದ ಕಾರಣ ಅಲ್ಲಿನ ನಿವಾಸಿಗಳು ಗಾಢ ನಿದ್ರೆಯಲ್ಲಿದ್ದರು. ಮನೆಯ ಬಾಗಿಲು ಗಳನ್ನು ಹೊರಗಿನಿಂದ ಬಂದ್ ಮಾಡಿದ ಪೊಲೀಸರು ಒಂದೊಂದೇ ಮನೆಯನ್ನು ತಲಾಶ್ ಮಾಡಿ ದರು. ಬೆಳಗಿನ ಜಾವ ಸುಮಾರು 5 ಗಂಟೆಯವರೆಗೆ ವೀರಾವೇಶದ ಈ ಕಾರ್ಯಾಚರಣೆ ಅವ್ಯಾಹತವಾಗಿ ಮುಂದುವರೆಯಿತು. ಅದೊಂದು ಪಕಡ್‌ಬಂದಿ ಕಾರ್ಯಾಚರಣೆ!



ಎಸ್ಪಿ ಸತೀಶ್

ಇದೆಲ್ಲಾ ನಡೆದದ್ದು ಫೆಬ್ರವರಿ 3 ಮತ್ತು 4 ರ ಮಧ್ಯ ರಾತ್ರಿ. ಈ ದಂಡಯಾತ್ರೆಯಲ್ಲಿ ಭಾರೀ ಪ್ರಮಾಣದ ನಗನಾಣ್ಯಗಳು ಪೊಲೀಸರ ವಶವಾದವು ಹಾಗೂ ಸುಮಾರು 44 ಮಂದಿ ಪುರುಷರನ್ನು ಬಂಧಿಸಲಾಯಿತು.

ಬೆಳಗಾಗುತ್ತಿದ್ದಂತೆ ಟಿವಿ ಚಾನಲ್‌ಗಳು, ಪತ್ರಿಕಾ ವರದಿಗಾರರು ಕ್ಯಾಮರಾ ಸಮೇತ ಈ ಗಲ್ಲಿಯನ್ನು ಹುಡುಕಿಹೊರಟರು. ಪೊಲೀಸ್ ದಾಳಿಯ ಬಿಸಿಬಿಸಿ ಚಿತ್ರಣವನ್ನು ಪೈಪೋಟಿಯಲ್ಲಿ ಪ್ರಚಾರ ಮಾಡಿದರು. ಪೊಲೀಸರ ಲಾಠಿ ಏಟಿನಿಂದ ಹತ್ತಾರು ಮಹಿಳೆಯರ ಮೈಮೇಲೆ ಬಾಸುಂಡೆಗಳು ಎದ್ದಿವೆ. ಕೆಲವು ಮಕ್ಕಳಿಗೂ, ಮುದುಕರಿಗೂ ಪೆಟ್ಟುಗಳು ಬಿದ್ದಿವೆ. ಪೊಲೀಸ್ ದಾಳಿಯಿಂದಾಗಿ ಮನೆಗಳ ಸಾಮಾನುಗಳು ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಇಡೀ ಗಲ್ಲಿಯ ಅಸ್ತವ್ಯಸ್ತ ಚಿತ್ರಣವನ್ನು ಮಾಧ್ಯಮಗಳು ತೆರೆದಿಟ್ಟವೆ. ಈ ಗಲ್ಲಿಯ ಪಕ್ಕದಲ್ಲೇ ಇರುವ ತಮ್ಮ ಮನೆಗೂ ಪೊಲೀಸರು ನುಗ್ಗಿದ್ದರಿಂದಾಗಿ ಭಯಭೀತಗೊಂಡು ಮನೆಯವರೆಲ್ಲಾ ರಾತ್ರಿಯಿಡೀ ಜಾಗರಣೆ ನಡೆಸಿದ್ದಾಗಿ ಶಕುಂತಲಾಬಾಯಿ ಎಂಬ ಮಹಿಳೆ ಅಲವತ್ತುಕೊಂಡಿದ್ದಾಳೆ. ಹೀಗೆ ಯಾರ ಗಮನಕ್ಕೂ ಬಾರದಿದ್ದ ಇರಾನಿ ಕಾಲೊನಿ ರಾತ್ರೋರಾತ್ರಿ ಇಡೀ ನಾಡಿನ ಗಮನ ಸೆಳೆದುಬಿಟ್ಟಿದೆ.

ಏನಿದು ಬೀದರ್‌ನಲ್ಲಿ 'ಇರಾನಿ ಕಾಲೊನಿ'? ಬೀದರ್‌ಗೂ ಇರಾನ್‌ಗೂ ಎಂತಹ ವಿಚಿತ್ರ ಸಂಬಂಧ? ಪೊಲೀಸರು ಇವರ ಮೇಲೆ ಮುಗಿಬೀಳಲು ಏನು ಕಾರಣ? ಎಂಬ ಕುತೂಹಲಕಾರಿ ಪ್ರಶ್ನೆಗಳು ಮೂಡುವುದು ಸಹಜ. ಅದರ ಸಂಕ್ಷಿಪ್ತ ಉತ್ತರ ಇಲ್ಲಿದೆ.

ಸುಮಾರು 600-700 ವರ್ಷಗಳ ಹಿಂದೆ ಈ ಅಲೆಮಾರಿ ಬುಡಕಟ್ಟು ಇರಾನ್‌ನಿಂದ ಭಾರತಕ್ಕೆ ವಲಸೆ ಬಂದಿತು. ಭಾರತದ ರಾಜರುಗಳಿಗೆ ಕಟ್ಟುಮಸ್ತಾದ ಇರಾನಿ ಕುದುರೆಗಳ ಮೇಲೆ ಭಾರೀ ವ್ಯಾಮೋಹ. ಹೀಗೆ ಈ ಇರಾನಿ ಜನರು ಭಾರತದ ರಾಜರಿಗೆ ಕುದುರೆ ಸರಬರಾಜು ಮಾಡುತ್ತಿದ್ದರೆಂದು ಹೇಳಲಾಗುತ್ತದೆ. ಕಾಲಕ್ರಮೇಣ ಇತರ ಬುಡಕಟ್ಟುಗಳೊಂದಿಗೆ ಉಂಟಾದ ವೈಷಮ್ಯದ ಕಾರಣದಿಂದ ಈ ಬುಡಕಟ್ಟು ಭಾರತದಲ್ಲೇ ನೆಲೆಸಿತು. ಮಹಾರಾಷ್ಟ್ರ, ಆಂಧ್ರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ಮುಂತಾದ ರಾಜ್ಯಗಳಲ್ಲಿ ಇವರು ಚದುರಿಹೋಗಿದ್ದಾರೆ. ಕರ್ನಾಟಕದಲ್ಲಿ ಇವರ ಜನಸಂಖ್ಯೆ ತೀರಾ ಕಮ್ಮಿ. ಬೀದರ್‌ನಲ್ಲಿ ಬಿಟ್ಟರೆ ಧಾರವಾಡ ಮತ್ತು ಗುಲಬರ್ಗಗಳಲ್ಲಿ ತೀರಾ ಸಣ್ಣ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಇವರು ಶಿಯಾ ಮುಸ್ಲಿಂ ಪಂಥದ ಅನುಯಾಯಿಗಳು.



ಬ್ರಿಟಿಷರು ಹಲವಾರು ಬುಡಕಟ್ಟುಗಳನ್ನು 'ಕ್ರಿಮಿನಲ್ ಟ್ರೈಬ್ಸ್' ಎಂದು ಪಟ್ಟಿ ಮಾಡಿದ್ದರು. ಹಾಲಿ ಈ ಇರಾನಿ ಬುಡಕಟ್ಟು ಒಂದು 'ಡಿನೋಟಿಫೈಡ್ ಕ್ರಿಮಿನಲ್ ಟ್ರೈಬ್'. ಮೂಲತಃ ಇವರು ಅಲೆಮಾರಿಗಳು. ಏಳುನೂರು ವರ್ಷಗಳ ಇತಿಹಾಸದಲ್ಲಿ ಇವರು ಒಂದೆಡೆ ನೆಲೆನಿಂತ ಉದಾಹರಣೆಯಿಲ್ಲ. ಹೀಗಾಗಿ ಇವರಿಗೆ ಮನೆ-ಮಠ, ಆಸ್ತಿ-ಪಾಸ್ತಿ ಹೆಚ್ಚಾಗಿ ಇರೋದಿಲ್ಲ. ಲಾಗಾಯ್ತಿನಿಂದಲೂ ಇವರ ಗಳಿಕೆಯನ್ನು ಬಂಗಾರದ ರೂಪದಲ್ಲಿ ಸಂಗ್ರಹಿಸಿಡುವುದು ತಮ್ಮ ಪದ್ಧತಿಯೆಂದು ಅವರು ಹೇಳಿಕೊಳ್ಳುತ್ತಾರೆ.

ಸುಮಾರು ನೂರು ವರ್ಷಗಳ ಹಿಂದಿನಿಂದಲೂ ಬೀದರ್‌ಗೆ ಬಂದುಹೋಗುತ್ತಿದ್ದ ಈ ಜನರು ಸಾಮಾನ್ಯವಾಗಿ ರೈಲ್ವೆಸ್ಟೇಷನ್‌ನ ಬಳಿಯಲ್ಲಿ ಬಿಡಾರ ಹೂಡುತ್ತಿದ್ದರು. ತೀನ್ ಪತ್ತಿ (ಮೂರು ಎಲೆ ಇಸ್ಪೀಟ್ ಆಟ), ತಿರುಗುವ ಚಕ್ರಕ್ಕೆ ಗುರಿ ಹೊಡೆಯುವ ಆಟ ಮುಂತಾದ ಜೂಜಾಟಗಳನ್ನು ಆಡಿಸಿ ಜೀವನೋಪಾಯ ಮಾಡಿಕೊಂಡಿದ್ದರು. ಇದರಲ್ಲಿ ಯಾವ ಮುಚ್ಚುಮರೆಯೂ ಇರಲಿಲ್ಲ. ನೂರಾರು ಜನರ ಸಮ್ಮುಖದಲ್ಲಿ, ಅಷ್ಟೇ ಏಕೆ, ಪೊಲೀಸರು ಹಾಗೂ ಇತರ ಅಧಿಕಾರಿಗಳ ಕೃಪಾಕಟಾಕ್ಷದಲ್ಲೇ ಈ ಜೂಜಾಟ ದಂಧೆ ನಡೆಯುತ್ತಿತ್ತು.

ಹೀಗಿರುವಾಗ 1982-83 ರಲ್ಲಿ ಜಿಲ್ಲಾಧಿಕಾರಿಯಾಗಿದ್ದ ಕೆ.ಎಲ್.ನೇಗಿಯವರು ಜೋಪಡಿಗಳಲ್ಲಿದ್ದ ಈ ಜನರಿಗೆ ಚಿದ್ರಿ ರಸ್ತೆಯಲ್ಲಿರುವ ಈ ಜಾಗವನ್ನು ಮುಂಜೂರು ಮಾಡಿ, ಅವರಿಗೆ ಶಾಶ್ವತ ನೆಲೆಯನ್ನು ಒದಗಿಸಿಕೊಟ್ಟರು. ಕಾಲಕ್ರಮೇಣ ರಸ್ತೆ, ಬೀದಿದೀಪ, ಕುಡಿಯುವ ನೀರು ಮುಂತಾದ ಸೌಕರ್ಯಗಳು ಬಂದವು. ಇತ್ತೀಚೆಗೆ ವೋಟರ್ ಐಡಿ, ರೇಷನ್ ಕಾರ್ಡುಗಳು ಇವರಿಗೆ ಸಿಕ್ಕಿವೆ. ಈ ಪ್ರದೇಶವನ್ನು ಕೊಳಚೆಪ್ರದೇಶವೆಂದು ಸರ್ಕಾರ ಘೋಷಿಸಿದೆ.

ಇಂದಿಗೂ ಈ ಜನರಲ್ಲಿ ಓದುಬರಹ ಬಲ್ಲವರು ಇಲ್ಲವೆಂದೇ ಹೇಳಬೇಕು. ತೀರಾ ಇತ್ತೀಚೆಗೆ ಕೆಲ ಮಕ್ಕಳನ್ನು ಶಾಲೆಗೆ ಸೇರಿಸಲಾಗಿದೆ. ಮುಂಬೈನಿಂದ ಈ ಕಾಲೊನಿಗೆ ಸೊಸೆಯಾಗಿ ಬಂದಿರುವ ಫಾತಿಮಾ ಎಂಬ ಮಹಿಳೆ ಈ ಜನಾಂಗದ ಏಕೈಕ ವಿದ್ಯಾವಂತೆ. ಇದು ಭಾರತದಲ್ಲಿ ರಾಜಕಾರಣ ಮಾಡಲು ಹೇಳಿಮಾಡಿಸಿದಂತಹ ಪರಿಸ್ಥಿತಿ. ಹಾಗೆ ಕಾಂಗ್ರೆಸ್ ಪಕ್ಷ ಈ ವಿದ್ಯಾವಂತೆಯನ್ನು ರಾಜಕೀಯಕ್ಕೆ ಸೆಳೆಯುವಲ್ಲಿ ಯಶಸ್ವಿಯಾಯಿತು. ಹೀಗಾಗಿ ಈಕೆ ಹಾಲಿ ಬೀದರ್ ನಗರಸಭೆಯ ಕಾರ್ಪೊರೇಟರ್ ಕೂಡ ಆಗಿದ್ದಾಳೆ.

ಮಧ್ಯರಾತ್ರಿಯಲ್ಲಿ ನಡೆದ ಪೊಲೀಸರ ದೌರ್ಜನ್ಯ ವಿರೋಧಿಸಿ ಇರಾನಿ ಜನರು ಬೀದರಿನ ಜಿಲ್ಲಾಧಿಕಾರಿ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿದ್ದಾರೆ. ಮಾತ್ರವಲ್ಲದೆ ತಮಗೆ ನ್ಯಾಯ ದೊರಕಿಸಿಕೊಡುವಂತೆ ಕೋರಿ ಬೆಂಗಳೂರಿನಲ್ಲಿರುವ ರಾಜ್ಯ ಮಾನವ ಹಕ್ಕು ಆಯೋಗಕ್ಕೂ ದೂರು ಸಲ್ಲಿಸಿದ್ದಾರೆ.

ಅವರ ದೂರಿನ ಸಾರಾಂಶವೇನೆಂದರೆ :- "ಕಾನೂನುಬಾಹಿರವಾಗಿ ಮಧ್ಯರಾತ್ರಿಯಲ್ಲಿ ಯಾವುದೇ ವಾರಂಟ್ ಇಲ್ಲದೆ ತಮ್ಮ ಮನೆಗಳಿಗೆ ನುಗ್ಗಿದ ಪೊಲೀಸರು ಮಹಿಳೆಯರು ಮಕ್ಕಳೆನ್ನದೆ ಅಮಾನವೀಯವಾಗಿ ಬಡಿದಿದ್ದಾರೆ. ಕೆಲವು ಮಹಿಳೆಯರನ್ನು ರಿವಾಲ್ವರ್‌ಗಳಿಂದ ಬೆದರಿಸಿ ಬಟ್ಟೆ ಬಿಚ್ಚಿಸಿ ಅಗೌರವವಾಗಿ ನಡೆದುಕೊಂಡಿದ್ದಾರೆ. ಜೈನಾಬ್ (28ವರ್ಷ) ಗುಲ್‌ಬಹರ್ (30ವರ್ಷ), ಸುರಯ್ಯಾ (33ವರ್ಷ) ಮುಂತಾದ ಮಹಿಳೆಯರೊಂದಿಗೆ ತೀರಾ ಅನುಚಿತವಾಗಿ ವರ್ತಿಸಿದ್ದಾರೆ. ಕಂಠಪೂರ್ತಿ ಕುಡಿದಿದ್ದ ಪೊಲೀಸನೊಬ್ಬ ಹದಿಹರೆಯದ ಹುಡುಗಿಯೊಬ್ಬಳ ಮೇಲೆ ಅತ್ಯಾಚಾರವೆಸಗಲು ಪ್ರಯತ್ನಿಸಿದ್ದಾನೆ. ಇತರ ಮಹಿಳೆಯರು ಆಕೆಯನ್ನು ಕಾಪಾಡಿದ್ದಾರೆ.

"ಪೊಲೀಸರು ಜಿಲ್ಲಾ ಎಸ್‌ಪಿ ಮತ್ತು ಬೆಂಗಳೂರಿನ ಡಿಸಿಪಿಗಳಾದ ರವಿಕಾಂತೆ ಗೌಡ ಮತ್ತು ಸಿದ್ದರಾಮಪ್ಪ ಅವರ

ಇರಾನಿಗಳು ಬಚ್ಚಿಟ್ಟ ಅರ್ಧಸತ್ಯ

ಮಾನವ ಹಕ್ಕು ಆಯೋಗಕ್ಕೆ ನೀಡಿದ ದೂರಿನಲ್ಲಿ ಹೇಳಿಕೊಂಡಂತೆ ಇರಾನಿಗಳು ಶಾಂತಿಪ್ರಿಯರು, ಕಾನೂನುಬದ್ಧ ನಾಗರಿಕರು, ಆದರೆ ಈ ವಿಷಯವನ್ನು ಪರಿಶೀಲಿಸಿ ನೋಡಿದರೆ ಅದು ತೋರಿಕೆಯ ಸತ್ಯ ಮಾತ್ರ ಎಂಬುದು ಬಯಲಾಗುತ್ತದೆ. ಸುಮಾರು 120 ಮನೆಗಳ ಈ ಕಾಲೊನಿಯಲ್ಲಿ ಬಹುತೇಕ ಸಂದರ್ಭಗಳಲ್ಲಿ ಮಹಿಳೆಯರು, ಮಕ್ಕಳು ಮತ್ತು ವಯಸ್ಸಾದ ವೃದ್ಧರು ಮಾತ್ರ ಕಾಣಸಿಗುತ್ತಾರೆ. ಪುರುಷರು ಸಾಮಾನ್ಯವಾಗಿ ಮನೆಯಿಂದ ಹೊರಗಡೆ ಇರುತ್ತಾರೆ. ಇರಲಿ ಬಿಡಿ, ಉದ್ಯೋಗಂ ಪುರುಷ ಲಕ್ಷಣಂ ಅಂತೀರಾ? ಹಾಗಾದರೆ ಇವರ ಉದ್ಯೋಗವೇನು? ಅದೇ ನಿಗೂಢ! ಇದಕ್ಕೆ ಅಪವಾದವೆಂಬಂತೆ ಇವರಲ್ಲಿ ಬೆರಳೆಣಿಕೆಯಷ್ಟು ಮಂದಿ ರಸ್ತೆ ಬದಿಗಳಲ್ಲಿ ಕನ್ನಡಕ ಅಥವಾ ಹೆಲ್ಮೆಟ್ ಮಾರುವ ಕಾಯಕದಲ್ಲಿ ತೊಡಗಿದ್ದರೆ ಮತ್ತೆ ಕೆಲವರು ವಾಹನ ಸಾಲ ನೀಡುವ ಫೈನಾನ್ಸ್ ಹಾಗೂ ಬ್ಯಾಂಕುಗಳಿಗೆ ವಾಹನ ಜಪ್ತುದಾರರಾಗಿದ್ದಾರೆ.

ಕಾರ್ಪೊರೇಟರ್ ಫಾತಿಮಾಳ ಪ್ರಕಾರ ಆಕೆಯ ಗಂಡ ಅನ್ವರ್ ಅಲಿ 'ಅಮೂಲ್ಯ ಹರಳು ಮಾರುವ ಬ್ಯುಸಿನೆಸ್ ಮಾಡುತ್ತಾನೆ.' ಅದು ಯಾವ ಹರಳು? ಎಲ್ಲಿಂದ ತರುತ್ತಾರೆ? ಯಾರಿಗೆ ಮಾರುತ್ತಾರೆಂಬುದು ದೇವರೇ ಬಲ್ಲ, ಇಷ್ಟು ಮಾತ್ರವಲ್ಲದೆ ಕೆಲವರು ರಿಯಲ್‌ಎಸ್ಟೇಟ್ ವ್ಯವಹಾರಕ್ಕೂ ಇಳಿದಿದ್ದಾರಂತೆ.

ಸಾಮಾನ್ಯವಾಗಿ ಇವರ ಊಟ ತಿಂಡಿ ಎಲ್ಲಾ ಹೋಟೆಲ್‌ಗಳಲ್ಲೇ. ಮನೆಗಳಲ್ಲಿ ಟೀ ಕಾಫಿ ಮಾಡಿಕೊಳ್ಳುವುದಷ್ಟೆ ಇವರ ಹವ್ಯಾಸ. ಕುಡಿಯುವ ನೀರಿಗೆ ಮಿನರಲ್ ವಾಟರ್‌ನ ಬಳಕೆ ಇವರಿಗೆ ಮಾಮೂಲು. ಇಂಥಾ ಜೀವನಶೈಲಿ, ಖರ್ಚು ವೆಚ್ಚಗಳನ್ನು ಕಂಡು ಬರಪೀಡಿತ ಬೀದರ್ ಜನತೆ ನಿಬ್ಬೆರಗಾಗಿದ್ದಾರೆ.

ಇಷ್ಟು ವರ್ಷ ನಾವಿಲ್ಲಿದ್ದರೂ ನಮ್ಮ ಜನರ ಮೇಲೆ ಇಡೀ ಬೀದರ್‌ನಲ್ಲಿ ಒಂದೇ ಒಂದು ಕೇಸೂ ಇಲ್ಲ ಎನ್ನುವ ಫಾತಿಮಾಳ ಮಾತು ಅಕ್ಷರಶಃ ಸತ್ಯ. ಆದರೆ ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು ಮುಂತಾದ ಕಡೆಗಳಿಂದ ಪೊಲೀಸರು ಇವರಲ್ಲಿ ಕೆಲವರನ್ನು ಹುಡುಕಿಕೊಂಡು ಬಂದ ಉದಾಹರಣೆಗಳಿವೆ. ಸ್ಥಳೀಯರ ಪ್ರಕಾರ ಅವರು ಬೀದರ್‌ನಲ್ಲಿ ಸಾಮಾನ್ಯವಾಗಿ ಯಾವುದೇ ಅಪರಾಧ ಕೃತ್ಯಗಳಲ್ಲಿ ತೊಡಗುವುದಿಲ್ಲ. ಬದಲಾಗಿ ಸ್ಥಳೀಯ ಪೊಲೀಸರೊಂದಿಗೆ ಉತ್ತಮ ಸಂಬಂಧವನ್ನೇ ಹೊಂದಿರುತ್ತಾರೆ. ಈ ಜನ ಇತರರೊಂದಿಗೆ ಅಷ್ಟಾಗಿ ಬೆರೆಯುವುದಿಲ್ಲ. ಇವರ ಜೀವನದ ಒಳಮರ್ಮವನ್ನು ಅರಿಯದ ಬೀದರ್ ಜನ ಇವರ ಬಗ್ಗೆ ರಂಜಕವಾದ ಕತೆಗಳನ್ನು ಕಟ್ಟಿಕೊಂಡಿದ್ದಾರೆ.

ಓದು ಬರಹ ಶಿಕ್ಷಣದ ಗಂಧಗಾಳಿಯೇ ಇಲ್ಲದ ಈ ಜನರನ್ನು ನಾವು ದಡ್ಡರೆಂದು ಭಾವಿಸುವಂತಿಲ್ಲ. ಇವರು ಅತ್ಯಂತ ಕುಶಾಗ್ರಮತಿಗಳು ಹಾಗೂ ಚಾಣಾಕ್ಷರು. ಪೊಲೀಸರು ದಡ್ಡರಾದರೆ ಅವರ ಸಂಬಳ ಸಾರಿಗೆಗಳಿಗೇನೂ ಧೋಕಾ ಇಲ್ಲ, ಆದರೆ ಕಳ್ಳರು ದಡ್ಡರಾದರೆ ಅವರ ಕಸುಬೇ ನಡೆಯೋದಿಲ್ಲ, ಏನಂತೀರಿ?

ಪೊಲೀಸರು ಬಚ್ಚಿಟ್ಟ ಅರ್ಧಸತ್ಯ

ಒಟ್ಟಾರೆ ಈ ಇಡೀ ಪ್ರಕರಣದಲ್ಲಿ ಪೊಲೀಸರ ನಡವಳಿಕೆಯಲ್ಲಿ ಪಾರದರ್ಶಕತೆ ಕಾಣುತ್ತಿಲ್ಲ. ಮೊದಲನೆಯದಾಗಿ ಮಧ್ಯರಾತ್ರಿಯಲ್ಲಿ ದಾಳಿ ಮಾಡಿದ ಪೊಲೀಸರ ಕ್ರಮ ಅಷ್ಟು ಅನಿವಾರ್ಯವಾಗಿತ್ತೆ ಎಂಬುದು ಮೊದಲ ಪ್ರಶ್ನೆ. ಅದು ಹಾಗಿರಲಿ. ಮಕ್ಕಳು ಮಹಿಳೆಯರೆನ್ನದೆ ಆ ರೀತಿ ಪಾಶವಿಕವಾಗಿ ಬಡಿಯುವುದನ್ನು ತಪ್ಪಿಸುವುದಂತೂ ಸಾಧ್ಯವಿತ್ತು. ಇಂಥ ವರ್ತನೆ ಮಾನವ ಹಕ್ಕುಗಳ ಉಲ್ಲಂಘನೆಯಲ್ಲವೆಂದರೆ ಪೊಲೀಸರ ಪ್ರಕಾರ ಮಾನವ ಹಕ್ಕುಗಳು ಎಂದರೇನು?

ಸಾಕ್ಷ್ಯಾಧಾರಗಳ ಮೇಲೆ ನಿರ್ದಿಷ್ಟ ಆರೋಪಿಗಳನ್ನು ಬಂಧಿಸಬೇಕೇ ಹೊರತು ರಾತ್ರೋರಾತ್ರಿ ಕೈಗೆ ಸಿಕ್ಕವರನ್ನೆಲ್ಲಾ ಎಳೆದೊಯ್ಯಬೇಕೆಂದು ನಮ್ಮ ಕಾನೂನು ಪುಸ್ತಕಗಳ ಯಾವ ಪುಟಗಳಲ್ಲಿ ಬರೆದಿತ್ತೋ ಅವರೇ ಹೇಳಬೇಕು. ಪೊಲೀಸರು ಬಂಧಿಸಿ ಬೆಂಗಳೂರಿಗೆ ತಂದ **44** ಜನರಲ್ಲಿ **18** ಜನರನ್ನು ನಿರಪರಾಧಿಗಳೆಂದು ತೀರ್ಮಾನಿಸಿ ಬಿಡುಗಡೆ ಮಾಡಿದ್ದು ಏನನ್ನು ಸೂಚಿಸುತ್ತದೆ? ಬಂಧನಕ್ಕೆ ಮುಂಚೆ ಪಾಲಿಸಬೇಕಾದ ಕಾನೂನು ಕ್ರಮಗಳನ್ನು ಪಾಲಿಸಿಲ್ಲ ಎಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಅಪರಾಧಿಗಳನ್ನು ನಿಖರವಾಗಿ ಗುರುತಿಸಿ ಸೂಕ್ತ ಕಾನೂನುಕ್ರಮ ಕೈಗೊಳ್ಳುವುದನ್ನು ಬಿಟ್ಟು ಒಂದು ಇಡೀ ಸಮುದಾಯವನ್ನೇ ಅಪರಾಧಿಗಳೆಂದು ತೀರ್ಮಾನಿಸುವುದು ಬ್ರಿಟಿಷ್ ಆಡಳಿತಗಾರರ ಧೋರಣೆಯೇ ಆಗುತ್ತದೆ. ಇರಾನಿ ಗಲ್ಲಿಯ ಕೆಲ ನಿವಾಸಿಗಳ ನಿಗೂಢ ವ್ಯವಹಾರಗಳು ಬೆಂಗಳೂರು ಪೊಲೀಸರಿಗೆ ಹೊಸದಾಗಿರಬಹುದು. ಆದರೆ ಬೀದರ್ ಪೊಲೀಸರಿಗೆ ಇವ್ಯಾವೂ ಹೊಸದಲ್ಲ. ಹಾಗಾದರೆ ಇಷ್ಟು ವರ್ಷ ಇರಾನಿಗಳಿಗೂ ಪೊಲೀಸರಿಗೂ ಇದ್ದ ಸಂಬಂಧ ಎಂಥದ್ದು? ಅವರಿಗೆ ಪರೋಕ್ಷ ಬೆಂಬಲ ನೀಡಿದ ಸ್ಥಳೀಯ ಪೊಲೀಸರ ಪಾತ್ರ ಅತ್ಯಂತ ಖಂಡನೀಯ.

ಇನ್ನು ಮುಂದಾದರೂ ನ್ಯಾಯಯುತ ಮಾರ್ಗಗಳಲ್ಲಿ ಬದುಕುತ್ತಿರುವ ಇರಾನಿಗಳನ್ನು ಉತ್ತೇಜಿಸುವ ಹಾಗೂ ದಾರಿತಪ್ಪಿದವರನ್ನು ಮಾತ್ರ ಕಾನೂನು ಕ್ರಮಕ್ಕೊಳಪಡಿಸುವ ಕೆಲಸವನ್ನು ಸರ್ಕಾರ ಮತ್ತು ಪೊಲೀಸರು ಮಾಡುವಂತಾಗಲಿ.

ನೇತೃತ್ವದಲ್ಲಿ ಕಾನೂನನ್ನು ಗಾಳಿಗೆ ತೂರಿದ್ದಾರೆ. ಮಹಿಳೆಯರ ಮೇಲೆ ದೌರ್ಜನ್ಯವೆಸಗಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದ್ದಾರೆ. ತಾವು ಕಷ್ಟಪಟ್ಟು ಗಳಿಸಿದ್ದ ಹಣ ಹಾಗೂ ಒಡವೆಗಳನ್ನು ಅಕ್ರಮವಾಗಿ, ಪೂರ್ವಯೋಜಿತವಾಗಿ ಲೂಟಿ ಮಾಡಿ, ತಮ್ಮ ಮೇಲೆ ಸುಳ್ಳು ಕೇಸುಗಳನ್ನು ಹಾಕಿದ್ದಾರೆ. ಆದ್ದರಿಂದ ಅಂಥವರನ್ನು ಕಾನೂನು ಪ್ರಕಾರ ಶಿಕ್ಷಿಸಿ ತಮ್ಮ ಒಡವೆ ವಸ್ತುಗಳನ್ನು ತಮಗೆ ಮರಳಿಸಬೇಕು" ಎಂದು ಮನವಿ ಮಾಡಿಕೊಂಡಿದ್ದಾರೆ.

ಕಾರ್ಪೊರೇಟರ್ ಫಾತಿಮಾ ನೇತೃತ್ವದಲ್ಲಿ ಬೀದರಿನಿಂದ ಬೆಂಗಳೂರಿಗೆ ಬಂದ ಇರಾನಿ ಮಹಿಳೆಯರ ತಂಡಕ್ಕೆ ಮಾಜಿ ಬಿಎಸ್‌ಪಿ ಶಾಸಕ ಹಾಗೂ ಹಾಲಿ ಜೆಡಿಎಸ್ ಮುಖಂಡ ಸಯ್ಯದ್ ಜುಲ್ಫಿಕರ್ ಹಾಶ್ಮಿ ಸಕ್ರಿಯವಾಗಿ ಬೆಂಬಲಿಸಿದ್ದಾರೆ. ಜೊತೆಗೆ ಸಿಸಿಡಿಯಂತಹ ಕೆಲ ಸರ್ಕಾರೇತರ ಸಂಸ್ಥೆಗಳು ಸಹಾಯಕ್ಕೆ ನಿಂತಿವೆ. ಆದರೆ ಇರಾನಿ ಜನರನ್ನು ಸಹಾ ರಾಜಕೀಯಕ್ಕೆ ಎಳೆದುತಂದ ಕಾಂಗ್ರೆಸ್‌ನ ಎಮ್‌ಎಲ್‌ಎ ಕರೀಂಖಾನ್ ಮಾತ್ರ ಯಾಕೋ ಏನೋ ಇವರೊಂದಿಗೆ ಅಷ್ಟಾಗಿ ಗುರುತಿಸಿಕೊಳ್ಳುತ್ತಿಲ್ಲ. ಇರಾನಿ ಮಹಿಳೆಯರು **17-02-2012**ರಂದು ಮಾಜಿ ಪ್ರಧಾನಿ ದೇವೇಗೌಡ, ಪೊಲೀಸ್ ಕಮಿಷನರ್ ಮಿರ್ಜಿ, ಹಿರಿಯ ರಾಜಕಾರಣಿ ಜಾಫರ್ ಶರೀಫ್ ಮುಂತಾದವರನ್ನು ಭೇಟಿ ಮಾಡಿ ತಮಗೆ ನ್ಯಾಯ ದೊರಕಿಸುವಂತೆ ಕೋರಿದ್ದಾರೆ. ನಮ್ಮ 'ಲಂಕೇಶ್ ವಾರಪತ್ರಿಕೆ'ಯನ್ನೂ ಒಳಗೊಂಡಂತೆ ಹಲವು ಪತ್ರಿಕೆಗಳನ್ನು ಸಂಪರ್ಕಿಸಿ ತಮಗೆ ನ್ಯಾಯ ದೊರಕಿಸುವಂತೆ ಕೇಳಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ಇರಾನಿ ಮಹಿಳೆಯರ ಚಟುವಟಿಕೆಗಳು ಬಿರುಸಿನಿಂದ ಸಾಗುತ್ತಿದ್ದದ್ದನ್ನು ಮನಗಂಡ ಪೊಲೀಸರೂ ಸಹ ಚುರುಕಾದರು. ಮರುದಿನವೇ ಅಂದರೆ **18-02-2012**ರಂದು ಪತ್ರಿಕಾ ಗೋಷ್ಠಿ ನಡೆಸಿದ ಕಮಿಷನರ್ ಮಿರ್ಜಿ ಸಾಹೇಬರು ಇರಾನಿ ಕಾಲೊನಿಯಿಂದ ವಶಪಡಿಸಿಕೊಂಡ ಆಭರಣಗಳ ಪ್ರದರ್ಶನ ಮಾಡಿದರು. ಪತ್ರಿಕಾ ಗೋಷ್ಠಿಯಲ್ಲಿ ಹಲವಾರು ಪೊಲೀಸ್ ಅಧಿಕಾರಿಗಳು ಹಾಜರಿದ್ದರು.

ಪೊಲೀಸರು ನೀಡಿದ ಮಾಹಿತಿಗಳು ನಾಗರಿಕರಲ್ಲಿ ಆಶ್ಚರ್ಯ ಮೂಡಿಸಿರುವುದು ಸುಳ್ಳಲ್ಲ. ಬೆಂಗಳೂರಿನ ಹತ್ತಾರು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಸುಮಾರು **55** ಪ್ರಕರಣಗಳಿಗೆ ಬೇಕಾದ ಅಪರಾಧಿಗಳನ್ನು ಬಂಧಿಸಿ, ಅವರಿಂದ ಸುಮಾರು **65** ಲಕ್ಷ ಬೆಲೆಬಾಳುವ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವುದಾಗಿ ಬೆಂಗಳೂರು ಪೊಲೀಸರು ಅಂತಿಮವಾಗಿ ಘೋಷಿಸಿದ್ದಾರೆ. ಅಪರಾಧ ಕೃತ್ಯಗಳೊಂದಿಗೆ ಸಂಬಂಧವಿಲ್ಲದ ಕೆಲವರನ್ನು ಬಿಟ್ಟುಕಳಿಸಲಾಗಿದೆಯೆಂದೂ ಅವರ ವಿವರಣೆ.

ಪೊಲೀಸರ ಪ್ರಕಾರ "ಸಭ್ಯರಂತೆ ಉಡುಪುಗಳನ್ನು ಧರಿಸಿ ನಗರದಲ್ಲಿ ಅಡ್ಡಾಡುತ್ತಿದ್ದ ಆರೋಪಿಗಳು ಒಂಟಿ ಮಹಿಳೆಯರನ್ನು ಅದರಲ್ಲೂ ಮುಖ್ಯವಾಗಿ ವಯಸ್ಸಾದವರನ್ನು ಗುರಿಯಾಗಿಸಿಕೊಳ್ಳುತ್ತಿದ್ದರು. ತಮ್ಮನ್ನು ಪೊಲೀಸರೆಂದು ಪರಿಚಯಿಸಿಕೊಂಡು ಅವರನ್ನು ನಂಬಿಸಿ, ಆಭರಣ ಕಸಿದು ಪರಾರಿಯಾಗುತ್ತಿದ್ದರು."

ಪೊಲೀಸರ ಪ್ರಕಾರ ಬೀದರ್ ಕಾರ್ಯಾಚರಣೆಯಲ್ಲಿ ಯಾವುದೇ ರೀತಿಯ ಕಾನೂನು ಉಲ್ಲಂಘನೆ ಅಥವಾ ಮಾನವ ಹಕ್ಕು ಉಲ್ಲಂಘನೆ ಮಾಡಿಲ್ಲವಂತೆ. ಇರಾನಿಗಳು ಕಲ್ಲುತೂರಾಟ ನಡೆಸಿದರೂ ತಮ್ಮ ಸಿಬ್ಬಂದಿ ಎದೆಗುಂದದೆ ಧೈರ್ಯದಿಂದ ಮುನ್ನುಗ್ಗಿ ಕಾರ್ಯಾಚರಣೆ ಮಾಡಿದ್ದಾರೆಂದು ಮಿರ್ಜಿ ಸಾಹೇಬರು ಸಮರ್ಥಿಸಿಕೊಂಡಿದ್ದಾರೆ. ಆದರೆ ಅರ್ಧರಾತ್ರಿಯಲ್ಲಿ ಇಂಥಾ ದಾಳಿ ನಡೆಸುವ ದರ್ದು ಏನಿತ್ತು? ಅದರಲ್ಲೂ ಮಾಧ್ಯಮದವರನ್ನು ಹೊರಗಿಟ್ಟಿದ್ದರ ಹಿಂದಿನ ಮರ್ಮವೇನು? ಎಂಬ ಪ್ರಶ್ನೆಗಳಿಗೆ ಅವರು ಉತ್ತರಿಸುವ ಗೋಜಿಗೆ ಹೋಗಿಲ್ಲ. ಇಡೀ ಕಾರ್ಯಾಚರಣೆಯನ್ನು ವಿಡಿಯೋ ರೆಕಾರ್ಡ್ ಮಾಡಿದ್ದೇವೆ ಎಂದು ಹೇಳಿ ನುಣುಚಿಕೊಂಡಿದ್ದಾರೆ.

ತಾವು ಕಾನೂನುಬದ್ಧವಾಗಿಯೇ ಸಕ್ರಮವಾಗಿಯೇ ನಡೆದುಕೊಂಡಿರುವುದಾಗಿ ಪೊಲೀಸ್ ಅಧಿಕಾರಿಗಳು ಒಂದುಕಡೆ ಘಂಟಾಘೋಷವಾಗಿ ಹೇಳುತ್ತಿದ್ದರೆ, ಮತ್ತೊಂದುಕಡೆ ಅರ್ಧರಾತ್ರಿಯಲ್ಲಿ ತಮ್ಮ ಮನೆಗಳಿಗೆ ನುಗ್ಗಿ ತಮ್ಮ ಮೇಲೆ ದೌರ್ಜನ್ಯವೆಸಗಿದ ಪೊಲೀಸರೇ ಕಳ್ಳರಂತೆ ತಮ್ಮಲ್ಲಿದ್ದ ಎಲ್ಲವನ್ನೂ ದೋಚಿದ್ದಾರೆ ಎಂದು ಇರಾನಿ ಮಹಿಳೆಯರು ದೂಷಿಸುತ್ತಿದ್ದಾರೆ. ಹಾಗಾದರೆ ವಾಸ್ತವವೇನು?

ವಾಸ್ತವದಲ್ಲಿ ಈ ಎರಡೂ ಕಡೆಯುವರು ತಮಗೆ ಅನುಕೂಲಕರವಾದ ಅರ್ಧಸತ್ಯಗಳನ್ನೇ ಹೇಳುತ್ತಿದ್ದಾರೆಂಬುದು ಮೇಲುನೋಟಕ್ಕೆ ಕಂಡುಬರುವ ಸಂಗತಿ. ಸತ್ಯಾಂಶ ಅರಿಯಬೇಕೆಂದರೆ ಈ ಅರ್ಧಸತ್ಯಗಳ ಹಿಂದಿನ ನಿಗೂಢತೆಯನ್ನು ಬೇಧಿಸಬೇಕಾಗುತ್ತದೆ.(ವಿವರಗಳಿಗೆ ಬಾಕ್ಸ್ ನೋಡಿ).

ಈ ಘಟನೆಯಲ್ಲಿ ಪೊಲೀಸರ ಅತಿರೇಕದ ವರ್ತನೆ ಅಂಗೈಯೊಳಗಿನ ಹುಣ್ಣಿನಂತೆ ಸುಸ್ಪಷ್ಟ. ಆದರೆ ಪೊಲೀಸರು ಬಂಧಿಸಿರುವ ಆರೋಪಿತರಲ್ಲಿ ಕೆಲವರು ನಿರಪರಾಧಿಗಳು ಇರಬಹುದು ಎಂಬುದು ನಿಜವಾದರೂ ಅವರಲ್ಲಿ ಖತರ್‌ನಾಕ್ ಕಳ್ಳರೂ ಇದ್ದಾರೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇರಾನಿ ಗಲ್ಲಿಯಿಂದ ಪೊಲೀಸರು ವಶಪಡಿಸಿಕೊಂಡ ಭಾರೀ ಪ್ರಮಾಣದ ಬಂಗಾರದಲ್ಲಿ ಬಹುಪಾಲು ಬೆವರು ಹರಿಸಿ ಗಳಿಸಿದ್ದಂತೂ ಅಲ್ಲ.

ಪೊಲೀಸರು ಇಷ್ಟೆಲ್ಲಾ ದಾಖಲೆ ಸಮೇತ ವಿವರಿಸಿದ ನಂತರವೂ ಪೊಲೀಸರನ್ನೇ ಅನುಮಾನದಿಂದ ನೋಡುವವರಿಗೇನೂ ನಮ್ಮಲ್ಲಿ ಕೊರತೆಯಿಲ್ಲ. ಅದೂ ನೂರಾರು ಜನ ಪೊಲೀಸರಿದ್ದ ಕಾರ್ಯಾಚರಣೆಯಾದ್ದರಿಂದ ಈ ಜನ ಮತ್ತಷ್ಟು ಸಂಶಯಪೀಡಿತರಾಗಿದ್ದಾರೆ. "ದಾಳಿಯಲ್ಲಿ ಕೈವಶವಾದ ಹಣ ಒಡವೆಗಳನ್ನೆಲ್ಲಾ ಪೊಲೀಸರು ಸರಿಯಾಗಿ ಲೆಕ್ಕ ಕೊಟ್ಟಿದ್ದಾರೆ ಅಂತ ಏನು ಗ್ಯಾರಂಟಿ?" ಅಂತ ಅವರು ಪ್ರಶ್ನಿಸುತ್ತಿದ್ದಾರೆ. ಛೇ! ಛೇ! ಬಿಡ್ತು ಅನ್ನಿ, ಹಾಗೆಲ್ಲಾ ಪೊಲೀಸರ ಮೇಲೆ ವೃಥಾ ಆರೋಪ ಹೊರಿಸಬಾರದು... ಅದು ನಮಗೆ ಸುತರಾಂ ಇಷ್ಟ ಇಲ್ಲ... ಅವರು ಕಾನೂನು ಪಾಲಕರು... ಅಂತಾ ನಾವೆಷ್ಟೇ ಬಡಕೊಂಡರೂ ಈ ಜನ ನಂಬೋ ಸ್ಥಿತೀಲಿ ಇಲ್ಲ, ಏನ್ ಮಾಡೋದು ನೀವೇ ಹೇಳಿ? ❖

ನಿಮ್ಮ ಮನೇಲಿ ನೀವು ಬ್ಲೂಫಿಲಂ ನೋಡಲ್ವ!

ಥೂತ್ತೇರಿ

ಯಾಹೂ

ಕಾಶಿಯಾತ್ರೆ ಮುಗಿಸಿ ಬಂದ ಎಡೂರಪ್ಪನವರನ್ನ ಮಾತನಾಡಿಸಿ, ಮುಂದಿನ ಕಾರ್ಯದ ಬಗ್ಗೆ ಕೇಳಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ, ರಿಂಗಾಯ್ತು.

ರಿಂಗ್ ಟೋನ್: "ಏ ವಿಶ್ವನಾಥಾ, ನೀನು ತಂದೆಯಾದರೇ... ವಿಶಾಲಾಕ್ಷಿ ತಾಯಿಯಲ್ಲವೇ... ವಿಶ್ವನಾಥನೂ ತಂದೆಯಾ....

"ಹಲೋ ಯಾರು?"

"ನಾನು ಸಾರ್ ಯಾಹು."

"ಯಾಹು ಅಂದ್ರೆ ಯಾರ್ರಿ?"

"ಇದೇನ್ ಸಾರ್ ಇಷ್ಟು ಬೇಗ ಮರೆತ್ರಿ? ನಾನು ಪತ್ರಕರ್ತ."

"ಒಂದು ನಿಮಿಷ ಕೊಡ್ತೀನಿರಿ. ನಾನು ಸೋಮಣ್ಣ."

"ಇದೇನ್ ಸೋಮಣ್ಣಾರೆ ಹಿಂಗಾಗಿದ್ದೀರಿ?"

"ನಾನೇನಾಗಿದ್ದಿನಿ?"

"ಬಸವನಿಂದೆ ಬಾಲ ಅನ್ನಂಗಾಗಿದ್ದೀರಲ್ಲಾ... ಯಲ್ಲಾ ಜನಾಂಗದವ್ರೂ ಮೆಚ್ಚೊತರ ರಾಜಕಾರಣಿಯಾಗಿದ್ದ ನೀವು ಯಾಕಿಂಗಾದ್ರಿ?"

"ಒಂದು ನಿಮಿಷ ಕೊಟ್ಟೆ ಇರಿ."

"ಹಲೋ ಏನ್ರಿ ಯಾಹು ಅವರೆ?"

"ಕಾಶಿಯಾತ್ರೆ ಚೆನ್ನಾಗಿತ್ತಾ ಸಾರ್?"

"ಹೌದು ಕಣ್ರಿ. ದೇವರ ದರ್ಶನ ಆಯ್ತು, ಶಿವರಾತ್ರಿ ದಿನ ದರ್ಶನ ಸಿಗಕ್ಕೆ ಪೂರ್ವಜನ್ಮದಲ್ಲಿ ಪುಣ್ಯ ಮಾಡಿರಬೇಕು."

"ಯಾವ ತರದ ಪುಣ್ಯ ಮಾಡಿರಬೇಕು ಸಾರ್?"

"ಜನಗಳಿಗೆ ಒಳ್ಳೆದು ಮಾಡಿರಬೇಕು."

"ಅದೆ ಯಾವ ತರದ ಒಳ್ಳೆದು ಅಂದ್ರೆ ನಾವೂ ಮಾಡಬವುದಲ್ಲ ಸಾರ್."

"ನೀವೆಲ್ಲ ಮಾಡಕ್ಕೆ ಸಾಧ್ಯಯಿಲ್ಲ ಬಿಡಿ. ಅವ್ರುರಿವರ ಬಗ್ಗೆ ಬರಕೊಂಡು, ಬೆಂಕಿ ಹಚ್ಚಿಕೊಂಡು ಚಳಿ ಕಾಯಸೋ ವೃತ್ತಿ ನಿಮ್ಮದು. ನೀವು ಒಳ್ಳೆದ್ನೆ ಮಾಡಬೇಕು ಅನ್ನೊ ಮನಸಿದ್ರೆ, ಈ ತರ ನಡಕೊಳ್ತಿರಲಿಲ್ಲ."

"ಸಾರ್ವಜನಿಕವಾಗಿ ಅಂತ ಮಾತ್ನ ಸಾರ್ ಅನ್ನದು ನೀವು?"

"ನಾನೇನಂದೆ?"

"ಬ್ಲೂಫಿಲಂನ ನೀವು ನಿಮ್ಮ ಮನೆಲಿ ನೋಡದಿಲ್ಲವ ಅಂತ, ಅದೂ ಕುವೆಂಪು ರಂಗಮಂದಿರದಲ್ಲಿ ಸಾರ್ವಜನಿಕರಿಗೆ ಹೇಳಿದ್ರಲ್ಲಾ, ಇದು ಸರೀನಾ?"

"ನಾನೇಳಿದ್ದು ಸಾರ್ವಜನಿಕರಿಗಲ್ಲ, ಪತ್ರಕರ್ತರಿಗೆ."

"ಸರಿ, ಪತ್ರಕರ್ತರೆಲ್ಲ ಬ್ಲೂಫಿಲಂ ನೋಡ್ತರ್ರಾ? ಅದು ಮನೇಲಿ? ಅಂಥಾ ಪತ್ರಕರ್ತರೂ ಇದ್ದರೆ?"

"ಪತ್ರಕರ್ತರು ಅಂದ್ರೆ ದೇವಲೋಕದಿಂದ ಬಂದಿದಾರ? ನನ್ನೆದ್ರಿಗೆ ಯಾವ ಪತ್ರಕರ್ತನೂ ದೂಸುರ ಮಾತಾಡಂಗಿಲ್ಲ."

"ಯಾಕ್ ಸಾರ್ ಮಾತಾಡಂಗಿಲ್ಲ?"

"ಅವ್ರುರಿಗೆಲ್ಲಾ ಸೈಟು ಕೊಟ್ಟಿದ್ದಿನಿ, ದುಡ್ಡು ಕೊಟ್ಟಿದ್ದಿನಿ."

"ಬರೀ ಅವರಿವರ ಸುದ್ದಿಲೇ ಜೀವನ ಮಾಡ್ತ ಮನೆನೂ ಕಟ್ಟಿಕೊಳ್ಳದೋರಿಗೆ, ಸೈಟು ಕೊಟ್ಟಿದ್ದು ತಪ್ಪಲ್ಲ. ಅದನ್ನ ಕಟ್ಟಿಕೊಳ್ಳೋಕೆ ದುಡ್ಡು ಕೊಟ್ಟಿದ್ದೂ ತಪ್ಪಲ್ಲ ಸಾರ್."

"ಎಷ್ಟೇ ಆಗ್ಲಿ ನೀವೂ ಪತ್ರಕರ್ತರು, ಪತ್ರಕರ್ತರನ್ನ ಎಲ್ಲಿ ಬಿಟ್ಟುಕೊಡ್ತಿರಿ ಹೇಳಿ."

"ಸಾರಾಸಗಟು ನಾನು ಪತ್ರಕರ್ತರ ಪರ ಅನ್ನಬೇಡಿ ಸಾರ್. ನಾನು ಒಳ್ಳೆ ಪತ್ರಕರ್ತರ ಪರ. ಅದ್ರೆ ಪತ್ರವಳಿ ಪತ್ರಕರ್ತರ ವಿರೋಧಿ."

"ಪತ್ರವಳಿ ಪತ್ರಕರ್ತರು ಅಂದ್ರೆ?"

"ಸಾಮಾನ್ಯವಾಗಿ ಯಾಚಕವೃತ್ತೀಲಿ ಕಾಲಾಹಾಕೋರಿಗೆ ಅಂಗಂತರೆ ಸಾರ್. ಮೈಸೂರು ಕಡೆ ಬೀದಿನಾಯಿಗಳಿಗೂ ಆ ಪದ ಬಳುಸ್ತರೆ. ನಿಜವಾದ ಪತ್ರಕರ್ತರಿಗೆ ನಿಮ್ಮಂಥವರು ಹೆದರತರೆ ಸಾರ್."

"ನಾನು ಯಾರಿಗೂ ಹೆದರಲ್ಲ, ಹೆದರೊ ಅಂತದ್ದು ಏನೂ ಮಾಡಿಲ್ಲ. ಮುಂದೂ ಮಾಡಲ್ಲ ಕಂಡ್ರೀ."

"ನಿಜ ಸಾರ್ ವಿಧಾನಸೌಧದಲ್ಲೇ ಬ್ಲೂಫಿಲಂ ನೋಡಿದ ಮಂತ್ರಿಗಳನ್ನು ಸಮರ್ಥಿಸಿಕೊಂಡ ನೀವು ಅದನ್ನೆ ಕುವೆಂಪು ರಂಗಮಂದಿರದಲ್ಲಿ 'ನಿಮ್ಮ ಮನೇಲಿ ನೋಡಲ್ವಾ?' ಅಂತ ಸವಾಲೆಸಿತಿರಲ್ಲಾ, ನಿಜವಾಗ್ಲು ನೀವು ಯಾತಕೂ ಹೇಸಲ್ಲ, ಯಾರಿಗೂ ಹೆದರಲ್ಲ ಸಾರ್."

"ಅಲ್ಲಾ ಕಂಡ್ರಿ, ಪಾಲೇಮಾರು, ಪಾಟೀಲ, ಸವದಿ ನಾನು ಮಾಡಿದ ಮಂತ್ರಿಗಳು. ಯಾಕೆ ಅಂದ್ರೆ ಅವರು ತುಂಬ ಗೌರವಸ್ಥರು, ತುಂಬ ಒಳ್ಳೆ ಜನ. ಅಂಥವರು ಪಾಪ ಏನೊ ಅಕಸ್ಮಾತ್ ತಪ್ಪು ಮಾಡಿದ್ರೆ ಅವರನ್ನ ಟೀಕೆ ಮಾಡೋಕಾಗತ್ತ? ಅವ್ರುರು ಮಂತ್ರಿಗಿರಿಗೆ ರಾಜೀನಾಮೆ ಕೊಡಬಾರ್ದು ಅಂತ ಒತ್ತಡ ಹೇರಿದ್ದೆ. ನಾನೇ ಮುಖ್ಯಮಂತ್ರಿಯಾಗಿದ್ರೆ ಖಂಡಿತ ಅವರು ರಾಜೀನಾಮೆ ಕೊಡಕ್ಕೆ ಬಿಡ್ತಿರಲಿಲ್ಲ."

"ನಿಜ ಸಾರ್, ಹೊರಗಡೆ ಬಂದು ಅವರ ಕೈಲಿದ್ದ ಮೊಬೈಲ್ ಕಿತ್ತಗಂಡು ನೋಡಿ 'ಬೇಷ್' ಅಂದುಬಿಟ್ಟು ನಂತರ ಶೋಭಾ ಮನೆಗೆ ಹೋಯ್ತಿದ್ರಲ್ಲವಾ ಸಾರ್?"

"ಏನ್ರಿ ಅಂಗನ್ನತಿರಿ?"

"ಪರವಾಗಿಲ್ಲ ಬಿಡಿ ಸಾರ್."

"ನೀವು ಬ್ಲೂಫಿಲಂ ನೋಡಿಲ್ವೇನ್ರಿ?"

"ಮದುವೆಗಿಂತ್ಲೂ ಮೊದ್ಲು ಒಂದು ಭಾರಿ ನೋಡಿದ್ದೆ, ಥೂ ಅಸಹ್ಯ ಸಾರ್."

"ಅಸಹ್ಯ ಪಟ್ಟಕೊಬಾರುದ್ರಿ. ಹೆಣ್ಣು ಗಂಡಿನ ಜೀವನದಲ್ಲಿ ನಡಿಯೋ ಅಂತದೇ ಅದು. ನಡಬಾರದ್ದೇನೂ ಇರಲ್ಲ ಅದರಲ್ಲಿ. ಅದ್ಕೇ ನಾನು ನಿಮ್ಮ ಮನೇಲಿ ನೋಡಲ್ವ ಅಂತ ಕೇಳಿದ್ದು."

"ಓಹೋ, ಆ ಅರ್ಥದಲ್ಲಿ ಕೇಳಿದ್ದ ಸಾರ್ ನೀವೂ? ನಿಜಕ್ಕೂ ನಿಮ್ಮ ಲೈಂಗಿಕಾರ್ಥಗಳು ತುಂಬಾ ವಿಶಾಲವಾಗಿವೆ. ಅವಿಭಕ್ತಕುಟುಂಬಕ್ಕೂ ಅನ್ವಯಿಸುತ್ತೆ, ರೂಮುಗಳಿಲ್ಲದ ಮನೆಗೂ ಅನ್ವಯಿಸುತ್ತೆ ರೈಲ್ವೆ ಬೋಗಿ ಕಾರುಗಳಿಗೂ ಅನ್ವಯಿಸುತ್ತೆ ಸಾರ್."

"ನಾನ್ಯಾವತ್ತು ಆತ್ಮವಂಚನೆ ಮಾತಾಡಲ್ಲ, ನೇರವಾಗೆ ಮಾತನಾಡ್ತಿನಿ. ಅದನ್ನ ನಿಮ್ಮಂತ ಪತ್ರಕರ್ತರು ಸರಿಯಾಗಿ ಅರ್ಥಮಾಡಿಕೊಂಡು, ಜನಗಳಿಗೆ ತಿಳಿಸಿ ಈ ನಾಡಿನ ಅಭಿವೃದ್ಧಿಗೆ ಸಹಕಾರಿಯಾಗಬೇಕು."

"ಬ್ಲೂಫಿಲಂ ಗಿರಾಕಿಗಳ ಅಭಿವೃದ್ಧಿನಾ ಸಾರ್?"

"ಪುನಃ ಅದನ್ನೆ ಹೇಳ್ತಿರಲ್ರೀ? ಈಗೆರಡು ವಾರದಿಂದ ಎಲ್ಲೊದ್ರು ಅದೇ ಪ್ರಶ್ನೆ, ಉತ್ತರ ಕೊಟ್ಟು ಕೊಟ್ಟು ಸಾಕಾಗಿದೆ. ಅದು ಬಿಟ್ಟು ಇನ್ನೇನು ಇಲ್ಲವಾ?"

"ಸಾರ್, ಈ ಜಗತ್ತಿನ ಡ್ರೈವಿಂಗ್ ಫೋರ್ಸ್ ಪ್ರಧಾನವಾಗಿ ಎರಡೇ ಎರಡು ಲಂಕೇಶ್ ಹೇಳಿದ್ರು."

"ಯಾವ್ರುರಿ ಅವು ಹೇಳ್ರಿ."


"ಸೆಕ್ಸು ಮತ್ತು ಸೇಡಂತೆ ಸಾರ್. ಬಿಜೆಪಿಲಿ ಇವು ಎರಡೂ ಜಾಸ್ತಿಯಾಗಿ ಇಡೀ ನಾಡೆ ಯಕ್ಕುಟ್ಟಿ ಹೋಯ್ತಾ ಅದೆ. ಸದಾನಂದನ ಟೀಮಲ್ಲಿ ಸೇಡು, ನಿಮ್ಮ ಟೀಮಲ್ಲಿ ಸೆಕ್ಸು, ಈ ಟೈಮಲ್ಲಿ ನೀವೇ ಏನಾರ ಮಾಡಬೇಕು ಸಾರ್."

"ಅದ್ಕೆ ಕಂಡ್ರಿ, ಒಂದು ಒಳ್ಳೆ ಸ್ಥಿರ ಸರಕಾರ ತರಬೇಕು ಅಂತ ಹಗಲೂರಾತ್ರಿ ಹೋರಾಡ್ತಯಿದ್ದಿನಿ. ನಮ್ಮ ಶೋಬಾನು ಮೇಲುಕೋಟೆಗೆ ಹೋಗಿ ಪೂಜೆ ಮಾಡಿಸಿದಾಳೆ."

"ಮೇಲುಕೋಟೆ ನಾಮ ನಚ್ಚಗಳಂಗಿಲ್ಲ ಸಾರ್, ಅವು ನಿಮಗೇ ಬೀಳಬಹುದು."

"ಥೂತ್ತೇರಿ!!!"




ಕಲ್ಲಡ್ಕ ಭಟ್ಟ


ಇಷ್ಟು ದಿನ ಮತಾಂಧ ರೌಡಿ-ಗೂಂಡಾಗಳ ಗ್ಯಾಂಗ್ ಅನ್ನಿಸಿಕೊಂಡಿದ್ದ ಈ ಹಿಂದೂತ್ವ ಟೋಳಿಗಳೀಗ ಕಾಮಾಂಧ ಕೊಳಕರ ಅಡ್ಡೆ ಎಂಬುದು ಸಾಬೀತಾಗಿದೆ. ಗಡಿಗೆಯೊಳಗಿನ ಅಕ್ಕಿ ಅನ್ನವಾಗಿದೆಯಾ ಎಂದು ನೋಡಲು ಒಂದಗುಳು ಪರೀಕ್ಷಿಸಿದರೆ ಸಾಕಲ್ಲವಾ! ಬಿಜೆಪಿ-ಸಂಘಪರಿವಾರದ ಹಲವು ಸ್ಯಾಂಪಲ್ಲುಗಳು ಒಂದೇ ಥರದ ಅಶ್ಲೀಲ-ಅನೈತಿಕ ಗುಣ-ಧರ್ಮ ಸ್ವಯಂ ಸಾಬೀತುಪಡಿಸಿಕೊಂಡಿವೆ. ಒಟ್ಟಿನಲ್ಲೀಗ ಕರಾವಳಿಯ ಬಿಜೆಪಿಯ ರಾಜಕಾರಣ-ಹಿಂದೂತ್ವ ಸೆಕ್ಸ್‌ಮಯವಾಗಿ ಗಬ್ಬೆದ್ದಿದೆ. ಬಿಜೆಪಿ ಬಣ್ಣ ಬಯಲಾಗಿದೆ; ಅದರ ಮಾತೃ ಸಂಸ್ಥೆ ಸಂಘ ಪರಿವಾರದ ಅಸಲಿ ಅವತಾರ ಅನಾವರಣಗೊಂಡಿದೆ. ಚೆಡ್ಡಿಗಳಿಂದ ಕರಾವಳಿಗೆ ಇನ್ನೆಂಥ ಕೇಡು ಕಾದಿದೆಯೋ ರಾಮ.... ರಾಮಾ.....!!

ಕರಾವಳಿ: ಸಂಘ ಪರಿವಾರದ ರಕ್ತ ರಾಜಕಾರಣಕ್ಕೀಗ ಲೈಂಗಿಕ ರಂಗು!!

• ನಹುಷ

ಕರಾವಳಿಯನ್ನು ಅನಾಚಾರದ ಆಡಂಬೋಲ ಮಾಡಿಕೊಂಡಿರುವ ಸಂಘ ಪರಿವಾರದ ಸ್ವಯಂಘೋಷಿತ 'ಸುಬಗ'ರ ಸೋಗಲಾಡಿ ರಾಜಕಾರಣ ಬರೋಬ್ಬರಿ ಮಗ್ಗಲು ಬದಲಿಸಿದೆ! ಕರಾವಳಿ ಹಿಂದೂತ್ವದ ಗ್ಯಾಂಗುಗಳಾದ ಬಿಜೆಪಿ-ಭಜರಂಗಿ-ವಿಹಿಂಪ-ಆರೆಸ್ಸೆಸ್ ರಕ್ತ ಪಿಪಾಸು ಪಾಲಿಟಿಕ್ಸ್ ಈಗ 'ಸೆಕ್ಸ್‌ಟಿಕ್ಸ್' ಆಗಿ ಬದಲಾಗಿಹೋಗಿದೆ!! ಹಾಗೆ ನೋಡಿದರೆ ಪಾತಿವ್ರತ್ಯ ಪಾವಿತ್ರ್ಯ ಶೀಲ, ಸಂಸ್ಕಾರದ ಬಗ್ಗೆ ಉದ್ದುದ್ದ ಭಾಷಣ ಬಿಗಿವ ಕರಾವಳಿ ಸಂಘಪರಿವಾರದ ಶೂರರು ಬಹಿರಂಗವಾಗೇ ಬೆತ್ತಲಾಗಿ ನಿಂತು ವಾಕರಿಕೆ ಹುಟ್ಟಿಸಿರುವುದು ಇದೇ ಮೊದಲೇನೂ ಅಲ್ಲ, ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನ ಹಿಂಬಾಲಕ ಮಂತ್ರಿ-ಶಾಸಕ-ಸಂಸದರಿಗೂ ಲೈಂಗಿಕ ಲಫಡಾಗಳಿಗೂ ಲಾಗಾಯ್ತಿನಿಂದಲೂ ಅದೆಂಥದೋ ನಂಟು ಇದ್ದೇ ಇದೆ!!

ತೀರಾ ಹಿಂದಕ್ಕೆ ಹೋಗಿ ಸಂಘಪರಿವಾರದ ಕಚ್ಚೆಹರುಕ ಸಂಸ್ಕೃತಿಯ ಪೋಸ್ಟ್‌ಮಾರ್ಟಮ್ ಮಾಡಬೇಕೆಂದೇನೂ ಇಲ್ಲ, ಬಿಜೆಪಿ ಬಫೂನ್ ಎಂದೇ ಹೆಸರುವಾಸಿಯಾಗಿರುವ ಧನಂಜಯಕುಮಾರ್‌ನ ರಂಗೀಲಾ ಸಂಸದಗಿರಿಯಿಂದ ಪಾಲೇಮಾರ್‌ನ ಪೋಲಿ ಮಂತ್ರಿಗಿರಿ ತನಕದ ಅವಧಿಯ ಸಂಘಪರಿವಾರದ ಮಡಿಮೈಲಿಗೆ ಪರಿಶೀಲಿಸಿದರೂ ಸಾಕು! ಚಟ ಭಯಂಕರ ಧನಂಜಯ ಮತ್ತು ಬ್ಲೂ ಭಾನ್ಗಡಿಗಳ ಭೂಪ ಪಾಲೇಮಾರ್ ನಡುವೆ ಆರೆಸ್ಸೆಸ್ 'ಡಾನ್'-ಕಾರ್ ಕಾಮಿ ಕಲ್ಲಡ್ಕ ಭಟ್ಟ, ಚಪಲ ಚೆನ್ನಿಗ ನಾಗರಾಜ ಶೆಟ್ಟಿ, ಚೆಡ್ಡಿಲೆಸ್ ರಘುಪತಿ ಭಟ್ಟಗಳ ಕರ್ಮಕಾಂಡ ಒಂದೊಂದಾಗಿ ಬಿಚ್ಚಿಕೊಳ್ಳುತ್ತದೆ....


ನಾಗರಾಜ ಶೆಟ್ಟಿ

ತಿಲ್ಲಾನ ಚತುರ ಧನಂಜಯ್


ಒಂದಲ್ಲ, ಎರಡಲ್ಲ, ಮೂರ್ಮೂರು ಬಾರಿ ಮಂಗಳೂರು-ಕೊಡಗು ಕ್ಷೇತ್ರದಿಂದ ಬಿಜೆಪಿ ಸಂಸದನಾಗಿದ್ದಾತ ದಗಲುಬಾಜಿ ಧನಂಜಯ್‌ಕುಮಾರ್. ವಾಜಪೇಯಿ ಸರ್ಕಾರದಲ್ಲೂ ಈ ರಸಿಕ ಶಿಖಾಮಣಿ ಮೂರು ಸಲ ಮಂತ್ರಿಯೂ ಆಗಿದ್ದ. ಸಂಸದ-ಮಂತ್ರಿಯಾಗಿದ್ದಷ್ಟು ದಿನವೂ ಧನಂಜಯನ ಕೀಚಕತನದ ದಶಾವತಾರಗಳದೇ ಸುದ್ದಿ-ಸದ್ದು ಮಂಗಳೂರು-ಕೊಡಗು-ಬೆಂಗಳೂರು-ದಿಲ್ಲಿ-ಮುಂಬೈಗಳಲ್ಲಿ ಹಾರಾಡಿಕೊಂಡಿತ್ತು, ತನ್ನ ಎಂಪಿ ಕೋಟಾದ ಗ್ಯಾಸ್ ಸಿಲಿಂಡರ್‌ಗಳನ್ನು ಮಂಗಳೂರಿನ ಲೇಡಿಗೋಷನ್ ಆಸ್ಪತ್ರೆಯ ನರ್ಸ್‌ಗಳಿಗೆ ಮಾರಿ ತಿಂದಿದ್ದ ಧನಂಜಯ್. ಅಷ್ಟೇ ಅಲ್ಲ ಸರ್ಕಾರಿ ಆಸ್ಪತ್ರೆಯ ಚೆಂದದ ನರ್ಸ್‌ಗಳಿಗೂ ಗಾಳ ಹಾಕಿದ್ದು ಅಂದು ದೊಡ್ಡ ಸೆಕ್ಸ್ ಸೆನ್ಸೇಷನ್ ಮೂಡಿಸಿತ್ತು,

ಹುಕಿ ಬಂದಾಗೆಲ್ಲ ಚೆಡ್ಡಿ-ಲಾಠಿಯ ಗಣವೇಷಧಾರಿಯಾಗುತ್ತಿದ್ದ ಈ ಮಹಾನ್ ದೇಶಭಕ್ತ ಅದೆಲ್ಲೆಲ್ಲಿ ಚೆಡ್ಡಿ ಕಳಚುತ್ತಿದ್ದನೆಂಬುದು ಆ ಶ್ರೀರಾಮನೇ ಬಲ್ಲ, ಆದರೆ ಆಗಾಗ ಈತನ ಸ್ತ್ರೀಲೋಲುಪತೆಯ ಪುರಾಣ ಮಾತ್ರ ಹಬ್ಬುತ್ತಲೇ ಇತ್ತು, ಅಡ್ಡಕಸುಬಿಂದ ಭರ್ಜರಿ ಬಂಗಲೆ-ಆಸ್ತಿ-ಕಾಸು ಕೂಡಿಹಾಕಿದ್ದ ಧನಂಜಯ್ ಕ್ಷೇತ್ರದ ಸುಖ-ದುಃಖ ಕಡೆಗಣಿಸಿ ಕೊಡಗಿನ ಕಾಫಿ ಬೋರ್ಡ್ ಅತಿಥಿಗೃಹದಲ್ಲಿ ಇಸ್ಪೀಟ್- ಆಟ-ಕಾಮದಾಟದಲ್ಲಿ ಮೈಮರೆಯುತ್ತಿದ್ದನೆಂಬುದು ಎಲ್ಲರಿಗೂ ಗೊತ್ತಾಗಿ ಹೋಗಿತ್ತು. ವಿಚಿತ್ರವೆಂದರೆ, ಬಿಜೆಪಿಯ ಈ ಕಟ್ಟಾಳಿಗೆ ಕಂಪನಿ ಕೊಡುತ್ತಿದ್ದವರು ಮಾತ್ರ ಕಾಂಗ್ರೆಸ್ ಚಟದಾರರಾಗಿತ್ತು.

ವಾಜಪೇಯಿ ಸರ್ಕಾರದಲ್ಲಿ ಆಯಕಟ್ಟಿನ ಹಣಕಾಸು ಖಾತೆಯ ಸಹಾಯಕ ಮಂತ್ರಿಯಾಗಿದ್ದ ಧನಂಜಯ್ ಆದಾಯ ತೆರಿಗೆ ಕಾನೂನು ತನ್ನ ತೀಟೆ ತೀರಿಸಿಕೊಳ್ಳಲು 'ಅಸ್ತ್ರ' ಮಾಡಿಕೊಂಡಿದ್ದು ರೋಚಕ ಕತೆಗಳಿಗೆಡೆಮಾಡಿತ್ತು. ತನ್ನ ಮಗಳ ವಯಸ್ಸಿನ ಬಾಲಿವುಡ್ ನಟಿಯರನ್ನು ಐಟಿ ದಾಳಿಯಿಂದ ಬಚಾಯಿಸುವುದಾಗಿ ಹೇಳಿ ಚಂದ್ರಮಂಚಕ್ಕೆ ಕರೆಯುತ್ತಾನೆ ಈ ಹಿಂದೂವಾದಿ ಮಂತ್ರಿಯೆಂಬ ಗುಲ್ಲೆದ್ದಿತ್ತು. ಮಾಜಿ ವಿಶ್ವಸುಂದರಿ, ಹಾಲಿ ಪ್ರಖ್ಯಾತ ಹಿಂದಿ ಸಿನಿಮಾ ನಟಿಯೊಬ್ಬಳಿಗೆ ಐಟಿ ಭೂತ ತೋರಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದು ಅಂತಿಮವಾಗಿ ಅಂದಿನ ಪಿಎಂ ವಾಜಪೇಯಿಯನ್ನೇ ಕೆರಳಿಸಿಬಿಟ್ಟಿತ್ತು. ಈ ಸೆಕ್ಸ್ ಕಾಂಡ ಧನಂಜಯನ ಹಣಕಾಸು ಮಂತ್ರಿಗಿರಿಗೆ ಸಂಚಕಾರ ತಂದಿಟ್ಟಿತ್ತು. ಆ ಬಳಿಕ ಇದನ್ನೇ ದೊಡ್ಡದು ಮಾಡಿದ ಪ್ರತಿಸ್ಪರ್ಧಿ ಮಂತ್ರಿ ಅನಂತ್‌ಕುಮಾರ್ (ಶಾಸ್ತ್ರಿ) ಧನಂಜಯ್ ಮತ್ತೆಂದೂ ಕೇಂದ್ರ ಮಂತ್ರಿಯಾಗದಂತೆ ಮಾಡಿಬಿಟ್ಟಿದ್ದರು. ಅಷ್ಟೇ ಅಲ್ಲ ಆತನಿಗೆ ಮಂಗಳೂರು ಪಾರ್ಲಿಮೆಂಟರಿ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸುವ ಅವಕಾಶಕ್ಕೂ ಕಲ್ಲು-ಹಾಕಿದ್ದರು.

ಧನಂಜಯ್ ಭಾನ್ಗಡಿಗಳಲ್ಲಿ ಸಿಕ್ಕಿಬಿದ್ದಾಗೆಲ್ಲ ಆತನಿಗೆ ಸ್ವಜಾತಿ (ಜೈನ್) ದೊರೆಗಳಾದ ಮಧ್ಯಪ್ರದೇಶದ ಸುಂದರ್‌ಲಾಲ್ ಪಟ್ವಾ ಬಿಳಗಿ, ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಪರಿವಾರ ಬಚಾಯಿಸುತ್ತ ಬಂದಿತ್ತು. ಆದರೆ ಕೈ-ಕಚ್ಚೆ ಕೆಡಿಸಿಕೊಂಡಿದ್ದ ಧನಂಜಯ್ ಆರೆಸ್ಸೆಸ್ ರಿಂಗ್‌ಮಾಸ್ಟರ್ ಡಾ. ಕಲ್ಲಡ್ಕ ಭಟ್ಟನ ಕೆಂಗಣ್ಣಿಗೆ ತುತ್ತಾದಾಗ 'ಡಾಗ್ ಹೌಸ್' ಸೇರಬೇಕಾಗಿ ಬಂತು. ಧನಂಜಯ್ ಬದಲಿಗೆ ಮಂಗಳೂರು ಎಂಪಿಗಿರಿ ಟಿಕೆಟ್ ಅನ್ನು ಬಿಜೆಪಿ ಸದಾನಂದ ಗೌಡರಿಗೆ ಕೊಟ್ಟಿತ್ತು. ಹೀಗೆ ಮೂಲೆಗುಂಪಾಗಿದ್ದ ಧನಂಜಯನನ್ನು ಮತ್ತೆ ಚಲಾವಣೆಗೆ ತಂದಿದ್ದು ಎಡವಟ್ಟು ಯಡ್ಡಿ. ಯಡ್ಡಿಗೆ ತನ್ನೆಲ್ಲ ಅವ್ಯವಹಾರ-ಅವಾಂತರ-ಅನ್ಯಾಯ ಮಾಧ್ಯಮದ ಮುಂದೆ ನಿರ್ಲಜ್ಜವಾಗಿ ಸಮರ್ಥಿಸಿಕೊಳ್ಳುವ ಹರಕುಬಾಯಿ ವಕ್ತಾರರೊಬ್ಬನ ಅವಶ್ಯಕತೆಯಿತ್ತು.

ಈ ದಗಲುಬಾಜಿ ಗುಣಧರ್ಮ ಧನಂಜಯನಲ್ಲಿತ್ತು, ಹಾಗಾಗಿ ಯಡ್ಡಿ ಆತನಿಗೊಂದು ಗೂಟದ ಕಾರು-ಸರ್ಕಾರಿ ಸಂಬಳ (ಸರ್ಕಾರದ ದಿಲ್ಲಿ ಪ್ರತಿನಿಧಿ)ದ ಸ್ಥಾನ-ಮಾನ ಕೊಟ್ಟಿದ್ದರು. ಈತ ಸರ್ಕಾರದ ಕೆಲಸ ದಿಲ್ಲಿ ಬೆಂಗಳೂರಲ್ಲಿ ಏನೇನೂ ಮಾಡಲಿಲ್ಲ, ಮಾಡ್ತಿದ್ದೆಲ್ಲ ಭ್ರಷ್ಟ-ಭಂಡ ಯಡ್ಡಿಯ ಪರ ಲಾಬಿ. ಒಮ್ಮೆಯಂತೂ ಧನಂಜಯ್ ಕರಾವಳ ಮೂಲದ ಸಂಬಂಧದ ನೆಪದಿಂದ ನಿಷ್ಠೂರ-ನ್ಯಾಯವಂತ-ಪ್ರಾಮಾಣಿಕ ಲೋಕಾಯುಕ್ತರಾಗಿದ್ದ ನ್ಯಾ. ಸಂತೋಷ್ ಹೆಗ್ಡೆ ಮನೆಗೇ ಹೋಗಿ ಯಡ್ಡಿಯನ್ನು ಕೇಸೊಂದರಲ್ಲಿ ಬಚಾಯಿಸುವಂತೆ ಕೇಳಿ ಉಗಿಸಿಕೊಂಡು ಬಂದಿದ್ದ ಇಂಥ ಕಾನೂನುಬಾಹಿರ ಮಸಲತ್ತು-ಮೋಜು-ಮಸ್ತಿಯ ಧನಂಜಯ್ ಸಂಘಪರಿವಾದ ಸಂಸ್ಕೃತಿಯ ಒರಿಜಿನಲ್ ಸಂಕೇತದಂತಿದ್ದಾನೆ.


ರಘುಪತಿ ಭಟ್ಟ

ಕಾರ್ ಕಸರತ್ತಿನ ಕಲ್ಲಡ್ಕ

ಕರಾವಳಿ ಸಂಘ ಪರಿವಾರದ ಸಕಲ ಸೂತ್ರ ಕಲ್ಲಡ್ಕ ಪ್ರಭಾಕರ್ ಭಟ್ ಎಂಬ ಅನಾಹುತಕಾರಿ ಆರೆಸ್ಸೆಸ್ ಲೀಡರನ ಕೈಯ್ಯಲಿದೆ. ಹಿಂದೂ ಸಂಸ್ಕೃತಿಯ ಪಾಲಕ-ಪೋಷಕ ತಾನೆಂದು ತನಗೆ ತಾನೇ ಆರೋಪಿಸಿಕೊಂಡಿರುವ ಭಟ್ಟ ಹೇಳೋದು ವೇದ. ಆದರೆ ಹಾಕೋದು ಮಾತ್ರ "......"ಯಲ್ಲೇ ಗಾಳ! ದಕ್ಷಿಣ ಕನ್ನಡವನ್ನು ಅನೈತಿಕ ಪೊಲೀಸ್‌ಗಿರಿಯ ಪ್ರಯೋಗಶಾಲೆ ಮಾಡಿರುವ ಈ ಭಟ್ಟ ಮಾಡೋದೆಲ್ಲಾ ಅನಾಚಾರವೇ. ತನ್ನ ಚೆಡ್ಡಿ ಶಾಲೆಗೆ ಅಕ್ರಮವಾಗಿ ಹಣ ಕೂಡಿಸುವುದರಿಂದ ಹಿಡಿದು ಕಾರಲ್ಲೇ ಕಸರತ್ತು ಮಾಡುವ ತನಕ ಭಟ್ಟ ಹಲವು ಘಟನೆಗಳಲ್ಲಿ ಹಿಂದೂತ್ವದ ಅಸಲಿ ಗುಣಧರ್ಮ ತೋರಿಸಿದ್ದಾನೆ.

ಹಿಂದೂ ಹುಡುಗೀರು ಸಾಬರ ಹುಡುಗರೊಂದಿಗೆ ಮಾತಾಡಬಾರದು, ಹೆಣ್ಮಕ್ಕಳು ಪಬ್ಬಿಗೆ ಹೋಗಬಾರದು, ಹುಡುಗೀರು ಜೀನ್ಸ್ ತೊಡಬಾರದು, ದನ ಸಾಗಟ ಸಾಬಿಗಳು ಮಾಡಬಾರದು (ಹಿಂದೂಗಳು ಮಾಡಬಹುದು) ಎಂಬಿತ್ಯಾದಿ "ಶೀಲವಂತಿಕೆ" ಫರ್ಮಾನು ಹೊರಡಿಸಿ ಹಿಂದೂತ್ವದ ಬಿಸಿನೆಸ್ ಮಾಡುತ್ತಿರುವ ಭಟ್ಟನ ಪರಿವಾರ ಪರಾಕ್ರಮಿಗಳು ಮಾಡಬಾರದ್ದೇ ಮಾಡಿ ಮಾನ ಕಳೆದುಕೊಂಡಿದ್ದಾರೆ. ಕಲ್ಲಡ್ಕನ ಅಧಿಕಾರಸ್ಥ ಸಹಚರರು ನಡುಬೀದಿಯಲ್ಲೇ ಚೆಡ್ಡಿ ಕಳಚಿ ನಿಂತಿದ್ದಾರೆ. ಆಗೆಲ್ಲ ಭಟ್ಟ ಕಳ್ಳ ಬೆಕ್ಕಂತೆ ಕಣ್ಮುಚ್ಚಿ ಹಿಂದೂತ್ವದ ರಕ್ಷಣೆಯ ಪೋಸು ಕೊಟ್ಟಿದ್ದಾನೆ.


ಆರೆಸ್ಸೆಸ್ ಕಟ್ಟಾಳುಗಳಾದ ಮಾಜಿ ಮಂತ್ರಿ ನಾಗರಾಜ್ ಶೆಟ್ಟಿ, ಶಾಸಕ ರಘುಪತಿ ಭಟ್ಟ, ಮಾಜಿ ಮಂತ್ರಿ ಪಾಲೇಮಾರ್, ಧನಂಜಯ್ ಕುಮಾರ್ ಮತ್ತಿತರ ಮರಿ ಹಿಂದೂ ಪುಢಾರಿಗಳು ಲೈಂಗಿಕ ಹಗರಣ ನಡೆಸಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದರೂ ಈ 'ಗುರೂಜಿ' ಮಾತ್ರ ತುಟಿಪಿಟಿಕ್ ಎಂದಿಲ್ಲ, ಆ ತೆವಲುಗಾರರ ವಿರುದ್ಧ ಮಾತಾಡುವ ನೈತಿಕತೆಯಾದರೂ ಎಲ್ಲಿದೆ. ಈ ಹಿಂದೂತ್ವದ ಹರಿಕಾರನಿಗೆ ಪಾಪ! ಆತನದೇ ಸೆಕ್ಸ್ ಸ್ಕ್ಯಾಂಡಲ್ ಕೆಲವು ವರ್ಷದ ಹಿಂದೆ ಕಲ್ಲಡ್ಕ ಪರಿಸರದಲ್ಲಿ ಭುಗಿಲೆದ್ದು ಅಲ್ಲಿಗೆ ತಣ್ಣಗಾಗಿ ಹೋಗಿತ್ತು. ಕಲ್ಲಡ್ಕರ ಕಾರು ಒಮ್ಮೆ ಸಂದಿಗೊಂದಿಗಳಲ್ಲಿ ನಿಂತು ತನ್ನಷ್ಟಕ್ಕೇ ಶೇಕ್ ಆಗಿದ್ದು ಆಗ ಟಾಕ್ ಆಫ್ ದಿ ಟೌನ್ ಆಗಿತ್ತು. ಅದರಲ್ಲೊಂದು ಬುರ್ಖಾಧಾರಿಣಿ ಇದ್ದಿದ್ದಳೆಂಬ ಸುದ್ದಿ ಹಬ್ಬಿತ್ತು, ಇನ್ನೊಮ್ಮೆ ಹಿಂದೂ 'ಮಾತೆ'ಯೇ ಕಾರಲ್ಲಿ ಇದ್ದಳು ಎಂದೂ ರಂಗುರಂಗಿನ ಕತೆ ಹಬ್ಬಿತ್ತು.

ಈ 'ದೃಶ್ಯಾವಳಿ' ಕಂಡರೆಂಬ ಕಾರಣಕ್ಕೆ ಮುಸ್ಲಿಮ್ ಬಾಲಕರಿಬ್ಬರ ಮೇಲೆ ಸುಳ್ಳು ಕೇಸೊಂದು ಜಡಿಯಲಾಗಿತ್ತು. ಆರೆಸ್ಸೆಸ್ ಸರದಾರನ ಕಾರು 'ಚಲಾವಣೆ'ಗೆ ಅಡ್ಡಿಪಡಿಸಿ ಭಯ ಮೂಡಿಸಿದರೆಂಬ ಪ್ರಕರಣ ಅದಾಗಿತ್ತು. ಆದರೆ ಈ 'ಕಾರ್ ಶೇಕ್' ಹಗರಣವನ್ನು ಕಲ್ಲಡ್ಕ ಭಟ್ರು ತಮ್ಮ ಕಾಂಗ್ರೆಸ್ ಮಿತ್ರರ ಸಹಕಾರದಿಂದಲೇ ಮುಚ್ಚಿಹಾಕಿ ಹಿಂದೂತ್ವದ ರಾಜಕಾರಣದಲ್ಲಿ ನಿರಾತಂಕವಾಗಿ ತೊಡಗಿಸಿಕೊಂಡರು. ಈಗಂತೂ ಕರಾವಳಿಯಲ್ಲಿ ಆತನೇ ಸರ್ಕಾರ, ಸಿಎಂ, ಎಸ್ಪಿ, ಡಿಸಿ.....

ನಾಗೋನ್ಮಾದ!!

ಪಾಳೆಗಾರಿ ಪೊಗರಿನ ಶಿಪ್ಪಿಂಗ್ ಕುಳ ಬೈಲುಮೇಗಿನವನಾದ ನಾಗರಾಜ ಶೆಟ್ಟಿ ಕುಮಾರಸ್ವಾಮಿ ಸರ್ಕಾರದಲ್ಲಿ ಬಿಜೆಪಿ ಕೋಟಾದಿಂದ ಬಂದರು ಮುಜ ರಾಯಿ ಮಂತ್ರಿಯಾಗಿದ್ದಾಗ ಸೆಕ್ಸ್ ವಿಕೃತಿ ಮಾಡಿ ಕುಪ್ರಸಿದ್ಧನಾಗಿದ್ದ! ಅಡಿಕೆ-ತೋಟಿಗರ ಜೀವಾಳ 'ಕ್ಯಾಂಪ್ಕೋ'ದ ಅಧ್ಯಕ್ಷನಾಗಿದ್ದಾಗ ಗೋಣಿಚೀಲಗಳನ್ನೇ ಸ್ವಾಹಾ ಮಾಡಿ 'ಗೋಣಿನಾಗ'ನೆಂಬ ಅಡ್ಡಬಿರುದು ಪಡೆದಿದ್ದ ನಾಗರಾಜ ಶೆಟ್ಟಿ 'ಕೋಜಾ' ಸರ್ಕಾರ ಸ್ಥಾಪನೆ ಹೊತ್ತಲ್ಲಿ 'ಲೇವಾದೇವಿದ್ಹಾರ'ನಾಗಿದ್ದ.

ಇಂಥ ಗೋಣಿ ನಾಗ ದಕ್ಷಿಣ ಕನ್ನಡದ ಉಸ್ತುವಾರಿ ಮಂತ್ರಿಯಾಗಿದ್ದಾಗ 'ಮಂಗಳೂರಿನ ಮೋದಿ' ಎಂದೇ ಕರೆಯಲ್ಪಡುವಷ್ಟು ಕಮ್ಯುನಲ್ ಪಾತಕ ಮಾಡಿದ್ದ. ಆರೆಸ್ಸೆಸ್ ಬಾಸ್ ಕಲ್ಲಡ್ಕನ ಸಂಪ್ರೀತಗೊಳಿಸಲು ಈ ಗೋಣಿನಾಗ ದಿನಕ್ಕೊಂದು ಕೋಮು ಕಿತಾಪತಿ ಎಬ್ಬಿಸುತ್ತಿದ್ದ. ಇತ್ತ ದಕ್ಷಿಣ ಕನ್ನಡ ಹೊತ್ತಿಯುರಿಯುತ್ತಿದ್ದರೆ ಅತ್ತ ಬೆಂಗಳೂರು-ಮಂಗಳೂರಿನ ಬಂಗಲೆಗಳಲ್ಲಿ ಈತ 'ಪಿಟೀಲು'ವಾದನ ಮಾಡುತ್ತ ಮೈಮರೆಯುತ್ತಿದ್ದ. ತಲೆಗೊಂದು ಕಾಸಗಲದ ಕುಂಕುಮ, ಕಿವಿಗೆ ಬೆಂಡೋಲೆ ಹಾಕಿಕೊಂಡು ಹಿಂದೂತ್ವದ ಅಪರಾವತಾರ ಎಂಬಂತೆ ಪೋಸು ಕೊಡುತ್ತಿದ್ದ ಈ 'ಅರ್ಜುನ ಸನ್ಯಾಸಿ' ಅಂದು ಮಾಡಿದ ರಂಗೀಲಾ ರಗಳೆ ಇಂದಿಗೂ ಅಷ್ಟೂ ಚೆಡ್ಡಿ ಚತುರರ ಬಾಯಲ್ಲಿದೆ!


ಧನಂಜಯ್


ಪರಮ ಪವಿತ್ರ ಹಿಂದೂವಾದಿಯ ಗೆಟಪ್ಪಿನಲ್ಲಿ ಅಂಡಲೆಯುತ್ತಿದ್ದ ಗೋಣಿನಾಗ ತನ್ನ ಮಂತ್ರಿಗಿರಿ ಆಫೀಸಿನ ಸಿಬ್ಬಂದಿಯೊಬ್ಬನ ಹೆಂಡತಿಯೊಂದಿಗೆ ಡಿಂಗ್‌ಡಾಂಗ್ ನಡೆಸಿದ್ದು ಅಂದು ದೊಡ್ಡ ಹಗರಣವಾಗಿತ್ತು. ಮಂತ್ರಿ ನಾಗನ ಸಹಾಯಕ ರಾಮು ಎಂಬಾತ ಆಗತಾನೆ ಚಿಂತಾಮಣಿ ಕಡೆಯ ಹೆಣ್ಣನ್ನು ಮದುವೆಯಾಗಿದ್ದ. ಅಸಹಾಯಕ ಹೆಂಗಸರೆಂದರೆ ವಿಪರೀತ ಕಾಳಜಿ

ನೀಲಿ ಚಿತ್ರವೂ ಪೋಲಿ ಪಾಲೇಮಾರನೂ!!

ಬ್ಲೂ ಫಿಲಂ ಭಾನ್ಗಡಿಯಲ್ಲಿ ಕೈ-ಕಾಲು-ಬಾಲ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿರುವ ಮಂಗಳೂರಿನ ಗಂಡಾಗುಂಡಿ ಪುಢಾರಿ ಕೃಷ್ಣ ಪಾಲೇಮಾರ್ ತನ್ನ ಪಾಪಕೃತ್ಯ ಮರೆಮಾಚಲು ಈಗ ದಿನಕ್ಕೊಂದು 'ಆಟ' ಆಡುತ್ತಿದ್ದಾನೆ. "ನಾನು ಅಸೆಂಬ್ಲಿಯ ಚಿತ್ರ ನೋಡಲೇ ಇಲ್ಲ... ಯಾರಿಗೂ ಅದನ್ನು ಎಂಎಂಎಸ್ ಮಾಡಿಲ್ಲ... ನಂಗೆ ಮೊಬೈಲ್ ಟೆಕ್ನಾಲಜಿ ಒಂಚೂರೂ ಗೊತ್ತಿಲ್ಲ.... ಮೆಸೇಜ್-ದೃಶ್ಯ ಬೇರೆ ಮೊಬೈಲ್‌ಗೆ ಕಳಿಸಲಿಕ್ಕೂ ಬರೋದಿಲ್ಲ....." ಎಂದೆಲ್ಲಾ ಒಂದೇಸಮನೆ ಹಸಿ-ಹಸೀ ಸುಳ್ಳನ್ನೇ ಬೊಗಳುತ್ತಿದ್ದಾನೆ. ಮಜಾ ಎಂದರೆ, ಈ ಮೂರನೇ ದರ್ಜೆ ರಾಜಕಾರಣಿ ತಾನು ಸಂಭಾವಿತ ನೆಂದು ಬಿಂಬಿಸಲು ಹವಣಿಸಿದಂತೆಲ್ಲ ಆತ ತಂತಾನೆ ಸಾರ್ವಜನಿಕರೆದುರು ಪಕ್ಕಾ ಪಾಪಿ ಎಂದು ಸ್ವಂಸಾಬೀತಾಗುತ್ತಿದ್ದಾನೆ!

ಎತ್ತಿಂದೆತ್ತ ಲೆಕ್ಕ ಹಾಕಿ ತಾಳೆ ನೋಡಿದರೂ ಬ್ಲೂಜೆಪಿಗಳ ಈ ಸೆಕ್ಸ್ ಸ್ಕ್ಯಾಂಡಲ್‌ನ ಮೂಲ ಪುರುಷನೇ ಪಾಲೇಮಾರ್ ಎಂಬುದು ಸಾಕ್ಷ್ಯಾಧಾರ ಸಮೇತ ಖಾತ್ರಿಯಾಗುತ್ತದೆ. ಸದನದಲ್ಲೇ ಮಂತ್ರಿತ್ರಯರು ಗ್ಯಾಂಗ್ ಅಪ್ ಆಗಿ ಚಪ್ಪರಿಸುತ್ತ ನೋಡಿದ ಆ ಅಶ್ಲೀಲ ಸಿನಿಮಾದ ಹಿನ್ನೆಲೆ ಹುಡುಕುತ್ತ ಹೋದರೆ ಹೋಗಿ ನಿಲ್ಲುವುದೇ ಮಂಗಳೂರು ಅಥವಾ ದಕ್ಷಿಣ ಕನ್ನಡದ ಯಾವುದಾದರೂ ತಾಲ್ಲೂಕಲ್ಲಿ. ದಕ್ಷಿಣ ಕನ್ನಡಕ್ಕೆ ಹೊಂದಿಕೊಂಡಿರುವ ಕೇರಳದಲ್ಲಿ ತಯಾರಾದ ಈ ಹಲ್ಕಟ್ ಚಿತ್ರ ಇಲ್ಲಿಗೆ ಒಂದು ವರ್ಷದ ಹಿಂದಿಂದಲೇ ಮಂಗಳೂರು ಮತ್ತದರ ಆಜುಬಾಜಲ್ಲಿ ಹರಿದಾಡುತ್ತಿದೆ. ಸುಮಾರು ನಾಲ್ಕೂವರೆ ನಿಮಿಷದ ಈ 'ಬೆತ್ತಲೆ ಸೇವೆ' ದಕ್ಷಿಣ ಕನ್ನಡದ ಪಡ್ಡೆ ಹೈಕಳ ಮತ್ತು ವಿಐಪಿ ಸುಬಗರ ಮೊಬೈಲ್‌ನಲ್ಲಿ ಲೋಡಾಗಿ ಹಾವಳಿ ಇಡುತ್ತಿದೆ. ಇದರಲ್ಲಿ ಯಾವುದೇ ರೇಪ್ ಅಥವಾ ಒತ್ತಡಕ್ಕೆ ಬೆತ್ತಲಾಗುವುದಾಗಲಿ ಇಲ್ಲ. ಲೋಫರ್ ಲಕ್ಷ್ಮಣ ಸವದಿ ಹೇಳೋ ಥರ ವಿದೇಶಿ ಹುಡುಗಿಯ ರೇಪ್ ಅಂಡ್ ಮರ್ಡರ್ ಸ್ಟೋರಿಯೂ ಇಲ್ಲ. ಇಲ್ಲಿರೋದೆಲ್ಲ ಖುಲ್ಲಮ್ ಖುಲ್ಲಾ....

ಈ ಸಿನಿಮಾದ ಕಪ್ಪು ಸೀರೆ 'ಹೀರೋಯಿನ್'ಳನ್ನು ದಕ್ಷಿಣ ಕನ್ನಡ ಹಿಂದೂತ್ವ ಸಂತತಿ ಸುಬಗರು ಮುಸ್ಲಿಮ್ ಹುಡುಗಿಯೆಂದು ಗುಲ್ಲೆಬ್ಬಿಸಿದ್ದರು. ಆಕೆಯ ಬಿಚ್ಚಾಟಕ್ಕೆ ತಕ್ಕಂತೆ ಅದರಲ್ಲಿ ಮಲೆಯಾಳಂ ಮತ್ತೆ ಬ್ಯಾರಿ ಭಾಷೆಯ ಸಮ್ಮಿಶ್ರ ವಲ್ಗರ್ ಹಾಡೊಂದನ್ನು ಸೇರಿಸಲಾಗಿದೆ. ಹಾಡಿನ ಆರಂಭದ ಸಾಲಲ್ಲೇ "ಪಾಸಿಲಾ.... ಪಾಸಿಲಾ...." ಎಂಬ ಪಲ್ಲವಿಯಿದೆ. ಕೇರಳದ ಮಾಪ್ಪಿಳ್ಳೆ ಹಾಡೊಂದನ್ನು ಡಬ್ಬಿಂಗ್ ಮಾಡಿ ಹೊಲಸಾತಿ ಹೊಲಸು ಹಾಡು ಹೊಸೆಯಲಾಗಿದೆ. ನೀಲಿ ನೃತ್ಯಗಾರ್ತಿ ಸಾಬಿಯೆಂದು ಬಿಂಬಿಸಿದ್ದರಿಂದ ಈ ಬ್ಲೂಫಿಲಂ ಹಿಂದೂ ಕೇಡರ್‌ಗಳ ಮೊಬೈಲ್‌ನಲ್ಲೇ ಜಾಸ್ತಿ ಹರಿದಾಡಿತ್ತು. ಹೀಗಾಗಿ ಹಿಂದೂ ಪುಂಡ-ಪೋಕರಿಗಳ ಚಂಡ-ಪ್ರಚಂಡ ಮುಖಂಡನಂತಿರುವ-ಜಿಲ್ಲಾ ಉಸ್ತುವಾರಿ ಮಂತ್ರಿಯೂ ಆಗಿದ್ದ ಪಾಲೇಮಾರ್ ಸಾಹೇಬರ ಹೈಟೆಕ್ ಮೊಬೈಲಿಗೂ ಸದಾ-ಸೀದಾ ಬಂದು ತಲುಪಿದೆ.



ಮುಸ್ಲಿಮ್ ಹುಡುಗಿಯರೆಂದ ಮೇಲೆ ಆ ಪರಮ ಪೋಲಿ ಚಿತ್ರ ಹಿಂದೂತ್ವದ ಸರ್ಕಾರದ ಮಂತ್ರಿ ಪಾಲೇಮಾರ್ ನೋಡದಿದ್ದರೆ ಹೇಗೆ? ಹಿಂದೂ ಸಂಸ್ಕೃತಿಯ ಉತ್ಥಾನವಾಗೋದಾದರೂ ಹೇಗೆ? ಅದನ್ನು ಪಾಲೇಮಾರ್ ರಾಜ್ಯ ಮಟ್ಟದಲ್ಲಿ ಪ್ರದರ್ಶಿಸದಿದ್ದರೆ ಹಿಂದೂತ್ವಕ್ಕೆ ಅಪಚಾರ ಮಾಡಿದಂತಲ್ಲವಾ? ಅಷ್ಟೇ ಅಲ್ಲ, ಇಂಥ ದೇವರ ಚಿತ್ರ ಬ್ಲೂಬಿಜೆಪಿಯ ಮುಂಚೂಣಿ ಮಹಾಮಹಿಮರಿಗೆ ತೋರಿಸಿದರೆ ಪಾಲೇಮಾರ್ ತೂಕ ಸಂಘ ಪರಿವಾರದಲ್ಲಿ ಹೆಚ್ಚಾಗುತ್ತದಲ್ಲವಾ? ಇಂಥ ದೂ(ದು)ರಾಲೋಚನೆಯಿಂದಲೇ ಚೆಡ್ಡಿ ಪಾಲೇಮಾರ್ ಬ್ಲೂನರ್ಸ್ ಸರಕನ್ನು ಅಸೆಂಬ್ಲಿಯಲ್ಲೇ ಬಿತ್ತರಿಸಿ ಕೃತಾರ್ಥನಾಗಿದ್ದಾನೆ!! ಈ ನೈತಿಕ ಅಧಃಪತನದ ಕಾರ್ಯಾಚರಣೆ ಇದೆಯಲ್ಲ, ಅದು ಪಾಲೇಮಾರನ ಪೂರ್ವಾಶ್ರಮದ ಪ್ರೀತಿಯ ಕಸುಬೇ!

ಸಂಘಪರಿವಾರದ ಶೂರ ಪಾಲೇಮಾರ್ ಮಾಡಿರುವ 'ಸಾಹಸ' ಸಾಮಾನ್ಯವೇನಲ್ಲ! ಐಪಿಸಿ ೨೯೨ ವಿಭಾಗ ೧೦ ಮತ್ತು ರಾಜ್ಯ ಚಲನಚಿತ್ರ ಪ್ರದರ್ಶನ ನಿಯಮಾವಳಿ ಪ್ರಕಾರ ಅಶ್ಲೀಲ ಸರಕು ನಿರ್ಮಿಸುವುದು ಅಥವಾ ಹಂಚುವುದು ಶಿಕ್ಷಾರ್ಹ ಅಪರಾಧ! ಅಪರಾಧಿಗೆ ಎರಡು ವರ್ಷ ಶಿಕ್ಷೆ ಮತ್ತು ೨ ಸಾವಿರ ರೂ. ದಂಡ ವಿಧಿಸಲಾಗುತ್ತದೆ!! ವಿ. ಸುಂದರ್ ರಾಜನ್ V/s ಮದ್ರಾಸ್ ಸರ್ಕಾರ (Cri.P.C. 376/1978) ಕೇಸ್ ಸೆಕ್ಷನ್ ೨೯೨ ಪ್ರಕಾರ ಮದ್ರಾಸ್ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಂದಿತ್ತು. ಆ ಪ್ರಕರಣದಲ್ಲಿ ನೀಲಿ ಚಿತ್ರ ಮತ್ತೊಬ್ಬರಿಗೆ ಹಂಚುವುದು ಶಿಕ್ಷಾರ್ಹ ಅಪರಾಧವೆಂದು ತೀರ್ಪು ಬಂದಿತ್ತು! ೨೦೧೦ ರಲ್ಲಿ ಬಾಂಬೆ ಹೈಕೋರ್ಟ್ ಕೂಡ ಬ್ಲೂಫಿಲಂ ಮಾರಾಟ, ಸಾರ್ವಜನಿಕವಾಗಿ ನೋಡೋದು ಶಿಕ್ಷಾರ್ಹ ಅಪರಾಧವೆಂದು ಹೇಳಿತ್ತು. ಹೀನ ಸುಳಿಯ ಪಾಲೇಮಾರನಿಗೆ ಜೈಲೂಟ ಉಣ್ಣಿಸಲು ಇದಿಷ್ಟು ಸಾಕಲ್ಲವಾ?

ಮಾಡಬಾರದ್ದು ಮಾಡಿ ಜನರಿಂದ "ಥೀ.... ಥೂ" ಎಂದು ಉಗುಳಿಸಿಕೊಳ್ಳುತ್ತಿದ್ದರೂ ಪಾಲೇಮಾರ್‌ಗೆ ಅಧಿಕಾರದಾಹ ಮಾತ್ರ ಕಮ್ಮಿಯಾಗಿಲ್ಲ. ಕಳೆದುಕೊಂಡಿರುವ ಅಧಿಕಾರ (ಮಂತ್ರಿಗಿರಿ) ಮತ್ತೆ ಪಡೆಯಲು, ಆತ ತನ್ನ ದೋನಂಬರ್ ದಂಧೆಕಾರ ಹಿಂಬಾಲಕರನ್ನು ಬೀದಿಗಿಳಿಸಿ ಗೌಜಿ ಮಾಡಿಸುತ್ತಿದ್ದಾನೆ. ಮಂಗಳೂರಲ್ಲಿ ತನ್ನ ಮಾನ-ಮರ್ಯಾದೆಗೆ ಚ್ಯುತಿಯೇ ಬಂದಿಲ್ಲವೆಂದು ತೋರಿಸಲು ಪಾಲೇಮಾರ್ ಭೂ-ಮರಳು-ಕೇಬಲ್ ಮತ್ತು ಕ್ರಿಮಿನಲ್ ಮಾಫಿಯಾದವರನ್ನು ಛೂಬಿಟ್ಟು 'ಬೋಪರಾಕ್' ಸಭೆಗಳನ್ನು ಮಾಡಿಸುತ್ತಿದ್ದಾನೆ. ಈ ಅಡ್ಡ ಕಸುಬಿಗಳೆಲ್ಲ ಪಾಲೆಮಾರ್ ಪರ್ವದಲ್ಲಿ ಅಡ್ಡಡ್ಡ ಬೆಳೆದ ನರರಕ್ಕಸರು. ಮೊದಲು ಪಾಲೇಮಾರನ ಸ್ವಕ್ಷೇತ್ರ ಸುರತ್ಕಲ್‌ನಲ್ಲಿ ಬ್ಲೂಫಿಲಂ ಅಭಿಮಾನಿಗಳ ಅರ್ಥಾತ್ ನೀಲಿ ಚಿತ್ರ ಹಂಚಿಕೆದಾರ ಪಾಲೇಮಾರ್ ಬೆಂಬಲಿಗರ ಸಭೆ ನಡೆಯಿತು. ಒಂದಿಷ್ಟು ದುಡ್ಡು ಕೊಟ್ಟು ತಂದ ಬಾಡಿಗೆ ಜನರಷ್ಟೇ ಈ 'ರ‍್ಯಾಲಿ'ಯಲ್ಲಿ ಸೇರಿದ್ದರು. ಬಿಲ್ಡರ್ಸ್ ಮಾಫಿಯಾದ ದೊರೆಯಂತಿರುವ ಪಾಲೇಮಾರ 'ಮಾನ ಮುಚ್ಚುವ' ಈ ಸಭೆಯನ್ನು ಆಯೋಜಿಸಿದ್ದೇ ಬಿಲ್ಡರ್ಸ್ ಅಸೋಸಿಯೇಷನ್‌ನವರಾಗಿತ್ತು.

ಮರುದಿನ ಮಂಗಳೂರಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾಜಿ ಮೇಯರ್ ಶಂಕರ ಭಟ್, ಅಜೀಜ್ ಬೈಕಂಪಾಡಿ ಮತ್ತು ಹಾಲಿ-ಮಾಜಿ ಕಾರ್ಪೊರೇಟರ್ ಕೆಲವರಿದ್ದರು. ಈ ಗ್ಯಾಂಗಿನ ಪ್ರಹಸನಕ್ಕೆ ಯಕ್ಷಗಾನ ನಟನೂ-ಮಾಜಿ ಎಮ್ಮೆಲ್ಲೆಯೂ, ಪಕ್ಕಾ ಮತಾಂಧನೂ ಆದ ಕುಂಬ್ಳೆ ಸುಂದರ್ ರಾವ್ 'ಭಾಗವತಿಕೆ' ಮಾಡಿದ್ದರು. ಪಾಲೇಮಾರನ ಪಾಪದ ದುಡ್ಡಿನ ಹಂಗಲ್ಲಿರುವ ಈ ದಂಡಪಿಂಡಗಳು 'ಬಾಸ್'ನ ವಾಚಾಮಗೋಚರವಾಗಿ ಹೊಗಳಿದ್ದೇ ಹೊಗಳಿದ್ದು! ಇದೊಂದು ಅಭಾಸಕರ ನಾಟಕದಂತಿತ್ತು. ಕರಾವಳಿಯನ್ನು ಮತಾಂಧ ರಣರಂಗ ಮಾಡಿರುವ ಕಲ್ಲಡ್ಕ ಭಟ್ಟನ ಪಾದಕ್ಕೆ ಸಾರ್ವಜನಿಕವಾಗೇ ಡೈ ಹೊಡೆದು ಆತನ ಪಾತಕ ಜಿಲ್ಲಾ ಮಂತ್ರಿಯಾಗಿ ಸಮರ್ಥಿಸುತ್ತಿದ್ದ, ಸ್ವತಃ ತಾನೇ ನಿಂತು ಕಮ್ಯುನಲ್ ಕಿತಾಪತಿ ಮಾಡುತ್ತಿದ್ದ ಪಾಲೇಮಾರ್‌ನನ್ನು ಆತನ ಚೇಲಾಗಳು ಕೋಮು ಸೌಹಾರ್ದ ಕಾಪಾಡಿದ ಶಾಂತಿದೂತನೆಂದು ತಾರೀಫು ಮಾಡುವುದೇ?

ಅಷ್ಟೇ ಅಲ್ಲ, ಅಗತ್ಯ ರಸ್ತೆಗಳನ್ನು ಮತ್ತಿತರ ಮೂಲ ಸೌಕರ್ಯಗಳನ್ನೇ ಅಭಿವೃದ್ಧಿಪಡಿಸಲಾಗದ, ಪ್ರಗತಿಯ ಪರಿಕಲ್ಪನೆಯೇ ಇಲ್ಲದ ಪಾಲೇಮಾರ್ ಆತನ ಪೇಯ್ಡ್ ಪ್ರತಿಭಟನಾಕಾರರ ಬಾಯಲ್ಲಿ ಅಭಿವೃದ್ಧಿ ಹರಿಕಾರನಾಗಿದ್ದು ವಿಪರ್ಯಾಸವೇ ಸರಿ. ತನ್ನ ಮತ್ತು ತನ್ನ ಬಿಲ್ಡರ್ ಮಿತ್ರರ ದೇಖಾ ಸೈಟುಗಳು ಎಲ್ಲೆಲ್ಲಿದೆಯೋ ಅಲ್ಲೆಲ್ಲ ರಿಂಗ್‌ರೋಡ್ ಹಾದುಹೋಗುವಂತೆ ಮಾಡಿದ್ದೇ ಪಾಲೇಮಾರನ ಅಭಿವೃದ್ಧಿಯಷ್ಟೇ! ಇಂಥ ಜನದ್ರೋಹಿ ಪಾಲೇಮಾರ್ ಬ್ಲೂಫಿಲಂ ಹಗರಣದ ಕೊಚ್ಚೆಯಲ್ಲಿ ಬಿದ್ದು ಒದ್ದಾಡುತ್ತಿರುವುದು ಕರಾವಳಿಗರಿಗೆ ದಿನಕ್ಕೊಂದಂತೆ ಪುಕ್ಕಟೆ ಮನರಂಜನೆ ಒದಗಿಸುತ್ತಿದೆ!!

❖


ತೋರಿಸುವ ನಾಗ ತನ್ನ ಆಪ್ತನ ಸಂಸಾರವನ್ನು ಮಂತ್ರಿ ಬಂಗ್ಲೆಯಲ್ಲೇ ಇಟ್ಟುಕೊಂಡಿದ್ದ. ಈ ಮುದಿ ಮಂತ್ರಿಯ ಚಪಲ ಆ ಎಳೆ ಹುಡುಗಿಯ ಕಂಡಿದ್ದೇ ಕೆರಳಿದೆ. ರಾಮುಗೆ ರಾತ್ರಿ-ಹಗಲು ಮನೆಗೆ ಬಾರದಷ್ಟು 'ಕರ್ತವ್ಯ' ವಹಿಸುತ್ತಿದ್ದ ಮಂತ್ರಿ ನಾಗ ಆ ನವವಿವಾಹಿತೆಯ ಜತೆ ವಿಕೃತವಾಗಿ ವರ್ತಿಸುತ್ತಾನೆ. ಆ ಹುಡುಗಿ ಮಂತ್ರಿಯ ತೆವಲಿನ ಕಾಟ ತಾಳಲಾರದೆ ಆತ್ಮಹತ್ಯೆಗೆ ಪ್ರಯತ್ನಿಸುತ್ತಾಳೆ.

ಆಗ ಹಿಂದೂವಾದಿ 'ಸಜ್ಜನ' ಮಂತ್ರಿಯ ಬಣ್ಣ ಬಯಲಾಗುತ್ತದೆ. ಅಲ್ಲಲ್ಲಿ ಗುಸುಗುಸು ಶುರುವಾಗುತ್ತದೆ. ಮಂಗಳೂರು-ಬಂಟ್ವಾಳದಲ್ಲಂತೂ ನಾಗನಿಗೆ ಈ ಮುದಿ ಕಾಲದಲ್ಲಿ ಅದೇನು "ಮದವೋ" ಎಂದು ಜನ ಮಾತಾಡಿಕೊಂಡಿದ್ದೇ ಮಾತಾಡಿಕೊಂಡಿದ್ದು. ಆದರೆ ಮಂತ್ರಿಗಿರಿ ಬಲದಿಂದ ಈ ಲೈಂಗಿಕ ಹಗರಣ ಮುಚ್ಚಿಹೋಗುವಂತೆ ಮಾಡಿಕೊಂಡಿದ್ದ ನಾಗ. ಈ ಸೆಕ್ಸ್ ಸ್ಕ್ಯಾಂಡಲ್ ಗೋಣಿ ನಾಗನ ರಾಜಕೀಯ ಭವಿಷ್ಯವನ್ನೇ ಕರಾಳವಾಗಿಸಿಬಿಟ್ಟಿತು. ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಇಡೀ ದಕ್ಷಿಣ ಕನ್ನಡದಲ್ಲಿ ಬಿಜೆಪಿ ಗಾಳಿ ಬಲವಾಗಿ ಬೀಸಿದರೂ ನಾಗ ಮಾತ್ರ ಸೋತು ನೆಲಕಚ್ಚುವಂತಾಗಿತ್ತು. ಮಂತ್ರಿಯಾಗುವ ಕನಸು ಕಾಣುತ್ತಿದ್ದ ನಾಗ ಪುನರ್ವಸತಿಗಾಗಿ ಕಲ್ಲಡ್ಕ ಭಟ್ಟ-ಯಡ್ಡಿ ಪದತಲದಲ್ಲಿ ಕುಳಿತು ಗೋಗರೆಯಬೇಕಾಗಿ ಬಂತು. ಗೋಣಿ ನಾಗನ ದಯನೀಯ ಸ್ಥಿತಿ ಕಂಡು ಕಲ್ಲಡ್ಕ-ಯಡ್ಡಿ ಕೆಲಸಕ್ಕೆ ಬಾರದ ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಎಂಬ ಬೋಗಸ್ ನಿಗಮ ಸೃಷ್ಟಿಸಿ ಅದರ ಅಧಿಪತಿಯಾಗಿ ನಾಗನನ್ನು ಪ್ರತಿಷ್ಠಾಪಿಸಿದರು. ಆ ಬಳಿಕ ಚೆಡ್ಡಿ ಪುರೋಹಿತರ ಕೆಂಗಣ್ಣಿಗೂ ತುತ್ತಾದ ನಾಗ ಈಗ ಬಿಜೆಪಿಯಲ್ಲಿ ಆಟಕ್ಕಷ್ಟೇ ಇದ್ದಾನೆ; ಲೆಕ್ಕಕ್ಕಿಲ್ಲ. ಆದರೆ ನಾಗನ 'ಲೈಂಗಿಕ ಲಹರಿ' ಮತ್ತು ಹಿಂದೂ ಸಂಸ್ಕೃತಿ ಮಹಿಮೆ ಮಾತ್ರ ಕರಾವಳಿಯಲ್ಲಿ ಯಾರೂ ಮರೆತಿಲ್ಲ.

ಕೆಟ್ಟ ಚಟಗಾರ ಭಟ್ಟ

ಉಡುಪಿಯ ಕಚ್ಚೆಹರುಕ ಶಾಸಕ ರಘುಪತಿ ಭಟ್ಟ ಫರ್‌ಫೆಕ್ಟ್ ಚೆಡ್ಡಿ ಕೇಡರ್; ಅಸಲಿ ಭಯೋತ್ಪಾದಕ ಭಜರಂಗಿ. ಅಮಾಯಕ ಪತ್ನಿ ಪದ್ಮಪ್ರಿಯಳನ್ನೇ ಚಟ್ಟ ಹತ್ತಿಸಿದ ಭಟ್ಟ ಬೆದೆ ಬಸವನಂತೆ ಆರಾಮಾಗಿ ಅಡ್ಡಾಡಿಕೊಂಡಿದ್ದಾನೆ. ಎರಡು ಬಾರಿ ಉಡುಪಿ ಶಾಸಕನಾಗಿರುವ ಈ ಬ್ರಾಹ್ಮಣೋತ್ತಮ ಕ್ಷೇತ್ರದ ಒಳಿತಿಗೆ ಮೂರು ಬಿಲ್ಲಿ ಕೆಲಸವೂ ಮಾಡಿಲ್ಲ. ನಗರಸಭೆ, ಜಿಪಂ, ಪಿಡಬ್ಲ್ಯುಡಿ ಕಾಮಗಾರಿಗಳನ್ನೆಲ್ಲ ತನ್ನ ಹಿಂಬಾಲಕರಿಗೆ ಹಂಚಿ ಕೋಟಿ-ಕೋಟಿ ಲೂಟಿ ಮಾಡುತ್ತಿರುವ ಭಟ್ಟನ ಪೋಲಿ ಪರಾಕ್ರಮ ಹೇಳತೀರದು. ಊರಿಗೆಲ್ಲ ಹಿಂದೂತ್ವ-ನೈತಿಕತೆ-ಶೀಲ ಬೋಧಿಸುವ ಈ ಭಂಡ ಭಟ್ಟ ಬೆಂಗಳೂರು-ಮುಂಬಯಿ-ದುಬಾಯಿ ಮತ್ತು ಚೀನಾ ಡ್ಯಾನ್ಸ್ ಬಾರ್‌ಗೆ ಹೋಗೋದು-ಫುಲ್‌ಟೈಟಾಗಿ ಬಾರ್ ಮಿತ್ರರ ಮನೆಯಲ್ಲಿ ಹೊರಳಾಡೋದೆಲ್ಲ ಕರಾವಳಿಯಲ್ಲಿ ಜನಜನಿತ ಪುರಾಣ!

ಶಾಸಕನಾಗುವ ಮುಂಚೆ ಮದ್ರಾಸ್ ಫೈನಾನ್ಸ್‌ನ ಕಮಿಷನ್ ಏಜೆಂಟ್ ಆಗಿ ಜೀವನ ನಡೆಸಲು ಒದ್ದಾಡುತ್ತಿದ್ದ ಭಟ್ಟ ಇವತ್ತು ಕೋಟಿ-ಕೋಟಿಗೆ ತೂಗುತ್ತಾನೆ. ಒಂದಿಷ್ಟು ರೌಡಿಗಳನ್ನು ಬೆನ್ನಿಗಿಟ್ಟುಕೊಂಡು ಓಡಾಡುವ ಖಯಾಲಿಯ ಭಟ್ಟ ತಾನೇ ಒಂದು ಮೀಟರ್ ಬಡ್ಡಿಯ ಫೈನಾನ್ಸ್ ಶುರುಮಾಡಿದ್ದ. ಅದಕ್ಕೆ 'ಹಿರಣ್ಯ ಫೈನಾನ್ಸ್' ಎಂದು ನಾಮಕರಣ ಮಾಡಿದ್ದ. ಫೈನಾನ್ಸ್ ವ್ಯವಹಾರದಲ್ಲಿ ಹಡಬೆ ಹಣ ಓಡಾಡಲು ಹತ್ತಿದಾಗ ಭಟ್ಟನಿಗೆ ಹಗ್ಗ ಕಡಿವ ಚಾಳಿಯೂ ಹತ್ತಿಕೊಂಡಿತು. ಮನೆಯಲ್ಲಿ ಚಂದ ಹೆಂಡತಿಯಿದ್ದರೂ ಈ ಹಿಂದೂ ಹರಾಮಿ ಫೈನಾನ್ಸ್ ಕಚೇರಿಯಲ್ಲಿ ನೇಮಿಸಿಕೊಂಡಿದ್ದ ಸಾಬಿ ಹುಡುಗಿ ಜೊತೆ ಚಕ್ಕಂದ ಆಡುತ್ತಿದ್ದ. ಭಟ್ಟನ ಈ ಬೇವರ್ಸಿ ಬುದ್ಧಿ ಹೆಂಡತಿ ಪದ್ಮಪ್ರಿಯಾಳನ್ನು ದಿಕ್ಕೆಡಿಸಿ ಬಿಟ್ಟಿತ್ತು.



ಆ ಮುಸ್ಲಿಮ್ ಹುಡುಗಿಗೆ ತಾನೇ ನಿಂತು ಭಟ್ಟ ಮದುವೆ ಮಾಡಿಸಿದನೆಂಬ ಮಾಹಿತಿ ಇವತ್ತಿಗೂ ಉಡುಪಿಯಲ್ಲಿ ಸಿಗುತ್ತದೆ. ಯಾವಾಗ ಆಕೆ ಮದುವೆಯಾಗಿ ಹೋದಳೋ ಆಗ ಭಟ್ಟನ ಡಿಂಗ್‌ಡಾಂಗ್ ಪ್ರವೃತ್ತಿ ಮಿತಿಮೀರಿ ಹೋಯ್ತು. ಯಾವಾಗ ಶಾಸಕನಾದನೋ ಆಗ ಆ ಪೋಲಿ ಭಟ್ಟ ದೈಹಿಕ ಹಾದರದ ವಿಕೃತಿ ಪಕ್ಕದ ಕುಂದಾಪುರಕ್ಕೂ, ದೂರದ ಬೆಂಗಳೂರು, ಮುಂಬೈಗೂ ಹಬ್ಬಿತು. ಭಟ್ಟನ ಕಾಮ ಸಾಮ್ರಾಜ್ಯ ವಿಸ್ತಾರಗೊಂಡಂತೆ ಮಡದಿಯ ಮನಸ್ಸು ಮುರಿದುಬಿತ್ತು. ಸಂಸಾರದಲ್ಲಿ ನಿತ್ಯ ಸಂಘರ್ಷ ಆಗಲಾರಂಭಿಸಿತು. ಮನೆ ಅಡ್ನಾಡಿಯ ಗೂಡಾಯ್ತು.

ಭಟ್ಟನ ಹೆಂಡತಿ ಪದ್ಮಪ್ರಿಯ ಎಂಬ ಮುಗ್ಧ ಹೆಂಗಸಿಗೆ ಆತನೊಂದಿಗೆ ಬದುಕುವುದೇ ಕಷ್ಟವಾಯ್ತು. ಗಂಡನ ದಬ್ಬಾಳಿಕೆ ಆಕೆಯಿಂದ ಸಹಿಸಲಾಗಲಿಲ್ಲ. ಹಿಂಸೆ ಮಿತಿ ಮೀರಿದಾಗ ಆಕೆ ಅನಿವಾರ್ಯವಾಗಿ ಆತ್ಮ ಸಂಗಾತಿಯನ್ನು ಅರಸುತ್ತ ಹೊಸಿಲಾಚೆ ಕಾಲಿಟ್ಟಳು. ಆಗಾಕೆ ಸಿಕ್ಕವನು ಮತ್ತ್ಯಾರು ಅಲ್ಲ, ಶಾಸಕ ಭಟ್ಟನ ಕ್ಲಾಸ್‌ಮೇಟ್ ಕಂ ನಂಬಿಗಸ್ಥ ಬೇನಾಮಿ ಸರ್ಕಾರಿ ಕಂಟ್ರಾಕ್ಟ್ ಅತುಲ್ ರಾವ್! ಭಟ್ಟನ ದೋನಂಬರ್ ದಂಧೆಗಳನ್ನು ನೋಡಿಕೊಳ್ಳುತ್ತಿದ್ದ ಅತುಲ್‌ಗೆ ಮಿತ್ರನ ಮನೆ ಹೊರಗಿನ ಕೂಡಿಕೆಗಳೆಲ್ಲ ಗೊತ್ತಿತ್ತು. ಈ ಅತುಲ್ ಭಟ್ಟನ ಹೆಂಡತಿ ಪದ್ಮಪ್ರಿಯಾಗೆ ಕಷ್ಟ-ಸುಖಕ್ಕೆ ಸ್ಪಂದಿಸುವ ಜನ್ಮ-ಜನ್ಮದ ಸಂಗಾತಿಯಾಗಿ ಹೋದ. ಹಾಗಂತ ಆಕೆ-ಭಾನ್ಗಡಿ ಭಟ್ಟನಂತೆ ಅಕ್ರಮ ಕೂಡಿಕೆಗೆ ಯೋಚಿಸಲಿಲ್ಲ. ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಒಂಟಿ ಹೆಣ್ಣಿಗೆ ಗಂಡಸೊಬ್ಬನ ನೆಂಟು ಅಗತ್ಯ ತಾನೆ? ಹಾಗಾಗಿ ಆಕೆ ಅತುಲ್‌ನ ಅವಲಂಬಿಸಿದ್ದಳಷ್ಟೇ.

ಯಾವಾಗ ಗಂಡ ರಘುಪತಿ ಭಟ್ಟ ಬೆಂಗಳೂರಲ್ಲಿ ಕಾಲೇಜು ಉಪನ್ಯಾಸಕಿಯೊಬ್ಬಳ ಜೊತೆ ಅನಗತ್ಯ ಸಲುಗೆ-ಸ್ನೇಹ ಇಟ್ಟುಕೊಂಡು ಆಕೆಯ ಮನೆಯಲ್ಲೇ ಅಡ್ಡೆ ಹಾಕುವುದು ಖಾತ್ರಿಯಾಯ್ತೋ ಆಗ ಪದ್ಮಪ್ರಿಯಾ ಈ ಅನೈತಿಕ ಮನುಷ್ಯನ ಜೊತೆ ಸಂಸಾರವೇ ಬೇಡವೆಂಬ ನಿರ್ಧಾರಕ್ಕೆ ಬರ್ತಾಳೆ. ದೂರದ ದಿಲ್ಲಿಯ ಕಾಲ್ ಸೆಂಟರ್ ಒಂದರಲ್ಲಿ ಉದ್ಯೋಗ ಮಾಡಲೆಂದು ಹೋಗುತ್ತಾಳೆ. ಆಕೆಗೆ ದಿಲ್ಲಿ ಮುಟ್ಟುತ್ತಿದ್ದಂತೆ ಅಲ್ಲೊಂದು ಮನೆ ಮಾಡಿಕೊಟ್ಟು ಅತುಲ್ ಬರ್ತಾನೆ. ಇತ್ತ ಬೆಂಗಳೂರು ಮತ್ತು ಉಡುಪಿಯಲ್ಲಿ ಆಳುವ ಬಿಜೆಪಿ ಶಾಸಕನ 'ಧರ್ಮ' ಪತ್ನಿ ನಾಪತ್ತೆ ಪ್ರಕರಣದ ಹೈಡ್ರಾಮಾ ನಡೆಯುತ್ತದೆ.

ಪತ್ನಿಯನ್ನು ಜೀವಂತವಾಗಿ ತರುವ ಇರಾದೆಯೇ ಶಾಸಕ ಭಟ್ಟನಿಗೆ ಇರುವುದಿಲ್ಲ. ಆಕೆ ಜೀವಂತ ಉಡುಪಿಗೆ ಬಂದರೆ ತನ್ನ ಹೊಲಸು ಹಾದರ ಬಹಿರಂಗವಾಗುತ್ತದೆ. ಹಿಂದೂತ್ವದ ಸಾಚಾತನದ ಅಸಲಿ ಅವತಾರ ಅನಾವರಣ ಆಗುತ್ತದೆಂಬ ಭಯ ಕಳ್ಳ ಭಟ್ಟನಿಗಿತ್ತು. ಇದಕ್ಕೆ ಪೂರಕವಾಗೇ ಅಂದಿನ ಹೇತ್ಲಾಂಡಿ ಗೃಹ ಮಂತ್ರಿ ವಿ.ಎಸ್. ಆಚಾರ್ಯ, ಮನೆಮುರುಕ ಮುಖ್ಯಮಂತ್ರಿ ಯಡ್ಡಿ ಮತ್ತವನ ಪೊಲೀಸರು ಕಾರ್ಯಾಚರಣೆ ಗಿಳಿಯುತ್ತಾರೆ. ಅಸಹಾಯಕ-ನಿಷ್ಪಾಪಿ ಹುಡುಗಿ ಪದ್ಮಪ್ರಿಯಾ ದಿಲ್ಲಿಯ ಫ್ಲಾಟ್‌ನಲ್ಲಿ ನಿಗೂಢವಾಗಿ ಸತ್ತುಬೀಳುತ್ತಾಳೆ. ಹೆಣ ಊರಿಗೆ ತಂದ ಭಟ್ಟ ಬಿದ್ದು-ಬಿದ್ದು ಅಳುವ ನಾಟಕ ಮಾಡುತ್ತಾನೆ. ಇದು ಹಿಂದೂತ್ವದ ವಿಪ್ರೋತ್ತಮ ರಘುಪತಿ ಭಟ್ಟನ ಕಾಮೋನ್ಮಾದದ ವಿಕಾರದಿಂದಾದ ಅನಾಹುತ!


ಇವತ್ತು ಉಡುಪಿಯ ಲ್ಯಾಂಡ್ ಮಾಫಿಯಾದ ಕಿಂಗ್ ಪಿನ್ ಆಗಿ ಅವತರಿಸಿರುವ ರಘುಪತಿ ಭಟ್ಟ ಇತ್ತೀಚೆಗೆ ಪ್ರಸಿದ್ಧ ಸೇಂಟ್ ಮೇರೀಸ್ ದ್ವೀಪದಲ್ಲಿ ರೇವ್ ಪಾರ್ಟಿ ನಡೆಸಿ ಇಡೀ ವಿಶ್ವಕ್ಕೆ ಬಿಜೆಪಿ-ಸಂಘಪರಿವಾರದ ಹಿಂದೂತ್ವ-ನೈತಿಕತೆ ಪರಿಚಯಿಸಿದ್ದಾನೆ. ದೇಶ-ವಿದೇಶಿ ಜೋಡಿಗಳನ್ನು ಕರೆಸಿ ಅವರಿಗೆ ಸ್ವೇಚ್ಛೆಯಿಂದ ಕುಡಿಯಲು-ಕುಣಿಯಲು- ಅಫೀಮು-ಗಾಂಜಾ ಸೇವಿಸಲು ಬಿಟ್ಟದ್ದಲ್ಲದೆ ಓಪನ್ ಸೆಕ್ಸ್ ಆಟಕ್ಕೂ ಅವಕಾಶ ಕೊಟ್ಟ ಭಟ್ಟ ಕೋಟಿ-ಕೋಟಿ ಬಾಚಿದ್ದಾನೆ. ಈ ನಂಗಾ ನಾಚ್ ಆಯೋಜಿಸಿದ್ದು ಭಟ್ಟನ ಇನ್ನೊಬ್ಬ ಕ್ಲಾಸ್‌ಮೇಟ್ ಗಿರೀಶ್ ಶೆಟ್ಟಿ ಎಂಬಾತ. ಇಂಥ ನೈತಿಕ-ಅಧಃಪತನದ ಭಜರಂಗಿ ಭಟ್ಟ ಶಾಸಕನಾಗಿ ಉಡುಪಿಯ ಮಾನವ ಮರ್ಯಾದೆ ಹರಾಜಾಕುತ್ತಿರುವುದು ಆ ಕಡಗೋಲು ಕೃಷ್ಣನಿಗೇ ಪ್ರೀತಿ! ಅಷ್ಟಮಠಾಧಿಪರಿಗೆ ದಿಲ್ ಖುಷ್!!

ಇಷ್ಟು ದಿನ ಮತಾಂಧ ರೌಡಿ-ಗೂಂಡಾಗಳ ಗ್ಯಾಂಗ್ ಅನ್ನಿಸಿಕೊಂಡಿದ್ದ ಈ ಹಿಂದೂತ್ವ ಕೋಳಿಗಳೀಗ ಕಾಮಾಂಧ ಕೊಳಕರ ಅಡ್ಡೆ ಎಂಬುದು ಸಾಬೀತಾಗಿದೆ. ಗಡಿಗೆಯೊಳಗಿನ ಅಕ್ಕಿ ಅನ್ನವಾಗಿದೆಯಾ ಎಂದು ನೋಡಲು ಒಂದಗುಳು ಪರೀಕ್ಷಿಸಿದರೆ ಸಾಕಲ್ಲವಾ! ಬಿಜೆಪಿ-ಸಂಘಪರಿವಾರದ ಹಲವು ಸ್ಕ್ಯಾಂಡಲ್ಲುಗಳು ಒಂದೇ ಥರದ ಅಶ್ಲೀಲ-ಅನೈತಿಕ ಗುಣ-ಧರ್ಮ ಸ್ವಯಂ ಸಾಬೀತುಪಡಿಸಿಕೊಂಡಿವೆ. ಒಟ್ಟಿನಲ್ಲೀಗ ಕರಾವಳಿಯ ಬಿಜೆಪಿಯ ರಾಜಕಾರಣ-ಹಿಂದೂತ್ವ ಸೆಕ್ಸ್‌ಮಯವಾಗಿ ಗಬ್ಬೆದ್ದಿದೆ. ಬಿಜೆಪಿ ಬಣ್ಣ ಬಯಲಾಗಿದೆ; ಅದರ ಮಾತೃ ಸಂಸ್ಥೆ ಸಂಘ ಪರಿವಾರದ ಅಸಲಿ ಅವತಾರ ಅನಾವರಣಗೊಂಡಿದೆ.

ಚೆಡ್ಡಿಗಳಿಂದ ಕರಾವಳಿಗೆ ಇನ್ನೆಂಥ ಕೇಡು ಕಾದಿದೆಯೋ ರಾಮಾ.... ರಾಮಾ.....!!

❖

ಬದಲಾಗದ ದರ್ಶನ ಹಳೇ ಚಾಳಿ ಮತ್ತೆ ಶುರು




• ಅರುಣ್‌ಕುಮಾರ್ ಜಿ.

"ಯಾವುದೇ ವ್ಯಕ್ತಿಗೆ ಎಷ್ಟು ಮಂದಿ ಅಭಿಮಾನಿಗಳು ಎಂದು ಗೊತ್ತಾಗೋದು ಆತ ಸತ್ತಾಗಲೇ ಅಂತಾರೆ. ಆದರೆ ನಾನು ಬದುಕಿದ್ದಾಗಲೇ ಗೊತ್ತಾಗೋ ಹಾಗೆ ಆಗಿದೆ. ದಯವಿಟ್ಟು... ದಯವಿಟ್ಟು ಅಭಿಮಾನಿಗಳು ಮತ್ತು ಮಾಧ್ಯಮದವರು ನನ್ನನ್ನು ಕ್ಷಮಿಸಿ. ನಾನು ಎಂದೆಂದಿಗೂ ನಿಮಗೆ ಚಿರಋಣಿಯಾಗಿರ್ತೀನಿ... ನಾನು ಇನ್ನೆಂದೂ ಇಂಥ ತಪ್ಪು ಮಾಡೋದಿಲ್ಲ, ನಾನು ಈಗ ಬದಲಾಗಿದ್ದೀನಿ..."

ಇದು ಎರಡೇ ಎರಡು ತಿಂಗಳ ಹಿಂದೆ ನಟ ದರ್ಶನ್ ಚಾಮರಾಜಪೇಟೆಯ ಸಿಟಿ ಇನ್‌ಸ್ಟಿಟ್ಯೂಟಿನಲ್ಲಿ ಹೊಡೆದ ಡೈಲಾಗು..!

ದರ್ಶನ್ ಮಾತನ್ನು ಕೇಳಿ ಯಾರಾದರೂ "ಕಷ್ಟಪಟ್ಟು ಮೇಲೆ ಬಂದ ದರ್ಶನ್ ಏನೋ ತಿಳಿವಳಿಕೆಯಿಲ್ಲದೆ ಹೆಂಡತಿಗೆ ಹೊಡೆದುಬಿಟ್ಟ. ಹಣದ ಅಮಲಿನಲ್ಲಿ ಅಹಂಕಾರ ಮೆರೆದ. ಇನ್ನೆಂದೂ ಆತ ತಪ್ಪು ಮಾಡೊಲ್ಲ..." ಎಂದು ಅಂದುಕೊಂಡಿದ್ದರೆ ಅದಕ್ಕಿಂತ ತಪ್ಪು ಗ್ರಹಿಕೆ ಬೇರೆ ಇಲ್ಲ...



ದರ್ಶನ್ ಬದಲಾಗಿದ್ದಾನೆ ಅನ್ನೋದು ಸದ್ಯಕ್ಕಂತೂ ಶುದ್ಧ ಸುಳ್ಳು...

ತಾನು ಬದಲಾಗಿರುವೆ ಎಂದು ಮಾಧ್ಯಮದವರ ಮತ್ತು ಅಭಿಮಾನಿಗಳ ಮುಂದೆ ಹೈಡ್ರಾಮಾ ಮಾಡಿ ಚಳ್ಳೆಹಣ್ಣು ತಿನ್ನಿಸುತ್ತಿರುವ ದರ್ಶನ್ ಒಳಗಿಂದೊಳಗೇ ತನ್ನ ಹಳೇ ವರಸೆಯನ್ನೇ ಮುಂದುವರೆಸಿದ್ದಾನೆ. ಜೈಲಿನಿಂದ ಹೊರಬಂದು ರಾಜ್ಯದ ಸುತ್ತ 'ವಿಜಯ ಯಾತ್ರೆ' ಮಾಡಿದ ದರ್ಶನ್ ಬೆಂಗಳೂರಿಗೆ ವಾಪಸ್ ಬಂದ ಕೂಡಲೇ ಮುರಿದುಕೊಂಡು ಬಿದ್ದಿದ್ದು 'ಸಾರಥಿ' ಚಿತ್ರದ ನಿರ್ಮಾಪಕ ಸತ್ಯಪ್ರಕಾಶ್ ಮೇಲೆ. "'ಸಾರಥಿ' ಚಿತ್ರದಿಂದ ನಿನಗೆ ಇಪ್ಪತ್ತು ಕೋಟಿ ಆದಾಯ ಬಂದಿದೆ. ಅದು ಸಾಧ್ಯವಾಗಿ ರೋದು ನನ್ನಿಂದ. ತಿ... ಮುಚ್ಚಿಕೊಂಡು ಬಂದಿರೋ ಲಾಭದಲ್ಲಿ ಎರಡು ಕೋಟಿ ಮಡಗೋ ಸೂ... ಮಗನೇ" ಎಂದು ದರ್ಶನ್ ಸತ್ಯಪ್ರಕಾಶ್ ಅವರಿಗೆ ಧಮಕಿ ಹಾಕಿದ್ದಾನೆ.


'ಸಾರಥಿ' ಚಿತ್ರವನ್ನು ನಿರ್ದೇಶಿಸಿದ್ದ ದರ್ಶನ್ ಸಹೋದರ ದಿನಕರ್‌ಗೆ ಮುಂಚಿತವಾಗಿಯೇ ಒಪ್ಪಿಕೊಂಡಂತೆ ಇಪ್ಪತ್ತೈದು ಲಕ್ಷ ರೂಪಾಯಿಗಳ ಸಂಭಾವನೆಯಲ್ಲಿ ಇಪ್ಪತ್ತು ಲಕ್ಷ ಸಿನಿಮಾದ ಬಿಡುಗಡೆಯ ಮುನ್ನವೇ ಸಂದಾಯವಾಗಿತ್ತು. ಆದರೆ ಇನ್ನೂ ಐದು ಲಕ್ಷ ಬಾಕಿ ಬರಬೇಕಿತ್ತು. ಆದರ ಬದಲಾಗಿ ಚಿತ್ರದುರ್ಗ ಏರಿಯಾವನ್ನು ಒತ್ತಾಯ ಪೂರ್ವಕವಾಗಿ ದಿನಕರ್ ಬರೆಸಿ ಕೊಂಡಿದ್ದ. ಐದು ಲಕ್ಷ ಬರಬೇಕಿದ್ದ ಜಾಗದಲ್ಲಿ ದಿನಕರ್ ಏನಿಲ್ಲವೆಂದರೂ ಒಂದೂವರೆ ಕೋಟಿ ರೂಪಾಯಿಗಳ ಜಾಕ್‌ಪಾಟ್ ಹೊಡೆದುಕೊಂಡ.


ಈಗ 'ಚಿಂಗಾರಿ' ಚಿತ್ರದ ನಿರ್ಮಾಪಕ ಮಹದೇವ್ ಅವರ ಸರದಿ.

'ಚಿಂಗಾರಿ' ಚಿತ್ರದ ನಿರ್ಮಾಪಕ ಮಹದೇವ್ ಮತ್ತು ದರ್ಶನ್ ನಡುವೆ ಏನೋ ಒಳಗುದ್ದಾಟಗಳಾಗುತ್ತಿವೆ ಎಂಬ ಮಾತು ಈಗ ಎಲ್ಲೆಡೆ ಕೇಳಿಬರುತ್ತಿದೆ. ಚಿತ್ರ ಬಿಡುಗಡೆಯಾಗಿ, ಹಿಟ್ ಕೂಡ ಆದ ಮೇಲೆ ಯಾಕೆ ಇವರಿಬ್ಬರೂ ಜಗಳಾಡಿಕೊಂಡಿದ್ದಾರೆ? ದರ್ಶನ್‌ಗೆ ಮಹದೇವ್ ಕಡೆಯಿಂದ ಹಳೇ ಬಾಕಿ ಬರಬೇಕಿತ್ತಾ? ಎಂಬೆಲ್ಲಾ ಪ್ರಶ್ನೆಗಳೆದ್ದಿವೆ. ಆದರೆ ಅಸಲಿಗೆ ದರ್ಶನ್ ಮಹದೇವ್ ಮೇಲೆ ರಗಳೆಗೆ ನಿಂತಿರುವುದಕ್ಕೆ ಇವ್ಯಾವುದೂ ಕಾರಣವಲ್ಲ.

'ಸಾರಥಿ' ಚಿತ್ರದ ಪ್ರಚಂಡ ಯಶಸ್ಸನ್ನು ಕಂಡ ದರ್ಶನ್ 'ಚಿಂಗಾರಿ' ಚಿತ್ರದ ವಿತರಣೆಯ ಹಕ್ಕನ್ನು ತನಗೇ ಕೊಡಬೇಕೆಂದು ಮಹದೇವ್‌ಗೆ ದುಂಬಾಲು ಬಿದ್ದಿದ್ದ. ಆದರೆ ನಿರ್ದೇಶಕ ಹರ್ಷ ಮತ್ತು ನಿರ್ಮಾಪಕ ಮಹದೇವ್ ಸೇರಿ ಆದಾಗಲೇ 'ವಿಷ್ಣುವರ್ಧನ' ಚಿತ್ರವನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದ ಸಮರ್ಥ ಎಂಟರ್‌ಪ್ರೈಸಸ್‌ನ ಪ್ರಸಾದ್ ಬಳಿ ವ್ಯವಹಾರ ಕುದುರಿಸಿದ್ದರು. ಇದನ್ನು ದರ್ಶನ್‌ನಿಂದ ಸಹಿಸಲಾಗಲಿಲ್ಲ. "ಪ್ರಸಾದ್‌ರನ್ನು ಅವರಿಬ್ಬರಿಗೆ ಪರಿಚಯ ಮಾಡಿಸಿ ಒಂಭತ್ತು ಕೋಟಿಗೆ ಸಿನಿಮಾ ವ್ಯಾಪಾರ ಮಾಡಿಸಿದ್ದೇ ನಾನು" ಎಂದು ಮೊದಲು ಪುಕಾರೆಬ್ಬಿಸಿದ. "ಮಹದೇವ್‌ರಂಥ ನಿರ್ಮಾಪಕರು ಸಿನಿಮಾ ಮಾಡಲು ಯೋಗ್ಯರೇ ಅಲ್ಲ" ಎಂದು ವಿಜಯ ಕರ್ನಾಟಕಕ್ಕೆ ನೀಡಿದ್ದ ಸಂದರ್ಶನದಲ್ಲಿ ಕಿಡಿಕಾರಿದ.

ಅಸಲಿಯತ್ತೇನೆಂದರೆ 'ಚಿಂಗಾರಿ' ಚಿತ್ರದ ಆಡಿಯೋ ರಿಲೀಸ್ ಕಾರ್ಯಕ್ರಮದ ತನಕ ಪ್ರಸಾದ್ ಎಂಬ ವ್ಯಕ್ತಿ ಯಾರು ಎನ್ನುವುದೇ ದರ್ಶನ್‌ಗೆ ಗೊತ್ತಿರಲಿಲ್ಲ. ಮಾತ್ರವಲ್ಲ ಖುದ್ದು ಮಹದೇವ್ ಮತ್ತು ನಿರ್ದೇಶಕ ಹರ್ಷ ಅವರೇ ದರ್ಶನ್‌ನನ್ನು ಪ್ರಸಾದ್‌ಗೆ ಪರಿಚಯಿಸಿದ್ದರು. ಯಾವಾಗ 'ಚಿಂಗಾರಿ' ನಿರೀಕ್ಷೆಗಿಂತ ಒಂದು ಪಟ್ಟು ಹೆಚ್ಚು ಲಾಭವನ್ನು ಮಹದೇವ್ ಅವರಿಗೆ ತಂದಿತೋ ಆಗ ದರ್ಶನ್ 'ಸಾರಥಿ' ನಿರ್ಮಾಪಕ ಸತ್ಯಪ್ರಕಾಶ್ ಮುಂದೆ ಹೆಚ್ಚುವರಿ ಹಣಕ್ಕೆ 'ಬೇಡಿಕೆ'ಯಿಟ್ಟನೋ ಹಾಗೆಯೇ ಮಹದೇವ್ ಅವರ ಮುಂದೆಯೂ ಇಟ್ಟ. ಆದಾಗಲೇ ದರ್ಶನ್‌ಗೆ ಮಾರುಕಟ್ಟೆಯಲ್ಲಿರುವುದಕ್ಕಿಂತ ಹೆಚ್ಚು ಹಣ ನೀಡಿದ್ದ ಮಹದೇವ್ ಮತ್ತೆ ಆತನಿಗೆ ಹೆಚ್ಚುವರಿ ಹಣ ನೀಡಲು ಒಪ್ಪಲಿಲ್ಲ. ಆಗ ದರ್ಶನ್ "ನೀವು ನನ್ನ ಚಿತ್ರಕ್ಕೆ ಸರಿ ಯಾದ ಪ್ರಚಾರ ನೀಡುತ್ತಿಲ್ಲ" ಎಂದು ವರಾತ ತೆಗೆದ. ಅಲ್ಲಿಗೆ ಇದೆಲ್ಲ ನಿಂತಿದ್ದರೆ ಪರವಾಗಿರಲಿಲ್ಲ, ಆದರೆ ಹಳೇ ಚಾಳಿ ಬಿಡದ ದರ್ಶನ್ ಕಳೆದ ವಾರ ಮಹದೇವ್‌ರ ಮೊಬೈಲಿಗೆ ಕರೆ ಮಾಡಿ "ಅಮ್ಮ... ಅಕ್ಕ.. ಸೂ ಮಗನೇ.. ಬೋ ಮಗನೇ..." ಎಂದು ಕೆಟ್ಟಾಕೊಳಕು ಭಾಷೆಯಲ್ಲಿ ಬೆದರಿಸಿದ್ದಾನೆ. ಕುಡಿದು ಚಿತ್ತಾಗಿದ್ದ ದರ್ಶನ್ ನಿರ್ಮಾಪಕ ಮಹದೇವ್ ಅವರ ಜಾತಿಯನ್ನೂ ಎತ್ತಿ ಹೊಲಸಾಗಿ ಮಾತಾಡಿದ್ದಾನೆ.






ಇಡಲೇ ಫೋನು ಅಂದ ಮನು ಗೌಡ

ಎಲ್ಲದಕ್ಕೂ ಒಂದು ಮಿತಿಯಿರುತ್ತದೆ. ಮೊದಲು ಮಹದೇವ್‌ಗೆ ಕರೆ ಮಾಡಿದ ದರ್ಶನ್ ಅವರು ನಿರ್ಮಾಪಕ ಎಂಬ ಕಾರಣಕ್ಕಲ್ಲದಿದ್ದರೂ ತನಗಿಂತ ವಯಸ್ಸಿನಲ್ಲಿ ಹಿರಿಯರು ಎಂಬ ಕಾರಣಕ್ಕಾದರೂ ಗೌರವಯುತವಾಗಿ ಮಾತಾಬಹುದಿತ್ತು. ಆದರೆ ಆತನ ಬಾಯಿಂದ ಬಂದದ್ದು ಬರೀ ಏಕವಚನ ಮತ್ತು ಅವಾಚ್ಯ ಶಬ್ದಗಳು. ಹೀಗೆ ತಲೆ ಅಥವಾ ನಾಲಿಗೆ ಮೇಲೆ ಹಿಡಿತವಿಲ್ಲದೆ ಯರ್‍ರಾಬಿರ್‍ರಿ ಮಾತನಾಡಿದ ದರ್ಶನ್ ಕೊನೆಗೆ ಫೋನ್ ಅನ್ನು ತಮ್ಮ ಪುತ್ರ ಮನು ಗೌಡನಿಗೆ ಕೊಡುವಂತೆ ಮಹದೇವ್ ಅವರಿಗೆ ಕೇಳಿದ್ದಾನೆ. ಮನು ಗೌಡ ಮೊಬೈಲನ್ನು ಕಿವಿಗಿಟ್ಟುಕೊಳ್ಳುತ್ತಿದ್ದಂತೇ ದರ್ಶನ್ ಕಡೆಯಿಂದ ಮತ್ತೆ ಥರ್ಡ್ ಕ್ಲಾಸ್ ಮಾತುಗಳು ಮುಂದುವರೆದಿವೆ. ಒಂದು ಮಟ್ಟದ ತನಕ ದರ್ಶನ್‌ನ ನಾಲಿಗೆಯಿಂದ ಹೊರಟ ಮಾತುಗಳನ್ನು ಸಹಿಸಿಕೊಂಡ ಮನು ಕೊನೆಗೆ "ನಾನು ನಿಮಗಿಂತ ವಯಸ್ಸಿನಲ್ಲಿ ಚಿಕ್ಕವನಿರಬಹುದು. ಹಾಗಂತ ನೀವು ಹೇಳೋದನ್ನೆಲ್ಲ ಕೇಳಿಸಿಕೊಂಡು ಸುಮ್ಮನಿರುವುದಕ್ಕೆ ನಾವೇನು ಬಿಟ್ಟಿ ಬಿದ್ದಿಲ್ಲ. ಮರ್ಯಾದೆ ಬಿಟ್ಟು ಮಾತಾಡೋ ನಿಮಗೆ ಗೌರವ ಕೊಡೋ ಅಗತ್ಯಾನೂ ನನಗೆ ಕಾಣಿಸುತ್ತಿಲ್ಲ. ಬಾಯ್ಮುಚ್ಚಿಕೊಂಡು ಫೋನಿಡಲೇ..." ಎಂದು ಗುಡುಗಿದ್ದಾನೆ.



ಇನ್ನೂ ಇಪ್ಪತ್ತಾರರ ಹುಡುಗ ಮನುವಿನಿಂದ ಹೀಗೆ ಉಗಿಸಿಕೊಂಡ ದರ್ಶನಗೆ ತಾನು ಆಡಿದ ಎಲ್ಲ ಮಾತನ್ನು ಮಹದೇವ್ ತಮ್ಮ ಮೊಬೈಲಿನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗಿದೆ. ಇದು ಹೊರಬಿದ್ದರೆ ತಾನು ಬದಲಾಗಿದ್ದೇನೆಂಬ ನಾಟಕ ಮುಗಿದಂತೆಯೇ ಎಂದು ದಿಗಿಲುಗೊಂಡ ದರ್ಶನ್ ಅವತ್ತು ನಡುರಾತ್ರಿ ಒಂದೂವರೆಗೆ ತನ್ನ ಸಹೋದರ ದಿನಕರನನ್ನು ಮಹದೇವ್‌ರ ಮನೆಗೆ ಕಳುಹಿಸಿ ತಾನು ಮಾಡಿದ ಅನಾಚಾರಕ್ಕೆ ತೇಪೆ ಹಾಕುವ ಪ್ರಯತ್ನ ಮಾಡಿದ್ದಾನೆ.



ಆದರೆ ಮರ್ಯಾದಸ್ಥ ಮಹದೇವ್ ಸುಮ್ಮನಿರಬೇಕಲ್ಲಾ? "ನಿಮ್ಮಣ್ಣ ಆಡಿರುವ ಮಾತನ್ನು ರೆಕಾರ್ಡು ಮಾಡಿಕೊಂಡಿದ್ದೇನೆ. ಪ್ರೆಸ್‌ಮೀಟ್ ಕರೆದು ಅದನ್ನೆಲ್ಲ ಬಹಿರಂಗ ಮಾಡ್ತೀನಿ. ದರ್ಶನ್‌ನಿಂದ ನನಗೆ ಇದುವರೆಗೆ ಆಗಿರುವ ಎಲ್ಲ ಮನೋವೇದನೆಗಳನ್ನು ಹೇಳಿಕೊಳ್ಳುತ್ತೀನಿ" ಎಂದು ದಿನಕರನಿಗೆ ಹೇಳಿ ಕಳಿಸಿದ್ದಾರೆ.

ಸಂಧಾನಕ್ಕೆ ನಿಂತ ಸುರೇಶ್ ಗೌಡ್ರು

ಈಗಾಗಲೇ ಕೈಹಿಡಿದ ತನ್ನ ಪತ್ನಿ ಮೇಲೆ ದೈಹಿಕ ದಾಳಿ ಮಾಡಿ, ಕಿವಿ ಕಚ್ಚಿ, ತಾಳಿ ಕಿತ್ತು, ಆಕೆಯ ದೇಹವನ್ನು ಸಿಗರೇಟಿನಿಂದ ಸುಟ್ಟು, ಕೊನೆಗೆ ಜೈಲಲ್ಲಿ ಕಂಬಿ ಎಣಿಸಿ ಈಗ ಜಾಮೀನಿನ ಮೇಲೆ ಹೊರಬಂದಿರುವ ದರ್ಶನ್‌ಗೆ ತಾನು ಮಹದೇವ್ ಅವರ ಮೇಲೆ ಮಾಡಿರುವ ಅಸಹ್ಯ ಪದಗಳ ದಾಳಿ ಹೊರಬಿದ್ದರೆ ತನ್ನ ಇಮೇಜಿಗೆ ಮತ್ತಷ್ಟು ಡ್ಯಾಮೇಜು ಆಗುತ್ತೆ ಎಂದು ಗೊತ್ತಾಗಿದೆ. ಈ ಕಾರಣಕ್ಕೇ ಆತ ಸುರೇಶ್ ಗೌಡರನ್ನು ಸಂಧಾನಕ್ಕೆ ಮಹದೇವ್ ಅವರ ಮನೆಗೆ ಕಳಿಸಿದ್ದಾನೆ. ಇನ್ನು ಇರಡು ಮೂರು ದಿನಗಳಲ್ಲಿ ಸಂಧಾನ ಸಭೆಯೂ ನಡೆಯಲಿದೆ.


ಮುಂಚಿತವಾಗಿಯೇ ಆ ಸಭೆಯಲ್ಲಿ ನಿರ್ಮಾಪಕ ಮಹದೇವ್ ಬಳಿ ದರ್ಶನ್ ಕ್ಷಮೆ ಕೇಳಬೇಕು ಎಂಬ ತೀರ್ಮಾನವೂ ಆಗಿದೆ. ಆದರೆ ದರ್ಶನ್ ಮೊದಲೇ ಮಹಾನ್ ಸುಳ್ಳ, ತಾನು ಆಡಿದ ಮಾತನ್ನು ಆಣೆ, ಪ್ರಮಾಣ ಮಾಡಿ 'ಇಲ್ಲವೇ ಇಲ್ಲ, ನಾನು ಹಾಗೆ ಅಂದೇ ಇಲ್ಲ' ಎಂದು ಹೇಳೋದು ಆತನಿಗೆ ಹೊಸದೇನೂ ಅಲ್ಲ. ಹೀಗಾಗಿ ಸಂಧಾನ ಸಭೆಯಲ್ಲಿ ದರ್ಶನ್ ಮಾಡಲಿರುವ ಪ್ರತಿಯೊಂದು ಪ್ರಮಾಣಕ್ಕೂ ನಿರ್ಮಾಪಕ ಮಹದೇವ್ ಎವಿಡೆನ್ಸುಗಳನ್ನು ಸಿದ್ಧಮಾಡಿಟ್ಟುಕೊಂಡಿದ್ದಾರೆ.

ಇದಾ ನಿಯತ್ತು?

ಇತ್ತೀಚೆಗೆ ಸಿನಿಮಾ ನಿರ್ಮಾಣಕ್ಕೆ ಇಳಿಯುವ ಹೊಸಬರು ಹಲವಾರು ವರಸೆಗಳನ್ನು ತೋರುತ್ತಾರೆ. ಆದರೆ ಮಹದೇವ್ ಅದಕ್ಕೆ ತದ್ವಿರುದ್ಧ. ಎರಡು ವರ್ಷಗಳ ಹಿಂದೆ ಇದೇ ಮಹದೇವ್ ನಿರ್ಮಿಸಿದ ಚೊಚ್ಚಲ ಸಿನಿಮಾ 'ಶಿಶಿರ'ದ ತಂತ್ರಜ್ಞರು ಇವತ್ತಿಗೂ ಮಹ ದೇವ್ ಅವರ ಬಗ್ಗೆ ಧನ್ಯತಾಭಾವ ಹೊಂದಿ ದ್ದಾರೆ. ಆ ಚಿತ್ರದಲ್ಲಿ ನಾಯಕ ನಟನಾಗಿದ್ದ ಯಶಸ್ ಸೂರ್ಯ ಚಿತ್ರರಂಗಕ್ಕೆ ಹೊಸಬ. ಜೊತೆಗೆ ಆರ್ಥಿಕವಾಗಿ ಸಂಕಷ್ಟದಲ್ಲಿದ್ದವನು. ಆದರೆ ಆತ ಪ್ರತಿಭಾವಂತ ಎಂಬ ಒಂದೇ ಕಾರಣಕ್ಕೆ ಮಹದೇವ್ ಆತನ ಸಂಪೂರ್ಣ ಖರ್ಚುವೆಚ್ಚಗಳನ್ನು ನೋಡಿಕೊಂಡು, ಮನೆಮಗನಿಗಿಂತ ಹೆಚ್ಚಾಗಿ ಸಲುಹಿದ್ದರು. 'ಶಿಶಿರ' ಹಿಟ್

'ಡಿ'-ಬ್ರದರ್ಸ್

ಗಾಂಧಿನಗರದವರು ದರ್ಶನ್ ಸಹೋದರರನ್ನು 'ಡಿ-ಬ್ರದರ್ಸ್' ಎಂದು ಕರೆಯೋದರಲ್ಲಿ ಅರ್ಥವಿದೆ. ತೂಗುದೀಪ ಅವರ ಪುತ್ರರಾದ ದರ್ಶನ್-ದಿನಕರ್ ಎಂಬ ಅಣ್ಣತಮ್ಮಂದಿರು ಇವತ್ತು ಕನ್ನಡ ಚಿತ್ರರಂಗದಲ್ಲಿ ಹೆಸರು ಮಾಡಿರಬಹುದು. ಆದರೆ ಸಜ್ಜನ ತಂದೆ ತೂಗುದೀಪ ಶ್ರೀನಿವಾಸ್‌ರ ಹೆಸರನ್ನಂತೂ ಉಳಿಸುವ ಉಮೇದನ್ನು ಅವರಿಬ್ಬರು ಹೊಂದಿಲ್ಲ. ಅದಕ್ಕೆ ಪ್ರಮುಖ ಕಾರಣ ಎದುರು ಬಂದವರ ಮೇಲೆ ಎರಗಿಹೋಗುವ ಇವರ ಪೈಶಾಚಿಕ ಮನಸ್ಥಿತಿ.




ಅಂದಹಾಗೆ ಭೂಗತ ದೊರೆ, ಭಯೋತ್ಪಾದಕ ದಾವೂದ್ ಇಬ್ರಾಹಿಮ್‌ನ ಪೈಶಾಚಿಕ ಗ್ಯಾಂಗಿಗೆ ಮಾಧ್ಯಮಗಳು ಹೆಸರಿಟ್ಟಿರುವುದೇ 'ಡಿ- ಕಂಪನಿ' ಎಂದು. ಆದರೀಗ ಅದನ್ನು ಒಂದಿಷ್ಟು ಪರಿವರ್ತಿಸಿ ದರ್ಶನ್-ದಿನಕರ್ ಸಹೋದರರನ್ನು 'ಡಿ-ಬ್ರದರ್ಸ್' ಎಂದು ಗಾಂಧಿನಗರದ ಜನ ಕರೆಯುತ್ತಾರೆಂದರೆ ಇವರ ಹಾವಳಿ ಎಂತಹದ್ದು ಎಂದು ಅರ್ಥವಾಗುತ್ತದೆ.


ದುಶ್ಮನ್‌ಗಳ ಮಸಲತ್ತು

ಐಪಿಎಲ್ ಕ್ರಿಕೆಟ್‌ನಿಂದ ಹಿಡಿದು ಕಾಲಿಪೀಲಿ ಸಿನಿಮಾ ಮುಹೂರ್ತಗಳು, ಆಡಿಯೋ ರಿಲೀಸ್ ಫಂಕ್ಷನ್‌ಗಳ ತನಕ ಎಲ್ಲೆಂದರಲ್ಲಿ ಇವತ್ತು ದರ್ಶನ್ ಮತ್ತು ಸುದೀಪ್ ಒಟ್ಟೊಟ್ಟಿಗೇ ಕಾಣಿಸಿಕೊಳ್ಳುತ್ತಿದ್ದಾರೆ. ಒಂದು ಕಾಲಕ್ಕೆ ಒಬ್ಬರನ್ನು ಕಂಡರೆ ಒಬ್ಬರು ಕೆಂಡ ಕಾರುತ್ತಿದ್ದ ಈ ದುಶ್ಮನ್‌ಗಳು ಈಗ ಯಾಕೆ ಹೀಗೆ ಒಬ್ಬರಿಗೊಬ್ಬರು ಅಂಟಿಕೊಂಡು ತಿರುಗುತ್ತಿದ್ದಾರೆ?

ದರ್ಶನ್ ತನ್ನ ಪತ್ನಿ ವಿಜಯಲಕ್ಷ್ಮಿಯನ್ನು ಹಿಡಿದು ಬಡಿದಾಗಲೆಲ್ಲಾ ಆಕೆ ಕಣ್ಣೀರು ಹಾಕುತ್ತಾ ಹೋಗಿ ಕೂರುತ್ತಿದ್ದದ್ದು ಶಿವರಾಜ್‌ಕುಮಾರ್ ಮನೆಗೆ. ಕನಿಷ್ಟ ಮೂರ್‍ನಾಲ್ಕು ಬಾರಿ ಶಿವಣ್ಣ ಮತ್ತು ಪತ್ನಿ ಗೀತಾ ದರ್ಶನ್‌ನ ಮನೆ ಜಗಳದಲ್ಲಿ ಮಧ್ಯಸ್ಥಿಕೆ ವಹಿಸಿ ರಾಜಿ ಮಾಡಿದ್ದರು. ಶಿವಣ್ಣ ದಂಪತಿಗಳು ಅನ್ಯಾಯಕ್ಕೊಳಗಾಗಿದ್ದ ವಿಜಯಲಕ್ಷ್ಮಿ ಪರ ನಿಂತು ತನಗೆ ಬುದ್ಧಿವಾದ ಹೇಳುತ್ತಿದ್ದದ್ದನ್ನು ದರ್ಶನ್‌ನಿಂದ ಸಹಿಸಿಕೊಳ್ಳಲಾಗಲಿಲ್ಲ. ಜೈಲು ಸೇರುವ ಮುನ್ನ ಆತ ಹೆಂಡತಿಯನ್ನು ಹೊಡೆದ ಸಂದರ್ಭದಲ್ಲೂ "ಯಾವನೇ ಶಿವಣ್ಣ?" ಎಂದು ಶಿವರಾಜ್‌ಕುಮಾರ್ ಬಗ್ಗೆ ತುಚ್ಛವಾಗಿ ಮಾತಾಡಿದ್ದೂ ಎಲ್ಲರಿಗೂ ಗೊತ್ತಿರೋ ವಿಚಾರ.



ಇನ್ನು ಸುದೀಪ್ ಕೂಡ ರಾಜ್ ಕುಟುಂಬವನ್ನು ಅನವಶ್ಯಕವಾಗಿ ಮೈಮೇಲೆಳೆದುಕೊಳ್ಳುತ್ತಾ ಬಂದವನು. "ಪಾರ್ವತಮ್ಮ ನನ್ನ ಏಳ್ಗೆಯನ್ನು ಸಹಿಸಲಾರದೆ ನನ್ನ ವಿರುದ್ಧ ಕೊಳ್ಳೇಗಾಲಕ್ಕೆ ಹೋಗಿ ಬ್ಲಾಕ್ ಮ್ಯಾಜಿಕ್ ಮಾಡಿಸಿದ್ದಾರೆ" ಎಂದೆಲ್ಲಾ ಬಡಬಡಿಸಿದ್ದವನು. 'ರಾಜ್‌ಕಪ್' ಕ್ರಿಕೆಟ್ ಟೂರ್ನಮೆಂಟಿನಲ್ಲಿ ಸಿಲ್ಲಿ ಕಾರಣಗಳಿಗಾಗಿ ಶಿವಣ್ಣನ ಮುಂದೆ ಜಗಳಕ್ಕೆ ನಿಂತವನು. ಒಟ್ನಾರೆ ಶತ್ರುವಿನ ಶತ್ರು ನನ್ನ ಮಿತ್ರ ಎಂಬಂತೆ ಈಗ ದರ್ಶನ್ ಮತ್ತು ಸುದೀಪ್ ಒಂದಾಗಿದ್ದು ಅವರಿಬ್ಬರೂ ಇತ್ತೀಚೆಗೆ ಟಾರ್ಗೆಟ್ ಮಾಡಿ ಕೊಂಡಿರುವುದು ಶಿವಣ್ಣನನ್ನು.



ತಾವಿಬ್ಬರೂ ಒಂದಾದರೆ ಕನ್ನಡ ಚಿತ್ರರಂಗದ ಮೇಲೆ ಶಿವರಾಜ್‌ಕುಮಾರ್ ಮತ್ತು ಅವರ ಕುಟುಂಬ ಹೊಂದಿರುವ ಹಿಡಿತವನ್ನು ಸಡಿಲಿಸಬಹುದು ಎಂಬ ಲೆಕ್ಕಾಚಾರ ಈ ಹಳೇ ದುಶ್ಮನ್‌ಗಳದ್ದು.

ದರ್ಶನ್ ಮತ್ತು ಸುದೀಪ್ ಏನೇ ಚಿಲ್ಲರೆ ರಾಜಕೀಯ ಮಾಡಿದರೂ ರಾಜ್ ಕುಟುಂಬಕ್ಕೆ ಇವರ ಉಗುರೂ ಸೋಕುವುದಿಲ್ಲ. ಚಿತ್ರರಂಗಕ್ಕೆ ಬಂದು ಇಪ್ಪತ್ತೈದು ವರ್ಷಗಳಾದರೂ ಶಿವಣ್ಣ ಉಳಿಸಿಕೊಂಡಿರುವ ಗೌರವ, ಟಾಪ್ 1 ಸ್ಥಾನದಲ್ಲಿದ್ದರೂ ಪುನೀತ್‌ಗಿರುವ ವಿನಯ, ರಾಘಣ್ಣನ ಸಹನೆ... ಇವೆಲ್ಲ ದುರಹಂಕಾರಿ ದರ್ಶನ್‌ಗಾಗಲಿ, ಪ್ರತಿಭಾವಂತ ನಾದರೂ ಹುಂಬನಾದ ಸುದೀಪ್‌ಗಾಗಲಿ ಎಲ್ಲಿ ಬರಬೇಕು?

ಆಗದಿದ್ದರೂ ಉತ್ತಮ ಪ್ರಯತ್ನ ಮಾಡಿದ್ದಕ್ಕಾಗಿ ಆ ಚಿತ್ರದ ನಿರ್ದೇಶಕ ಮಂಜು ಸ್ವರಾಜ್ ಬದುಕಿಗೆ ಕಷ್ಟವಾಗದಂತೆ ನೋಡಿಕೊಂಡವರು ಮಹದೇವ್.

ಇಂತಹ ಮಹದೇವ್ 'ಚಿಂಗಾರಿ' ಚಿತ್ರ ಪ್ರಾರಂಭವಾದಾಗ ದರ್ಶನ್‌ಗಿದ್ದ ಮಾರ್ಕೆಟ್ ವ್ಯಾಲ್ಯೂಗಿಂತ ನಲವತ್ತು ಪರ್ಸೆಂಟ್ ಹೆಚ್ಚು ಸಂಭಾವನೆಯನ್ನು ಕೊಟ್ಟಿದ್ದು ಅವರು ಮಾಡಿದ ದೊಡ್ಡ ತಪ್ಪು, ಈ ಕಾರಣಕ್ಕೇ ಅವತ್ತು ಇಂಡಸ್ಟ್ರಿಯವರು ಮಹದೇವ್ ವಿರುದ್ಧ ಕೆಂಗಣ್ಣು ಬೀರಿದ್ದರು. ಆದರೂ ತಾನು ಒಪ್ಪಿದ್ದ ಹಣಕ್ಕಿಂತ ಒಂದು ರುಪಾಯಿಯೂ ಕಡಿಮೆ ಇಲ್ಲದಂತೆ ದರ್ಶನ್‌ಗೆ ಸಂದಾಯ ಮಾಡಿದ್ದರು.

'ಚಿಂಗಾರಿ' ಚಿತ್ರಕ್ಕಾಗಿ ಸ್ವಿಡ್ಜರ್‌ಲ್ಯಾಂಡಿನಲ್ಲಿ 23 ದಿನಗಳ ಚಿತ್ರೀಕರಣವನ್ನು ಪ್ಲಾನು ಮಾಡಲಾಗಿತ್ತು, ಅದಕ್ಕಾಗಿ ಹೀರೋ ದರ್ಶನ್ ಸೇರಿದರೆ ಒಟ್ಟು 33 ಜನ ತಂತ್ರಜ್ಞರು ಅಲ್ಲಿಗೆ ತೆರಳಿದ್ದರು. ಸ್ವಿಡ್ಜರ್ ಲ್ಯಾಂಡಿಗೆ ಹೋದವನೇ ಕಂಠಪೂರ್ತಿ ಕುಡಿಯಲು ಆರಂಭಿಸಿದ ದರ್ಶನ್ ಬರೋಬ್ಬರಿ ಮೂರು ದಿನವಾದರೂ ಎದ್ದು ಶೂಟಿಂಗ್‌ಗೆ ಬರಲಿಲ್ಲ. ಸತತ ಮೂರು ದಿನ ಕುಡಿದು ಚಿತ್ತಾಗಿದ್ದ ದರ್ಶನ್‌ನನ್ನು ಕಾಡಿಬೇಡಿ ಶೂಟಿಂಗ್‌ಗೆ ಕರೆತರುವಲ್ಲಿ ನಿರ್ದೇಶಕ ಹರ್ಷ ಹೈರಾಣಾಗಿ ಹೋಗಿದ್ದ. ಬೇರೆ ನಿರ್ಮಾಪಕರಾಗಿದ್ದರೆ ದರ್ಶನ್ ನಡವಳಿಕೆ ಬಗ್ಗೆ ದೊಡ್ಡ ರಂಪಾಟ ಮಾಡಿ ಕದನಕ್ಕೆ ನಿಲ್ಲುತ್ತಿದ್ದರು. ಆದರೆ ಮಹದೇವ್ ಮಾತ್ರ ತುಟಿಪಿಟಿಕ್ ಎನ್ನಲಿಲ್ಲ.

ಇವೆಲ್ಲವನ್ನೂ ಸಹಿಸಿಕೊಂಡ, ಯಾರೂ ಕೊಡದಷ್ಟು ಹಣ ಕೊಟ್ಟ, ದರ್ಶನ್ ಜೈಲು ಸೇರಿದಾಗ ತಮ್ಮ ಸಿನಿಮಾಗೆ ಅಡಚಣೆಯಾದರೂ ತಾಳ್ಮೆಗೆಡದ, ನಷ್ಟವಾದರೂ ಬೇಸರಿಸಿಕೊಳ್ಳದ ನಿರ್ಮಾಪಕನಿಗೆ ದರ್ಶನ್ ಕೊಡುವ ಮರ್ಯಾದೆ ಇದೇನಾ? ಇದಾ ನಿಯತ್ತು?

ಹಿಂತಿರುಗಿ ನೋಡಲಿ

ಇವತ್ತು ದರ್ಶನ್ ತಾನೆಂದೂ ಸೋಲನ್ನೇ ಕಂಡವನಲ್ಲ ಎಂಬಂತೆ ಬೀಗುತ್ತಿದ್ದಾನೆ. ಆದರೆ ಅಕಸ್ಮಾತ್ 'ಸಾರಥಿ' ಚಿತ್ರ ಬಾಕ್ಸ್ ಆಫೀಸಿನಲ್ಲಿ ಮುಗ್ಗರಿಸಿದ್ದರೆ ಆತ ಚಿತ್ರರಂಗದಲ್ಲೇ ಲೆಕ್ಕಕ್ಕೇ ಉಳಿಯುತ್ತಿರಲಿಲ್ಲ. ಯಾಕೆಂದರೆ 'ಗಜ' ಚಿತ್ರದ ನಂತರ ದರ್ಶನ್ ನಟಿಸಿದ್ದ 'ಯೋಧ', 'ಶೌರ್ಯ', 'ಬಾಸ್' ಚಿತ್ರಗಳು ಬೋರ್ಡಿಗಿಲ್ಲದಂತೆ ನೆಲಕಚ್ಚಿದ್ದವು.

ಒಂದೆಡೆ ಹೆಂಡತಿಗೆ ಬಡಿದು ಜೈಲು ಸೇರಿದ್ದು, ಇನ್ನೊಂದೆಡೆ ಆತನ ವೃತ್ತಿ ಜೀವನ ಸೋಲಿನಲ್ಲಿ ಕೊನೆಗೊಂಡಿದ್ದು, ಎರಡೂ ಸೇರಿ ದರ್ಶನ್ ಇವತ್ತು ಮನೆಯಲ್ಲಿ ಕೂತಿರಬೇಕಿತ್ತು, ಆತನ ಅದೃಷ್ಟವೋ ಏನೋ, ಇತ್ತ ಆತನಿಂದ ಅಘಾತಕಾರಿಯಾಗಿ ಬಡಿಸಿಕೊಂಡಿದ್ದ ಆತನ ಪತ್ನಿ ವಿಜಯಲಕ್ಷ್ಮಿಯೇ ನ್ಯಾಯಾಲಯದಲ್ಲಿ ಆತನ ಪರ ನಿಂತಳು. ಅದೇ ಹೊತ್ತಿಗೆ ಅತ್ತ ಆತನ ಸಹೋದರ ದಿನಕರ್ ತೆಲುಗಿನ 'ಮಗಧೀರ' ಮತ್ತು ಹಾಲಿವುಡ್‌ನ 'ಲಯನ್ ಕಿಂಗ್' ತರಹದ ಚಿತ್ರಗಳಿಂದ 'ಕದ್ದು' ನಿರ್ದೇಶಿಸಿದ 'ಸಾರಥಿ' ದರ್ಶನ್‌ಗೆ ಮತ್ತೊಮ್ಮೆ ಯಶಸ್ಸನ್ನು ತಂದುಕೊಟ್ಟಿತು. ಆ ಸಿನಿಮಾ ನಿರೀಕ್ಷೆಗೂ ಮೀರಿ ದುಡ್ಡು ಮಾಡಿತು.

ಇವತ್ತು ತಾನು ಹಿಂದೆ ಕಂಡಿದ್ದ ಸೋಲು, ಮಾಡಿಕೊಂಡಿದ್ದ ಅನಾಚಾರಗಳು, ಮೈಮೇಲೆಳೆದುಕೊಂಡಿದ್ದ ಯಡವಟ್ಟುಗಳು... ಎಲ್ಲವನ್ನೂ ಮರೆತಂತೆ ವರ್ತಿಸುತ್ತಿರುವ ದರ್ಶನ್ ಮತ್ತದೇ ಅರಾಜಕತೆ ಪ್ರವೃತ್ತಿಯನ್ನು ಮುಂದುವರೆಸಿದ್ದಾನೆ. ಅದು ಅವನ ದುರಂತ...

ದುಡ್ಡೇ ದೊಡ್ಡಪ್ಪ

ಇವತ್ತು ದರ್ಶನ್‌ಗೆ ತಾನು ಒಳ್ಳೆ ಸಿನಿಮಾಗಳಲ್ಲಿ ನಟಿಸಬೇಕು, ನೆನಪಿನಲ್ಲಿ ಉಳಿಯುವಂಥ ಕಲಾವಿದನಾಗಬೇಕು ಎಂಬ ಬಯಕೆಯೇ ಇದ್ದಂತಿಲ್ಲ. ಈತನದ್ದು ಸಂಪೂರ್ಣವಾಗಿ ದುಡ್ಡು ಮಾಡುವ ಕಮರ್ಷಿಯಲ್ ಮೆಂಟಾಲಿಟಿ. "ನನಗೆ ದುಡ್ಡು ಕೊಟ್ಟರೆ ನಾನು ಚೆಡ್ಡಿಯಲ್ಲೂ ನಟಿಸಲು ಸಿದ್ಧ" ಎಂದು ಇದೇ ದರ್ಶನ ಹಿಂದೊಮ್ಮೆ ಘೋಷಿಸಿದ್ದೂ ಇದೆ. ಹೀಗೆ ಕಾಸು ಮಾಡುವುದನ್ನೇ ತನ್ನ ಜೀವನದ ಪ್ರಮುಖ ಉದ್ದೇಶ ಮಾಡಿಕೊಂಡಿರುವ ದರ್ಶನ್ ಹಣಕ್ಕಾಗಿ ನಿರ್ಮಾಪಕರಿಗೆ ಕೊಡುವ ಕಾಟ ಅಷ್ಟಿಷ್ಟಲ್ಲ. ಸಮಯಕ್ಕೆ ಸರಿಯಾಗಿ ಪೇಮೆಂಟ್ ಕೈಸೇರದಿದ್ದರೆ ಆ ಸಿನಿಮಾ ಕತೆ ಮುಗಿದಂತೆಯೇ. 'ಬಾಸ್' ಚಿತ್ರದ ನಿರ್ಮಾಪಕ ರಮೇಶ್ ಯಾದವ್ ತನಗೆ ಬಾಕಿ ದುಡ್ಡು ಕೊಡಲಿಲ್ಲ ಎಂಬ ಕಾರಣಕ್ಕೆ ಚಿತ್ರೀಕರಣಗೊಂಡಿದ್ದ ಹಾಡುಗಳ ರೀಲ್‌ಅನ್ನು ದರ್ಶನ್ ತನ್ನ ಮನೆಗೆ ಹೊತ್ತೊಯ್ದಿದ್ದ ಎಂದರೆ ಈತನ ಧನದಾಹ ಎಂತಹದ್ದೆಂದು ನೀವೇ ಲೆಕ್ಕಹಾಕಿ.

ದುಡ್ಡಿನ ವಿಚಾರದಲ್ಲಿ ದರ್ಶನ್ ಜೊತೆ ಚೌಕಾಸಿ ಮಾಡುವುದು ಅಸಾಧ್ಯ. ಹಿಂದೆ ನೂರಿನ್ನೂರು ರೂಪಾಯಿಗೆ ಕ್ಯಾಮೆರಾ ಅಸಿಸ್ಟೆಂಟ್‌ಆಗಿ ಕೆಲಸ ಮಾಡುತ್ತಿದ್ದ, ಬಸ್‌ಚಾರ್ಜಿಗೂ ಕಾಸಿಲ್ಲದೆ ಬೆಂಗಳೂರಿನಿಂದ ಮೈಸೂರಿಗೆ ಟ್ರೈನ್‌ನಲ್ಲೇ ಅಪ್ ಅಂಡ್ ಡೌನ್ ಮಾಡುತ್ತಿದ್ದ, ಹಸುಗಳ ಸಗಣಿ ಬಾಚುತ್ತಿದ್ದ ದರ್ಶನ್ ತನ್ನ ಹಿಂದಿನ ಕಷ್ಟದ ದಿನಗಳನ್ನೆಲ್ಲಾ ಮರೆತಂತೆ ಕಾಣುತ್ತಿದೆ. ಯಾಕೆಂದರೆ ದರ್ಶನ್ ಇತ್ತೀಚಿನ ದಿನಗಳಲ್ಲಿ ಅನ್ನದಾತ ನಿರ್ಮಾಪಕನಿಗೆ ಹೊರೆಯಾಗಿ ಪರಿಣಮಿಸಿದ್ದಾನೆ.

ದರ್ಶನ್‌ನನ್ನು ತಮ್ಮ ಚಿತ್ರದಲ್ಲಿ ಹಾಕಿಕೊಂಡ ನಿರ್ಮಾಪಕನಿಗೆ ಆತನಿಗೆ ಕೊಡುವ ಕೋಟಿ ರೂಪಾಯಿ ಸಂಭಾವನೆಯಲ್ಲದೆ ದಿನವೊಂದಕ್ಕೆ ಹದಿನೆಂಟರಿಂದ ಇಪ್ಪತ್ತು ಸಾವಿರ ರೂಪಾಯಿಯ ಎಕ್ಸ್‌ಟ್ರಾ ಖರ್ಚು ತಗುಲುತ್ತದೆ. ಈತನ ಕಾರ್ ಡ್ರೈವರ್‌ನ ಬಾಟಾ, ಮೇಕಪ್ ಅಸಿಸ್ಟೆಂಟು, ಪರ್ಸನಲ್ ಕಾಸ್ಟ್ಯೂಮರ್ರು, ಊಟೋಪಚಾರ... ಹೀಗೆ ಸಾವಿರಾರು ರೂಪಾಯಿಗಳನ್ನು ಪ್ರತಿ ದಿನ ನಿರ್ಮಾಪಕ ನೀರಿನಂತೆ ವ್ಯಯಿಸಲೇ ಬೇಕು.


ಅದನ್ನು ಹೇಗಾದರೂ ಮಾಡಬಹುದು. ಆದರೆ ದರ್ಶನ್‌ನ ಕಿರಿಕಿರಿ, ಮಾತುಗಳನ್ನು ಸಹಿಸೋದು ಮಾತ್ರ ನಿರ್ಮಾಪಕರಿಗೆ ಅಸಾಧ್ಯವಾಗಿದೆ. ಹೀಗಾಗಿಯೇ ದರ್ಶನ್ ಇದುವರೆಗೆ ತಾನು ನಟಿಸಿದ ಚಿತ್ರಗಳ ಯಾವ ನಿರ್ಮಾಪಕರಾದ ಎಂ.ಜಿ. ರಾಮಮೂರ್ತಿ, ಭಾ.ಮಾ ಹರೀಶ್, ಜಯಣ್ಣ, ಕೆ.ಸಿ.ಎನ್ ಚಂದ್ರು, ಸೇರಿದಂತೆ ಯಾರೊಂದಿಗೂ ಉತ್ತಮ ಬಾಂಧವ್ಯ ಹೊಂದಿಲ್ಲ...

ಗಾಂಧಿನಗರ ವಾರ್ಡ್ ಉಪಚುನಾವಣೆ
ನಟರಾಜ್ ಹಂತಕರ ಜೊತೆ ಬಿಜೆಪಿ ಬಹಿರಂಗ ಪ್ರಚಾರ!


ಬನಶಂಕರಿಗೆ ಕೌನ್ಸಿಲರ್ ಆಗಿದ್ದ ದಿವಾನಾ ಅಲಿ ಹತ್ಯೆಗೂ ಗಾಂಧಿನಗರ ಕೌನ್ಸಿಲರ್ ನಟರಾಜ್ ಹತ್ಯೆಗೂ ಇರುವ ಸಂಬಂಧ ಮತ್ತು ಸಾಮ್ಯದ ಮೂಲ ಒಂದೇ. ಇಬ್ಬರೂ ಅಧಿಕಾರಸ್ಥ ಬಿಜೆಪಿಯ ವಿರೋಧಿ ಕೌನ್ಸಿಲರ್‌ಗಳು. ಅವರನ್ನು ಕೊಂದವರು ಬಿಜೆಪಿಯ ಆಪ್ತರು. ಕೊಲೆಯಾದ ನಂತರ ಬಂದ ಉಪಚುನಾವಣೆಯಲ್ಲಿ ಕೊಂದವರ ಜೊತೆ ನಿಂತು ಬಿಜೆಪಿ ಅಭ್ಯರ್ಥಿ ಪ್ರಚಾರ ನಡೆಸುತ್ತಿದ್ದ ಮತ್ತು ಬಿಜೆಪಿಯೇ ಅಂತಿಮವಾಗಿ ಗೆಲುವು ಸಾಧಿಸಿತು!

ಜೆಡಿಎಸ್ ಅಥವಾ ಕಾಂಗ್ರೆಸ್‌ನ ಕೌನ್ಸಿಲರ್‌ಗಳಷ್ಟೇ ಏಕೆ ಕೊಲೆಯಾಗುತ್ತಾರೆ? ಅವರ ಕೊಲೆಯಿಂದಾದ ಲಾಭ ಬಿಜೆಪಿಗೇ ಏಕೆ ದಕ್ಕುತ್ತದೆ? ಕೊಲೆಯ ಕಾರಣದಿಂದಾಗಿ ಬಂದ ಉಪಚುನಾವಣೆಯಲ್ಲಿ ಹಂತಕರೆಲ್ಲರೂ ಏಕೆ ಬಿಜೆಪಿಯನ್ನೇ ಬೆಂಬಲಿಸುತ್ತಾರೆ? ಇನ್ನೆಷ್ಟು ಮಂದಿ ವಿರೋಧಿ ಕೌನ್ಸಿಲರ್‌ಗಳನ್ನು ಕೊಲ್ಲಿಸಿ ಲಾಭ ಮಾಡಿಕೊಳ್ಳಲು ಬಿಜೆಪಿ ಹೊರಟಿದೆ? ಕೊಂದವರ ಜೊತೆ ಯಾವ ಮುಖ ಹೊತ್ತು ಬಿಜೆಪಿ ಓಟು ಕೇಳುತ್ತದೆ? ಈ ಮಟ್ಟದ ರಕ್ತ ರಾಜಕಾರಣಕ್ಕೆ ಕೈಯಿಟ್ಟ ಬಿಜೆಪಿ ನಾಯಕರು ಇನ್ನೆಂಥ ಆದರ್ಶವನ್ನು ಪ್ರತಿಪಾದಿಸಹೊರಟಿದ್ದಾರೆ?


ಇಂಥ ಅನೇಕ ಪ್ರಶ್ನಾವಳಿಗಳ ಒಟ್ಟು ಮೊತ್ತವೇ ಸದ್ಯ ಬಿಬಿಎಂಪಿಗೆ ನಡೆಯುತ್ತಿರುವ ಗಾಂಧಿನಗರ ವಾರ್ಡಿನ ಉಪಚುನಾವಣೆ. ಕಳೆದ ಬಾರಿ ಬಿಜೆಪಿಯ ರಾಮಚಂದ್ರನ ವಿರುದ್ಧ ಕೇವಲ ಮುನ್ನೂರು ಮತಗಳ ಅಂತರದಿಂದ ಗೆದ್ದಿದ್ದ ಕಾಂಗ್ರೆಸ್ ಅಭ್ಯರ್ಥಿ ನಟರಾಜ್ ಗಾಂಧಿನಗರದ ಶಾಸಕ ದಿನೇಶ್ ಗುಂಡೂರಾವ್‌ರ ಪರಮಾಪ್ತ ಬೆಂಬಲಿಗ. ಗೆದ್ದಿನ್ನೂ ಎರಡು ವರ್ಷ ತುಂಬುವ ಮೊದಲೇ ನಟರಾಜ್ ವಿಚಿತ್ರವಾಗಿ ಕೊಲೆಯಾದ. ಕೊಂದವನು ಆತನ ವಿರುದ್ಧ ಕೇವಲ ನಾನೂರು ಮತಗಳ ಅಂತರದಿಂದ ಸೋತಿದ್ದ ಮುರುಗನ್. ನಟರಾಜ್ ಜೊತೆಗೇ ಇದ್ದ ಆತನ ಶಿಷ್ಯರನ್ನೇ ಜೊತೆಹಾಕಿಕೊಂಡು ನಡುರಸ್ತೆಯಲ್ಲಿ ಕೌನ್ಸಿಲರ್‌ನನ್ನು ಕೊಲ್ಲಿಸಿದ ಮುರುಗನ್‌ನ ಬೆನ್ನಿಗಿದ್ದವನು ಗಾಂಧಿನಗರದ ಪುರಾನಾ ಪಾತಕಿ ಬಾಂಬ್ ನಾಗ!




ದಿನೇಶ್ ಗುಂಡೂರಾವ್ ವಿರುದ್ಧ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋತಿದ್ದ ಬಾಂಬ್ ನಾಗ ಉರ್ಫ್ ಶ್ರೀರಾಂಪುರದ ಮಾಜಿ ಕೌನ್ಸಿಲರ್ ನಾಗರಾಜ್ ಮತ್ತು ಗಾಂಧಿನಗರ ವಾರ್ಡ್‌ನ ಪಾಲಿಕೆ ಚುನಾವಣೆಯಲ್ಲಿ ನಟರಾಜ್ ವಿರುದ್ಧ ಸೋತಿದ್ದ ಮುರುಗನ್ ಇಬ್ಬರೂ ಸೇರಿಯೇ ಕಾಂಗ್ರೆಸ್ ಕೌನ್ಸಿಲರ್ ನಟರಾಜ್‌ನನ್ನು ಮುಗಿಸಿದ್ದರು. ಆದರೆ ನಾಗ ಮಾತ್ರ ತಪ್ಪಿಸಿಕೊಂಡ. ಮುರುಗನ್ ಹಂತಕರ ಜೊತೆ ಜೈಲುಪಾಲಾದ. ಏಕೆಂದರೆ ನಾಗ ಆ ಹೊತ್ತಿಗಾಗಲೇ ಸಂಸದ ಪಿ.ಸಿ. ಮೋಹನ್ ಪಾಳಯ ಹೊಕ್ಕು ಬಿಜೆಪಿಯ ಹಿತೈಷಿಯಾಗಿ ರೂಪುಗೊಂಡಿದ್ದ!




ಬಿಜೆಪಿ ನಾಯಕ ಮತ್ತು ಸಂಸದ ಪಿ.ಸಿ. ಮೋಹನ್ ಅವತ್ತು ಹಂತಕರ ರಕ್ಷಣೆಗೆ ನಿಂತು ಬಾಂಬ್ ನಾಗ ಜೈಲುಪಾಲಾದ ಹಾಗೆ ಪೊಲೀಸರ ಮೇಲೆ ಪ್ರಭಾವ ಬೀರಿದ್ದೂ ಅಲ್ಲದೆ ಈತನಕ ಮುರುಗನ್‌ನ ಕೂದಲೂ ಕೊಂಕದ ಹಾಗೆ ಕಾಪಾಡಿದ್ದರ ಕುರಿತು ಪತ್ರಿಕೆ ಸವಿಸ್ತಾರ ವರದಿ ಪ್ರಕಟಿಸಿತ್ತಾದರೂ ಅಧಿಕಾರಸ್ಥರ (ತಾಕತ್ತಿನ) ಮುಂದೆ ಅದು ಯಾವ ಲೆಕ್ಕ? ಅಲ್ಲಿಗೆ ದಿವಾನಾ ಅಲಿಯ ಕೊಲೆಯಾದ ನಂತರ ಬನಶಂಕರಿ ವಾರ್ಡಿನ ಗತಿ ಏನಾಯಿತೋ ಅದೇ ಗತಿ ಗಾಂಧಿನಗರ ವಾರ್ಡಿಗೂ ಶತಸ್ಸಿದ್ಧ ಎಂಬುದು ನಿಕ್ಕಿಯಾಗಿತ್ತು.



ದಿವಾನಾ ಆಲಿಯ ಹತ್ಯೆಯ ಹಿಂದೆ ಪ್ರತ್ಯಕ್ಷವೋ ಪರೋಕ್ಷವೋ ಬಿಜೆಪಿ ನೆರಳಿತ್ತು, ಕೌನ್ಸಿಲರ್ ಆಲಿ ಕೊಲೆಯಾಗುವುದಕ್ಕೂ ಮೊದಲೇ ಸರಿಸುಮಾರು ಐದು ಸಾವಿರದಷ್ಟು ಹೆಚ್ಚುವರಿ ಮತದಾರರನ್ನು ಬನಶಂಕರಿ ವಾರ್ಡಿನ ಮತದಾರರ ಪಟ್ಟಿಗೆ ಸೇರಿಸಲಾಗಿತ್ತು. ಹಂತಕರ ಪೈಕಿ ಇಬ್ಬರು ಈಗ ಅದೇ ವಾರ್ಡಿನಿಂದ ಗೆದ್ದು ಬಂದಿರುವ ಬಿಜೆಪಿ ಕೌನ್ಸಿಲರ್ ಬಸವರಾಜನ ಜೊತೆ ಒಡನಾಟವಿಟ್ಟುಕೊಂಡಿ ದ್ದರು. ಆಲಿಯ ಕೊಲೆಯಿಂದಾಗಿ ನಡೆದ ಬನಶಂಕರಿಯ ಉಪಚುನಾವಣೆಯಲ್ಲಿ ಕೊಂದವರೇ ಬಿಜೆಪಿ ಪರ ಪ್ರಚಾರಗೈದಿದ್ದು ಕೌನ್ಸಿಲರ್ ಆಲಿಯ ಕೊಲೆಗೆ ಹೇಗೆ ಬಿಜೆಪಿ ಸರ್ಕಾರವೇ ಕೈಜೋಡಿಸಿತ್ತೆಂಬುದನ್ನು ಸಾಬೀತು ಮಾಡಿತ್ತು.



ಈಗ ಗಾಂಧಿನಗರ ವಾರ್ಡಿನಲ್ಲಾಗುತ್ತಿರುವುದು ಅದೇ. ಕಾಂಗ್ರೆಸ್ ಕೌನ್ಸಿಲರ್‌ನ ಹತ್ಯೆ ಬಗ್ಗೆ ನಯಾಪೈಸೆಯ ಕನಿಕರವನ್ನೂ ತೋರದ ಬಿಜೆಪಿ ಈಗ ಕೊಲೆಯ ಬೆಂಕಿಯಲ್ಲೇ ತನ್ನ ಬೇಳೆ ಬೇಯಿಸಿಕೊಳ್ಳುತ್ತಿದೆ. ಈ ಹಿಂದೆ ನಟರಾಜ್ ವಿರುದ್ಧ ಕೇವಲ ಮುನ್ನೂರು ಮತಗಳಿಂದ ಸೋತಿದ್ದ ಕಬ್ಬನ್‌ಪೇಟೆಯ ಹಳೆ ಗಿರಾಕಿ ರಾಮಚಂದ್ರನಿಗೇ ಬಿಜೆಪಿ ಮತ್ತೆ ಟಿಕೆಟ್ಟು ಕೊಟ್ಟಿದೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದ ಟಿ. ಗೋಪಾಲಕೃಷ್ಣ ಶಾಸಕ ದಿನೇಶ್ ಗುಂಡೂರಾಯರ ಪರಮಾಪ್ತ ಬೆಂಬಲಿಗ ಮತ್ತು ಹುಟ್ಟಾ ಕಾಂಗ್ರೆಸ್ ಕಾರ್ಯಕರ್ತ. ಇವರಿಬ್ಬರ ಮಧ್ಯೆ ಜೆಡಿಎಸ್‌ನ ಪಿ.ಕೆ. ಸುರೇಶ್ ಎಂಬ ಮಾಜಿ ಬಿಜೆಪಿ ಕಾರ್ಯಕರ್ತನನ್ನು ಅಖಾಡಕ್ಕಿಳಿಸಿದೆ. ಸುರೇಶ್ ಕಳೆದ ಹತ್ತು ವರ್ಷಗಳಿಂದ ಪಿ.ಸಿ. ಮೋಹನ್ ಬಂಟ ನಂತಿದ್ದ, ತನಗೆ ಟಿಕೆಟ್ ತಪ್ಪಿಸಿ ಮತ್ತೆ ರಾಮಚಂದ್ರನನ್ನೇ ಬೆಂಬಲಿಸಿದ ಗುರು ಪಿ.ಸಿ. ಮೋಹನ್ ವಿರುದ್ಧ ರೋಸತ್ತು ಸುರೇಶ್ ಜೆಡಿಎಸ್ ಸೇರಿದ್ದು ಕಬ್ಬನ್‌ಪೇಟೆ, ಕಿಲಾರಿ ರೋಡ್, ಕಾಟನ್‌ಪೇಟೆ ದರ್ಗಾ ಏರಿಯಾಗಳಲ್ಲಿ ಬಿಜೆಪಿಗೆ ಬಲವಾದ ಪೆಟ್ಟನ್ನೇ ಕೊಟ್ಟಿದೆ.



ಹಾಗಂತ ಕಾಂಗ್ರೆಸ್ ದಾರಿಯೇನೂ ಸಲೀಸಲ್ಲ, ಏಕೆಂದರೆ ಈ ಬಾರಿ ಅಣ್ಣಾಡಿಎಂಕೆ ಗಾಂಧಿನಗರಕ್ಕೆ ಕೈಹಾಕಿದೆ. ಲಕ್ಷ್ಮಣಪುರಿ ಜೋಪಡಿ, ರಿಸಾಲ್ ದಾರ್ ಸ್ಟ್ರೀಟ್, ವೀವಿಗಿರಿ ಕಾಲೋನಿ ಏರಿಯಾದ ತಮಿಳು ಸ್ಲಂ ಓಟುಗಳನ್ನು ಅಣ್ಣಾಡಿಎಂಕೆ ಕಿತ್ತರೆಂದರೆ ಅದು ಕಾಂಗ್ರೆಸ್ ಪಾಲಿಗೆ ಕಂಟಕವೆ. ಇಂಥದೊಂದು ಲೆಕ್ಕಹಾಕಿಯೇ ಕಾವೇರಿ ಟ್ರಾವೆಲ್ಸ್ ಮಾಲೀಕ ಯುವರಾಜ್ ಅಣ್ಣಾಡಿಎಂಕೆ ಬಾವುಟ ಹಿಡಿದು ದುಡ್ಡು ಚೆಲ್ಲುತ್ತಿದ್ದಾನೆ. ಶತಾಗತಾಯ ಇಲ್ಲಿ ಗೆಲ್ಲಲೇಬೇಕೆಂದು ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ತನ್ನ ಸಂಪುಟದ ಇಬ್ಬರ ಮಂತ್ರಿಗಳನ್ನು ಗಾಂಧಿನಗರಕ್ಕೆ ಕಳಿಸಿಕೊಟ್ಟಿದ್ದಾರೆ. ಇವರೊಂದಿಗೆ ತಮಿಳು ನಟ ಆನಂದ್‌ರಾಜ್ ಕೂಡ ವಿಶೇಷ ಆಕರ್ಷಣೆಯೆಂಬಂತೆ ಬೀದಿಬೀದಿ ಸುತ್ತುತ್ತಿದ್ದಾನೆ.

ಆದರೆ ಗಾಂಧಿನಗರ ಹಣಾಹಣಿಯೇನಿದ್ದರೂ ಅದು ಬಿಜೆಪಿ ಸಂಸದ ಪಿ.ಸಿ. ಮೋಹನ್ ಮತ್ತು ಶಾಸಕ ದಿನೇಶ್ ಗುಂಡೂರಾವ್ ನಡುವೆ ಮಾತ್ರ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಏನಾದರೂ ಮಾಡಿ ದಿನೇಶ್‌ರನ್ನು ಸೋಲಿಸಿಬಿಟ್ಟರೆ ತಾನು ಮಂತ್ರಿಯಾಗಬಹುದೆನ್ನುವ ದುರಾಸೆ ಪಿ.ಸಿ. ಮೋಹನ್‌ರದ್ದು, ಹಾಗಂತ ದಿನೇಶ್ ಗುಂಡೂರಾವ್ ಜಗ್ಗಬೇಕಲ್ಲ, ಸತತ ಎರಡನೇ ಬಾರಿ ಗೆದ್ದು ಶಾಸಕರಾದ ದಿನೇಶ್ ಗುಂಡೂರಾವ್ ಪಾಲಿಗೆ ಗಾಂಧಿನಗರವೆನ್ನುವುದು ತನ್ನ ಅಸ್ತಿತ್ವದ ಏಕೈಕ ಆಧಾರಸ್ತಂಭ. ಅದನ್ನೇನಾದರೂ ಪಿ.ಸಿ. ಮೋಹನ್‌ಗೆ ಬಿಟ್ಟು ಕೊಟ್ಟರೆಂದರೆ ದಿನೇಶ್ ರಾಜಕೀಯ ಭವಿಷ್ಯವೇ ಮುಗಿದಂತೆ. ಅದಕ್ಕೆಂದೇ ಗಾಂಧಿನಗರ ವಾರ್ಡನ್ನು ತನ್ನ ಅಳಿವುಉಳಿವಿನ ಪ್ರಶ್ನೆಯೆಂಬಂತೆ ದಿನೇಶ್ ಗುಂಡೂರಾವ್ ಹೆಣಗಾಡುತ್ತಿದ್ದಾರೆ.

ದಿನೇಶ್ ಪರಮಾಪ್ತ ಗೋಪಾಲಕೃಷ್ಣ ಹುಟ್ಟು ಕಾಂಗ್ರೆಸ್ ಕಾರ್ಯಕರ್ತನೇನೋ ನಿಜ. ಆದರೆ ಶ್ರೀಮಂತನಲ್ಲ, ಸಭ್ಯ, ಯಾವುದೇ ತಕರಾರುಗಳಿಗಾಗಲಿ, ತರಲೆಗಳಿಗಾಗಲಿ ಗೋಪಾಲಕೃಷ್ಣ ಯಾವತ್ತೂ ಕೈಯಿಟ್ಟವನಲ್ಲ. ಮೂಲತಃ ಚಿಂದಿಬಟ್ಟೆಯ ವ್ಯಾಪಾರಿಯಾದ್ದರಿಂದ ಜನ ಚಿಂದಿಗೋಪಾಲ ಎಂದೇ ಕರೆಯುತ್ತಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ದಿನೇಶ್ ಪರ ನಿಂತು ಇಡೀ ಶ್ರೀರಾಂಪುರದಿಂದ ಓಟುಗಳನ್ನು ತನ್ನ ಸರಳ ಮತ್ತು ಸಾಚಾತನದಿಂದಾಗಿಯೇ ಆಕರ್ಷಿಸಿದ್ದು ಈ ಗೋಪಾಲನ ಅಸಲೀ ತಾಕತ್ತು.

ಆದರೆ ಬಿಜೆಪಿ ಅಭ್ಯರ್ಥಿ ರಾಮಚಂದ್ರನಿಗೆ ತಲಾ ಓಟಿಗೆ ಎರಡು ಸಾವಿರವಾದರೂ ಕೊಟ್ಟು ಗೆಲ್ಲಲೇಬೇಕೆಂಬ ದುರಾಸೆ. ಕಳೆದ ಎರಡು ಸಾರಿ ಕಬ್ಬನ್‌ಪೇಟೆಯಿಂದ ಗೆದ್ದು ಕೌನ್ಸಿಲರ್ ಆಗಿದ್ದ ರಾಮಚಂದ್ರ ನದ್ದು ಅಗಾಧ ಹಣದಾಹ. ಯಾರೇ ಹೊಸಮನೆ ಕಟ್ಟಿಸುತ್ತಿದ್ದಾರೆಂದರೆ ಈತನಿಗೆ ಸ್ಕ್ವೇರ್ ಫೀಟ್ ಲೆಕ್ಕದಲ್ಲೇ ಲಂಚ ಕೊಡ ಬೇಕು. ಆ ಕಾರಣಕ್ಕೇ ಜನ ಸ್ಕ್ವೇರ್ ಫೀಟ್ ರಾಮಚಂದ್ರ ಎಂಬ ಬಿರುದು ಕೊಟ್ಟಿದ್ದಾರೆ. ಈತನ ಕಿರುಕುಳ ತಾಳಲಾರದೆ, 1989 ರಲ್ಲಿ ಮನೆ ಮಾಲೀಕನೊಬ್ಬ ಈತನ ಮನೆಗೆ ನುಗ್ಗಿ ಮಚ್ಚಿನಿಂದ ಹೊಡೆದಿದ್ದ!

ಇಂಥಾ ರಾಮಚಂದ್ರನ ಪರ ನಿಂತ ಬಿಜೆಪಿ ನಾಯಕರೀಗ ಗಾಂಧಿನಗರದ ಪ್ರತಿ ಮನೆಗೆ ತಲಾ ಎರಡು ಸಾವಿರದಂತೆ ಕಾಸು ಹಂಚುತ್ತಿದ್ದಾರೆ. ಹಣ ಹಂಚುವುದರಲ್ಲಿ ಅಣ್ಣಾಡಿಎಂಕೆ ಮತ್ತು ಬಿಜೆಪಿ ನಡುವೆ ಜಿದ್ದಾಜಿದ್ದಿಯ ಪೈಪೋಟಿಯಿದೆ. ಒಂದೆಡೆ ಈ ರೀತಿ ಹಡಬೆ ದುಡ್ಡು ಹಂಚಿ ಸ್ಲಂ ಓಟುಗಳ ಬುಟ್ಟಿಗೆ ಕೈಹಾಕುವ ಬಿಜೆಪಿ ಇದಕ್ಕಿಂತಲೂ ಅಸಹ್ಯಕ್ಕಿಳಿದಿರುವುದು ಕೊಲೆಯಾದ ನಟರಾಜ್ ಹಂತಕರ ಮೂಲಕ.

ಸದ್ಯ ಬಿಜೆಪಿ ಪರ ಓಟಿನ ಬೇಟೆಗೆ ನಿಂತ ಹಂತಕದ್ವಯರ ಪೈಕಿ ಬಾಂಬ್ ನಾಗನದು ಇನ್‌ಡೈರೆಕ್ಟ್ ಬಿಜೆಪಿ ಸೇವೆಯಾದರೆ ಮುರುಗನ್ ಡೈರೆಕ್ಟಾಗಿ ಬಿಜೆಪಿ ಪರ ಓಡಾಡುತ್ತಿದ್ದಾನೆ. ಮೇಲುನೋಟಕ್ಕೆ ತಾನು ತಟಸ್ಥನಾಗಿದ್ದೇನೆ ಎಂದು ಬಾಂಬ್ ನಾಗ ಫೋಜು ಕೊಡುತ್ತಾನೆ. ಆದರೆ ರಾತ್ರಿಯಾಗುತ್ತಿದ್ದಂತೆ ಯಾರ್‍ಯಾರು ಕಾಂಗ್ರೆಸ್ ಪರ ಪ್ರಚಾರಕ್ಕಿಳಿದಿದ್ದಾರೋ ಅಂಥವರಿಗೆ ಫೋನೆತ್ತಿದ್ದೇ ನಾಗ ಧಮಕಿ ಹಾಕುತ್ತಾನೆ. ಈಗಾಗಲೇ ಮುಕ್ಕಾಲು ಡಜನ್ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ನಾಗನ ಗ್ಯಾಂಗ್ ಅಟ್ಯಾಕ್ ಮಾಡಿದೆ. ಆ ಕಾಲದಿಂದಲೂ ಗೂಂಡಾಗಿರಿ, ಸುಲಿಗೆ, ಬ್ಲಾಕ್‌ಮೇಲ್ ಇತ್ಯಾದಿ ಕ್ರಿಮಿನಲ್ ಕೆಲಸಗಳನ್ನೇ ಮಾಡಿಕೊಂಡು ಬಂದ ನಾಗನಿಗೆ ರೌಡಿಜಮ್ಮಾಗಲಿ, ರಕ್ತ ಹರಿಸುವುದಾಗಲಿ ಹೊಸದೇನಲ್ಲ. ಇನ್ನು ಸಂಸದ ಪಿ.ಸಿ. ಮೋಹನ್‌ರೇ ಬೆನ್ನಿಗಿರುವಾಗ ನಾಗನ ಅಟ್ಟಹಾಸಕ್ಕೆ ಯಾವ ಅಂಕೆ?

ಹೀಗೆ ಬಾಂಬ್ ನಾಗನನ್ನು ಗುಪ್ತವಾಗಿ ಕಾಂಗ್ರೆಸ್ ವಿರುದ್ಧ ಛೂಬಿಟ್ಟ ಸಂಸದ ಪಿ.ಸಿ. ಮೋಹನ್ ಇದಕ್ಕಿಂತಲೂ ಲಜ್ಜೆಗೆಟ್ಟು ಹಂತಕ ಮುರುಗನನ್ನು ಜೊತೆ ಹಾಕಿಕೊಂಡಿದ್ದಾನೆ. ಇದೇ ಫೆಬ್ರವರಿ 22 ರ ಬುಧವಾರ ಬಿಜೆಪಿ ಪರವಾಗಿ ಓಟು ಕೇಳಕ್ಕೆ ಕಿನೋ ಟಾಕೀಸ್ ಎದುರಿನ ರಿಸಾಲ್‌ದಾರ್ ಸ್ಟ್ರೀಟ್‌ಗೆ ಬೆಂಬಲಿಗರ ಸಮೇತ ಬಂದ ಪಿ. ಸಿ. ಮೋಹನ್ ಜೊತೆ ಬಿಜೆಪಿ ಅಭ್ಯರ್ಥಿ ರಾಮಚಂದ್ರನೂ ಇದ್ದ. ಆದರೆ ಪಿ.ಸಿ. ಮೋಹನ್ ಜೊತೆಜೊತೆಯಾಗಿ ಹೆಜ್ಜೆಹಾಕಿದ್ದು ಮಾತ್ರ ನಟರಾಜ್ ಹಂತಕ ಮುರುಗನ್!

ಕೊಲೆಯಾದ ಕೌನ್ಸಿಲರ್ ನಟರಾಜ್‌ರ ಹಂತಕ ಮುರುಗನ್ ಜೊತೆ ಬಿಜೆಪಿ ಪ್ರಚಾರಕ್ಕೆ ಬಂದ ಅಭ್ಯರ್ಥಿ ರಾಮಚಂದ್ರ ಮತ್ತು ಸಂಸದ ಪಿ.ಸಿ. ಮೋಹನ್ ಮುಖದಲ್ಲಿ ಯಾವ ಪಾಪಪ್ರಜ್ಞೆಯೂ ಇರಲಿಲ್ಲ, ಮುರುಗನ್‌ನನ್ನು ಮುಂದಿಟ್ಟುಕೊಂಡೇ ಮೋಹನ್ ದಿನವಿಡೀ ಮನೆಮನೆ ಸುತ್ತಿ ಓಟು ಕೇಳಿದ್ದಾರೆ. ರಿಸಾಲ್‌ದಾರ್ ಸ್ಟ್ರೀಟ್, ವೀವಿಗಿರಿ ಕಾಲೋನಿ ಮತ್ತು ಡಿನೋಟಾಕೀಸ್ ಸಂಧಿಯಲ್ಲಿ ಮುರುಗನ್‌ಗೆಂದೇ ಓಟು ಹಾಕುವ ಸರಿಸುಮಾರು ಮೂರೂವರೆ ಸಾವಿರದಷ್ಟು ಸ್ಲಂ ಮತದಾರರಿದ್ದಾರೆ. ಮುರುಗನ್ ಪಾಲಿನ ಅಷ್ಟೂ ಮತಗಳನ್ನು ಬಿಜೆಪಿಗೆ ವರ್ಗಾಯಿಸಿಬಿಟ್ಟರೆ ತನ್ನ ಛೇಲಾ ರಾಮಚಂದ್ರನನ್ನು ಸಲೀಸಾಗಿ ಗೆಲ್ಲಿಸಿಕೊಳ್ಳಬಹುದೆಂಬುದು ಪಿ.ಸಿ. ಮೋಹನ್ ಹುನ್ನಾರ.

ಕೌನ್ಸಿಲರ್ ನಟರಾಜ್ ಹತ್ಯೆಯಲ್ಲಿ ಬಿಜೆಪಿಯ ಪಾಲೆಷ್ಟೆಂಬುದನ್ನು ಬದಿಗಿಟ್ಟು ನೋಡಿದರೂ ಹಂತಕರ ಬೆನ್ನಿಗೆ ಬಿಜೆಪಿ ನಿಂತಿರುವುದಂತೂ ಸತ್ಯ. ರಕ್ತದ ಕೊಚ್ಚೆಯಲ್ಲೇ ಕಮಲ ಅರಳಬೇಕೇ?

• ರಾ. ಸೋಮನಾಥ್

ಯಾಗದ ಕುದುರೆ ಶೆಟ್ಟರ್ ಅಶೋಕ್ ಉಪಮುಖ್ಯಮಂತ್ರಿ?

ಸದಾನಂದ ಗೌಡರನ್ನು ಪದಚ್ಯುತಿಗೊಳಿಸುವ ನಿರ್ಣಾಯಕ ದಾಳಿಗೆ ಇನ್ನು ಕೆಲವೇ ಕ್ಷಣ ಬಾಕಿ!

ಯಾರು ಗೆಲ್ಲುತ್ತಾರೋ ಗೊತ್ತಿಲ್ಲ. ಯಡ್ಡಿಗೇ ಹಿನ್ನಡೆಯಾಗುತ್ತಾ? ನಿರೀಕ್ಷಿಸಿದಷ್ಟು ಶಾಸಕರು ಯಡ್ಡಿ ಜೊತೆ ಕೈಜೋಡಿಸದೇ ಹೋದರೆ ಏನು ಗತಿ? ಸದಾನಂದ ಗೌಡರಿಗೆ ಹೈಕಮಾಂಡ್ ಶ್ರೀರಕ್ಷೆಯಿದ್ದರೂ ಶಾಸಕಾಂಗದಲ್ಲಿ



ಬೆಂಬಲ ಗಿಟ್ಟದೇ ಹೋದರೆ ಮುಂದೇನು? ನಿಜಕ್ಕೂ ಜಗದೀಶ್ ಶೆಟ್ಟರ್ ಆತ್ಮಪೂರ್ವಕ ವಾಗಿ ಯಡ್ಡಿ ಜೊತೆ ಕೈ ಜೋಡಿಸಿ ದ್ದಾರಾ? ಗೃಹಮಂತ್ರಿ ಅಶೋಕ್ ಏಕಾಏಕಿ ಯಡ್ಡಿ ಪರ ಬದಲಾಗಿದ್ದರ ಹಿಂದಿನ ರಹಸ್ಯವೇನು?

• ರಾ. ಸೋಮನಾಥ್

ಇತ್ಯಾದಿ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಕ್ಕುವುದು ಫೆಬ್ರವರಿ 23 ರ ರೇಸ್‌ಕೋರ್ಸ್ ರಸ್ತೆಯ ಬಲ ಪ್ರದರ್ಶನದಲ್ಲಿ!

ಅದು ಯಡ್ಡಿ ಹತಾಶೆಯ ಪರಾಕಾಷ್ಠೆ. ಕಳೆದ ಸಂಕ್ರಾಂತಿಯಿಂದ ಶಿವರಾತ್ರಿಯವರೆಗೂ ಬಹುಶಃ ಯಡ್ಡಿ ನಿದ್ದೆ ಮಾಡಿದ ರಾತ್ರಿಗಳೇ ಇಲ್ಲ. ಮೊದಲು ರಾಜ್ಯ ಸುತ್ತಿ ಪಕ್ಷ ಸಂಘಟಿಸ್ತೀನಿ ಎಂದರು. ಕಂಡಕಂಡಲ್ಲಿ ಜನ ತನ್ನನ್ನು ಮತ್ತೆ ಮುಖ್ಯಮಂತ್ರಿಯಾಗಿ ನೋಡಲು ಬಯಸಿದ್ದಾರೆ ಎಂದರು. ಎಲ್ಲೆಂದರಲ್ಲಿ ಸಭೆಗಳಾದವು. ಉತ್ತರ ರಾಜ್ಯಗಳ ಚುನಾವಣೆಯೂ ಮುಗಿಯಿತು. ಆದರೆ ಯಡ್ಡಿ ಪಾಲಿನ ಸಂತೋಷದ ಕ್ಷಣಗಳು ಮಾತ್ರ ಮರೀಚಿಕೆಯಂತೆ ದೂರದೂರಕ್ಕೆ ಸರಿಯುತ್ತಲೇ ಇತ್ತು.

ಇದೆಲ್ಲದರೊಂದಿಗೆ ಯಡ್ಡಿ-ವಿರುದ್ಧ ದಿನಂಪ್ರತಿ ಕಿಡಿಕಾರುತ್ತಿದ್ದ ಮೀಡಿಯಾಗಳು, ಸದಾನಂದ ಗೌಡರ ವಿಷಯದಲ್ಲಿ ಮೆದುವಾದವು. ಯಡ್ಡಿಯ ಆಜನ್ಮ ವೈರಿ ಬಿಜೆಪಿ ರಾಷ್ಟ್ರನಾಯಕ ಅನಂತ್ ಕುಮಾರ್ ಇದ್ದಕ್ಕಿದ್ದಂತೆ ಸದಾನಂದ ಗೌಡರಿಗೆ ಬೇಷರತ್ ಬೆಂಬಲ ಘೋಷಿಸಿ ಬಿಟ್ಟರು. ಇನ್ನು ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪ, ಶೆಟ್ಟರ್, ಶಂಕರಮೂರ್ತಿಯಂಥ ಯಡ್ಡಿ ವಿರೋಧಿಗಳಿಗೂ ಸದಾನಂದ ಗೌಡರೇ ಪ್ರಿಯರಾಗಿಬಿಟ್ಟರು. ಇದೆಲ್ಲಕ್ಕೂ ಮಿಗಿಲಾಗಿ ಯಡ್ಡಿಯ ಬದ್ಧದ್ವೇಷಿಗಳಾದ ದೇವೇಗೌಡ-ಕುಮಾರಸ್ವಾಮಿ ಜೊತೆ ಸಿ.ಎಂ. ಗೌಡ ಸಂಬಂಧ ಸಾಧಿಸಿದ್ದು ಯಡ್ಡಿಗೆ ಗಾಯದ ಮೇಲೆ ಬರೆ ಎಳೆದಂತೆ ಕಾಡುತ್ತಲೇ ಇತ್ತು.

ವಿಧಾನ ಪರಿಷತ್ ಚುನಾವಣೆಗೆ ಸದಾನಂದ ಗೌಡ ನಿಂತಾಗಲೇ ಅದು ಖಚಿತವಾಗಿತ್ತು. ಜೆಡಿಎಸ್ ಪರಿಷತ್ ಚುನಾವಣೆಯಿಂದ ತಟಸ್ಥವಾಗಿದ್ದು ಕೂಡ ಸದಾನಂದ ಗೌಡರ ಮೇಲಿನ ಜಾತಿ ಪ್ರೀತಿಯಿಂದ ಮತ್ತು ಯಡ್ಡಿ ಮೇಲಿನ ದ್ವೇಷದಿಂದಲೇ ತಾನೇ? ಇನ್ನು ದೇವೇಗೌಡರ ಶಿಫಾರಸ್ಸಿನ ಮೇಲೆ ನ್ಯಾಯಮೂರ್ತಿ ಚಂದ್ರಶೇಖರಯ್ಯ ನವರನ್ನು ಉಪಲೋಕಾಯುಕ್ತರಾಗಿ ಸದಾನಂದ ಗೌಡರು ನೇಮಿಸುತ್ತಾರೆಂದರೆ ಅದನ್ನು ಯಡ್ಡಿ ಸಹಿಸುವುದುಂಟಾ? ಚಂದ್ರಶೇಖರಯ್ಯ ಉಪಲೋಕಾಯುಕ್ತರಾದ ಗಳಿಗೆಯಲ್ಲೇ ಯಡ್ಡಿ ಮತ್ತು ಸದಾನಂದ ಗೌಡರ ಸಂಬಂಧವೇನೆಂದು ನಿರ್ಧಾರವಾಗಿ ಹೋಗಿತ್ತು.

ಇದಾದನಂತರ ನಡೆದ ಪ್ರತಿಯೊಂದು ಘಟನೆಯೂ ಯಡ್ಡಿ-ಸದಾ ಮಧ್ಯೆ ಬಿರುಕನ್ನು ಮತ್ತಷ್ಟು ಹೆಚ್ಚಿಸಿತೇ ಹೊರತು ಸುಧಾರಿಸಲೇ ಇಲ್ಲ. ಇತ್ತ ಸದಾನಂದ ಗೌಡ ಯಡ್ಡಿ ವಿರುದ್ಧ ಒಂದೊಂದೇ ಅಸ್ತ್ರ ಪ್ರಯೋಗಿಸುತ್ತಲೇ ಹೋದದ್ದು ಅಂತಿಮವಾಗಿ ಬಯಲಾಗಿದ್ದು ಇದೇ ಫೆಬ್ರವರಿ 18 ರಂದು ಗೋಕಾಕ್‌ನಲ್ಲಿ ನಡೆದ ರಾಜ್ಯ ವೀರಶೈವ ಪಂಚಮಸಾಲಿ ಸಂಘದ ಸಮಾವೇಶದಲ್ಲಿ. ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಚರಪೀಠಾಧಿಪತಿ ಸಿದ್ಧಲಿಂಗೇಶ್ವರ ಸ್ವಾಮೀಜಿಗಳ ಪೀಠಾರೋಹಣದ ನಾಲ್ಕನೇ ವಾರ್ಷಿಕೋತ್ಸವದಲ್ಲಿ ಬಹಿರಂಗವಾಗೇ ಸ್ವಾಮೀಜಿ ಯಡ್ಡಿ ವಿರುದ್ಧ ಕಿಡಿಕಾರಿಬಿಟ್ಟರು.

ಸದಾನಂದ ಗೌಡರ ನಗುಮುಖದಿಂದಾಗಿ ಬಿಜೆಪಿ ಅಧಿಕಾರಕ್ಕೆ ಬಂದಿದೆಯೇ ಹೊರತು ಗಂಟು ಮುಖದಿಂದಲ್ಲ ಎಂದು ಸಿದ್ಧಲಿಂಗೇಶ್ವರ ಸ್ವಾಮೀಜಿ ನೇರವಾಗಿ ಯಡ್ಡಿ ವಿರುದ್ಧ ಹರಿಹಾಯ್ದು ಬಿಟ್ಟರು. ಜೊತೆಗೆ ಪಂಚಮಸಾಲಿ ಸಂಘದ ಗೌರವಾಧ್ಯಕ್ಷ ಬಾವಿ ಬೆಟ್ಟಪ್ಪ 'ನಮ್ಮ ಏಳ್ಗೆ ಸಹಿಸದೇ ಕೆಲವರು ಮುಖ್ಯಮಂತ್ರಿಗಳನ್ನು ಸಭೆಗೆ ಬರದ ಹಾಗೆ ಕುತಂತ್ರ ಮಾಡಿದ್ದಾರೆ. ಅಂಥವರಿಗೆ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸುತ್ತೇವೆ. ಪಂಚಮಸಾಲಿ ಸಮಾಜ ಯಾವುದೇ ಪಕ್ಷದ ಸ್ವತ್ತಲ್ಲ.....' ಎಂದದ್ದು ಕೂಡ ಯಡ್ಡಿ ವಿರುದ್ಧವೇ ಹಾಕಿದ ಏಟಿನಂತಿತ್ತು.

ಲಿಂಗಾಯತ ಪಂಚಮಸಾಲಿ ಪೀಠದ ಚರ ಪೀಠಾಧಿಪತಿ ಡಾ. ಮಹಾಂತ ಸ್ವಾಮೀಜಿ, ಕಾಗಿನೆಲೆ ಪೀಠದ ನಿರಂಜನಾನಂದ ಸ್ವಾಮೀಜಿ, ನಾಗನೂರು ರುದ್ರಾಕ್ಷಿ ಮಠದ ಸಿದ್ಧರಾಮ ಸ್ವಾಮೀಜಿ, ಮುಗಳಖೋಡದ ಶಿವಯೋಗಿ ಮುರುಘ ರಾಜೇಂದ್ರ ಸ್ವಾಮಿ, ಅಂಕಲಿ ಮಠದ ಅಡವಿ ಸಿದ್ಧೇಶ್ವರ ಸ್ವಾಮೀಜಿ ಮತ್ತು ಅರಬಾವಿ ಮಠದ ಸಿದ್ಧಲಿಂಗ ಸ್ವಾಮೀಜಿ ಯಂಥವರ ಮುಂದೆ ನೆರೆದ ಸಹಸ್ರಾರು ಜನರೆದುರು ಮುಖ್ಯಮಂತ್ರಿ ಸದಾನಂದ ಗೌಡರನ್ನು ಮುಂದಿಟ್ಟು ಕೊಂಡು ತನ್ನನ್ನು ಹೀನಾಮಾನ ಹೀಯಾಳಿಸಿದ ಪಂಚಮಸಾಲಿ ನಾಯಕರ ದುಸ್ಸಾಹಸವನ್ನು ಕಂಡ ಯಡ್ಡಿಗೆ ಏನಾಗಿರಬೇಡ?

ಅಷ್ಟಕ್ಕೂ ಇಂಥದೊಂದು ಪಂಚಮಸಾಲಿ ಸಮಾವೇಶದ ಹಿಂದಿದ್ದದ್ದು ಯಡ್ಡಿಯ ಕಡು ವಿರೋಧಿ ಸಚಿವ ಬಾಲಚಂದ್ರ ಜಾರಕಿಹೊಳಿ.

ನನ್ನ ವಿರುದ್ಧವೇ ಸಂಘಟಿಸಲ್ಪಟ್ಟ ಈ ಸಮಾವೇಶವನ್ನು ಬಹಿಷ್ಕರಿಸುವಂತೆ ಯಡ್ಡಿ ತನ್ನ ಬೆಂಬಲಿಗಾರದ ನಿರಾಣಿ, ಕೋರೆ, ಸುರೇಶ್ ಅಂಗಡಿ, ರಮೇಶ್ ಕತ್ತಿ, ಲಕ್ಷ್ಮಣ ಸವದಿ, ಮೇಟಗುಡ್, ಸಂಜಯ ಪಾಟೀಲ್, ಸುರೇಶ್ ಮಾರಿಹಾಳ, ಮಾಮನಿ ಮುಂತಾದವರೆಲ್ಲರಿಗೂ ಫರ್ಮಾನು ಹೊರಡಿಸಿದ್ದರೂ ಅದನ್ನು ಲೆಕ್ಕಿಸದೇ ಸದಾನಂದ ಗೌಡ ಹೋಗಿ ಉದ್ಘಾಟಿಸಿದ್ದು ಯಡ್ಡಿಯ ಮರ್ಮಕ್ಕೇ ಹಾಕಿದ ಪೆಟ್ಟಾಗಿತ್ತು. ಇದೇ ಹೊತ್ತಿಗೆ ತುಮಕೂರು ಸಿದ್ಧಗಂಗಾ ಮಠದಿಂದ ಮತ್ತೊಂದು ಆಘಾತಕಾರಿ ಸುದ್ದಿ ಬಂತು. ಅದು ಕೋಟಿ ಲಿಂಗೇಶ್ವರ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಯಡ್ಡಿಯನ್ನು ಹೊರಗಿಟ್ಟು ಮುಖ್ಯಮಂತ್ರಿ ಸದಾನಂದ ಗೌಡರನ್ನು ಮುಂದಿಟ್ಟುಕೊಳ್ಳುವ ಹಿರಿಯ ಶ್ರೀಗಳ ನಿರ್ಧಾರದ ಸುದ್ದಿ! ಅಲ್ಲಿಗೆ ಲಿಂಗಾಯತ ಸಮಾಜವನ್ನೇ ತನ್ನಿಂದ ದೂರ ಮಾಡಲು ಮುಖ್ಯಮಂತ್ರಿ ಸದಾನಂದ ಗೌಡ ಕೈಹಾಕಿದ್ದಾರೆಂಬುದು ಯಡ್ಡಿಗೆ ಗ್ಯಾರಂಟಿಯಾಗಿತ್ತು.

ಆಗ ಯಡ್ಡಿಯ ತಲೆ ಹೊಕ್ಕಿದ್ದೇ ಕಾಶಿ ಯಾತ್ರೆ!

ಕಾಶಿಯಾತ್ರೆಯಿಂದ ಬಂದಕೂಡಲೇ ರಾಜ್ಯದ ಜನಕ್ಕೆ ಸಿಹಿಸುದ್ದಿ ಕೊಡ್ತೀನಿ. ಆಪ್ತ ಶಾಸಕರ ಜೊತೆ ಚರ್ಚಿಸಿ ಖಂಡಿತ ಒಂದು ನಿರ್ಧಾರಕ್ಕೆ ಬರ್ತೀನಿ ಎಂದೇ ಕಾಶಿಯ ವಿಮಾನವೇರಿದ ಯಡ್ಡಿಯ ಮನಸ್ಸಲ್ಲಿ ನಿರ್ಧಾರ ಗಟ್ಟಿಯಾಗಿತ್ತು. ಅದು ಸದಾನಂದ ಗೌಡರ ಪದಚ್ಯುತಿ.

ಕಾಶಿಯಾತ್ರೆ ಮುಗಿಸಿ ಫೆಬ್ರವರಿ 20 ರ ಸೋಮವಾರ ಸಂಜೆ ದೆಹಲಿಗೆ ಹೋಗಿ ಗಡ್ಕರಿಯನ್ನು ಕಂಡು ತನ್ನ ನಿರ್ಧಾರ ಪ್ರಕಟಿಸುವುದು ಯಡ್ಡಿಯ ಉದ್ದೇಶವಾಗಿತ್ತು. ಯಾವತ್ತು ಫೆಬ್ರವರಿ 24 ಮತ್ತು 25 ರಂದು ಗಡ್ಕರಿಯೇ ಬೆಂಗಳೂರಿಗೆ ಬರುತ್ತಿದ್ದಾರೆಂಬುದು ಗ್ಯಾರಂಟಿಯಾಯಿತೋ ಇನ್ನು ದೆಹಲಿಗೆ ಹೋಗಿ ಹೇಳುವುದೇನು ಬಂತು? ಬೆಂಗಳೂರಿನಲ್ಲೇ ಏನು ಮಾಡಬೇಕೋ ಮಾಡಿದರಾಯ್ತು ಎಂಬ ನಿರ್ಧಾರಕ್ಕೆ ಯಡ್ಡಿ ಬಂದಾಗಿತ್ತು. ಕಾಶಿಯಿಂದ ಬರುತ್ತಿದ್ದಂತೆ ಎದುರಾದ ಪತ್ರಕರ್ತರಿಗೆ 'ರಾಜ್ಯದಲ್ಲಿ ಸಮೃದ್ಧಿ ಅಂತೇನಾದರೂ ಇದ್ದರೆ, ಅಭಿವೃದ್ಧಿ ಆಗಿದ್ದರೆ ಅದು ನನ್ನ ಕೊಡುಗೆ ಮಾತ್ರ. ಈ ನಿಟ್ಟಿನಲ್ಲಿ ಮತ್ತಷ್ಟು ಒಗ್ಗಟ್ಟಿನಿಂದ ನಾವು ಕೆಲಸ ಮಾಡಬೇಕಿದೆ ಎಂಬ ವಿಚಿತ್ರ ಡೈಲಾಗ್ ಹೊಡೆದು ಬಿಟ್ಟರು.

ಕೇಳಿದ ಪತ್ರಕರ್ತರಿಗೆ ಏನೆನ್ನಿಸಿತೊ! 100 ಕ್ಕೂ ಅಧಿಕ ತಾಲ್ಲೂಕುಗಳಲ್ಲಿ ಭಾರಿ ಬರಗಾಲ. ಅಕ್ಕಪಕ್ಕದ ರಾಜ್ಯಗಳಿಗೆ ತುತ್ತು ಅನ್ನಕ್ಕಾಗಿ ಗುಳೆ ಹೋಗುತ್ತಿರುವ



ಗುಲ್ಬರ್ಗಾ, ಬಿಜಾಪುರ, ಬೆಳಗಾವಿಯ ನಿರ್ಗತಿಕ ಸಮೂಹ. ಕೊಳ್ಳೇ ಹೊಡೆದ ರಾಜ್ಯದ ಗಣಿ ಸಂಪತ್ತು. ಅಡಿಕೆಗೂ ರೋಗ, ಭತ್ತಕ್ಕೂ ರೋಗ. ರಾಜಧಾನಿ ಸೇರಿದಂತೆ ರಾಜ್ಯದ ಬಹುತೇಕ ನಗರಗಳಲ್ಲಿ ನೀರಿನ ಹಾಹಾಕಾರ. ಜೊತೆಗೆ ಮಿತಿಮೀರಿದ ಭ್ರಷ್ಟಾಚಾರ. ಒಬ್ಬ ಮಂತ್ರಿ ಜೈಲಲ್ಲಿ, ಮುಖ್ಯಮಂತ್ರಿಯೂ ಜೈಲು ಕಂಡು ಸ್ಥಾನವಂಚಿತನಾಗಿ ಬೀದಿಯಲ್ಲಿ, ಇನ್ನೂ ಕೆಲ ಮಂತ್ರಿಗಳು ಜೈಲು ಕಂಡು ಇವತ್ತಿಗೂ ಜಾಮೀನಿನಲ್ಲಿ. ಒಬ್ಬ ಮಂತ್ರಿ ರೇಪ್ ಮಾಡಿ ಜೈಲು ಕಂಡರೆ ಮಿಕ್ಕ ಮೂವರು ಮಂತ್ರಿಗಳು ವಿಧಾನಸಭೆಯಲ್ಲಿ ಕೂತು 'ಬ್ಲೂಫಿಲ್ಮ್' ವೀಕ್ಷಿಸಿದ ಪಾಪಕ್ಕೆ ತುತ್ತಾದ ಕರ್ಮ!

ಜಗ್ಗದೆ ಹೋದರೆ ಬಿಜೆಪಿಗೇ ಗುನ್ನ



ಕೆ.ಎಚ್. ಮುನಿಯಪ್ಪ


ಹಾಗೊಮ್ಮೆ ಸದಾನಂದ ಗೌಡರನ್ನೇ ಮುಂದುವರೆಸಲು ಹೈಕಮಾಂಡ್ ಹಠಕ್ಕೆ ಬಿತ್ತೆಂದರೆ ಯಡ್ಡಿಗಿರುವ ಏಕೈಕ ಮಾರ್ಗವೆಂದರೆ ತನ್ನೆಲ್ಲಾ ಬೆಂಬಲಿಗರ ಜೊತೆ ಬಿಜೆಪಿಯಿಂದ ಹೊರಬಿದ್ದು ಕಾಂಗ್ರೆಸ್ ಜೊತೆ ಕೈಜೋಡಿಸುವುದು.

ಯಡ್ಡಿಯ ಆಪ್ತವಲಯದಲ್ಲಿ ಸದ್ಯ ಹೊಗೆಯಾಡುತ್ತಿರುವ ವದಂತಿಯೇ ನಂಬುವುದಾದರೆ ಇಲ್ಲಿಗೆ ತಿಂಗಳ ಹಿಂದಷ್ಟೇ ಕೇಂದ್ರ ರೈಲ್ವೆ ಮಂತ್ರಿ ಕೆ.ಎಚ್. ಮುನಿಯಪ್ಪ ಮತ್ತು ಯಡ್ಡಿ ಮಧ್ಯೆ ವ್ಯವಹಾರವೊಂದು ಕುದುರಿದೆ. ಆ ಪ್ರಕಾರ ಯಡ್ಡಿಯೇನಾದರೂ ಬಿಜೆಪಿ ತೊರೆದು ಹೊರಬಿದ್ದಿದ್ದೇ ಆದಲ್ಲಿ ಕಾಂಗ್ರೆಸ್ ಪರ ಕೈಜೋಡಿಸುವ ಜವಾಬ್ದಾರಿ ಕೆ.ಎಚ್. ಮುನಿಯಪ್ಪನವರದ್ದು. ಈ ಬಗ್ಗೆ ಅಧಿನಾಯಕಿ ಸೋನಿಯಾರನ್ನು ಮನವೊಲಿಸುವ ಹೊಣೆಯನ್ನೂ ಅವರೇ ವಹಿಸುವುದು. ಇದಕ್ಕೆ ಪ್ರತಿಯಾಗಿ ಯಡ್ಡಿ ಗ್ಯಾಂಗ್ ಮುನಿಯಪ್ಪನವರನ್ನೇ ಮುಖ್ಯಮಂತ್ರಿಯೆಂದು ಒಪ್ಪಿಕೊಳ್ಳಬೇಕು ಮತ್ತು ಪ್ರಮುಖ ಖಾತೆಗಳೆಲ್ಲವನ್ನು ಯಡ್ಡಿ ಬಣಕ್ಕೇ ಒಪ್ಪಿಸಬೇಕು.

ಉಳಿಕೆ ಒಂದು ವರ್ಷದ ಅವಧಿಗೆ ಕೆ.ಎಚ್. ಮುನಿಯಪ್ಪನವರೇ ಮುಖ್ಯಮಂತ್ರಿಯಾಗಿ ಯಡ್ಡಿ ವಿರುದ್ಧದ ಎಲ್ಲಾ ಕೇಸುಗಳಿಂದಲೂ ಬಚಾವು ಮಾಡಲು ಸಹಕರಿಸಬೇಕು. ಸಾಧ್ಯವಾದರೆ ತಾನು ಹೇಳಿದವರನ್ನು ಉಪಮುಖ್ಯಮಂತ್ರಿ ಮಾಡಬೇಕು. ಮುನಿಯಪ್ಪ ಹೊರತಾಗಿ ಬೇರೆ ಯಾರೇ ಮುಖ್ಯಮಂತ್ರಿಯಾಗುವುದಕ್ಕೇ ತಮ್ಮ ಸಹಮತಿಯಿಲ್ಲ; ಇತ್ಯಾದಿ ಷರತ್ತು ಹಾಕಿಯೇ ಯಡ್ಡಿ ಕಾಶಿಯಾತ್ರೆ ಅಣಿಯಾಗಿದ್ದು. ಇದನ್ನೇ ಸಿಹಿ ಸುದ್ದಿ ಎಂದು ಭ್ರಮಿಸಿದರೋ ಅಥವಾ ಸದಾನಂದ ಗೌಡರನ್ನು ಉಚ್ಚಾಟಿಸುವುದೇ ಅವರ ಪಾಲಿಗೆ ಸಿಹಿ ಸುದ್ದಿಯೇ ಗೊತ್ತಿಲ್ಲ.

ಕಳೆದ ಆರೇಳು ತಿಂಗಳುಗಳಿಂದ ತೀವ್ರಗೊಂಡ ಯಡ್ಡಿ-ಕೆ.ಎಚ್. ಮುನಿಯಪ್ಪನವರ ಸಂಬಂಧ ಇಂದು ನಿನ್ನೆಯದಲ್ಲ. ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗಿನಿಂದಲೂ ವಾರಕ್ಕೊಮ್ಮೆಯಾದರೂ ಮುನಿಯಪ್ಪ-ಯಡ್ಡಿ ಸಂಧಿಸಲೇಬೇಕು. ಮುನಿಯಪ್ಪ ಅಳಿಯ ಚಿಕ್ಕಪೆದ್ದಣ್ಣ ಎಂಬ ಸಬ್ ರಿಜಿಸ್ಟ್ರಾರ್‌ನನ್ನು ದಿನವೊಂದಕ್ಕೆ 5 ಲಕ್ಷ ರೂಪಾಯಿ ಲಂಚ ಹುಟ್ಟುವ ಲಗ್ಗೆರೆಯ ಸಬ್ ರಿಜಿಸ್ಟ್ರಾರ್ ಕಚೇರಿಗೆ ತಂದದ್ದು, ಬೆಂಗಳೂರು ಸುತ್ತಮುತ್ತ ಬಡದಲಿತರ ಭೂಮಿ ದೋಚಲು ಪೊಲೀಸರ ಮೂಲಕ ನೆರವಾಗಿದ್ದು, ಕೋಲಾರದಲ್ಲಿ ದುರ್ಬಲ ಅಭ್ಯರ್ಥಿಯನ್ನು ಹಾಕುವ ಮೂಲಕ ಗೆಲ್ಲಲು ಪರೋಕ್ಷ ನೆರವಾಗಿದ್ದು ಇತ್ಯಾದಿ ಯಡ್ಡಿ ಮಾಡಿದ ಉಪಕಾರಕ್ಕೆ ರೈಲ್ವೇ ಮಂತ್ರಿ ಮುನಿಯಪ್ಪ ಇಷ್ಟಾದರೂ ಋಣ ತೀರಿಸದಿದ್ದರೇ ಹೇಗೆ?

...ಂಠಿತವಾಗಿರುವುದು ...ಭಿವೃದ್ಧಿಯೋ ಲೂಟಿಯೋ



ಸದಾನಂದ ಗೌಡರೇ ಮುಂದುವರೆದರೆ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದು ಕಷ್ಟ, ಶಾಸಕರ ಕೆಲಸಗಳು ಏನೇನೂ ಆಗುತ್ತಿಲ್ಲ, ಅಭಿವೃದ್ಧಿ ಕುಂಠಿತ, ಇತ್ಯಾದಿ ವಿತಂಡವಾದಕ್ಕೆ ಬಿದ್ದ ಯಡ್ಡಿ ಗ್ಯಾಂಗ್‌ನ ಆರೋಪದಲ್ಲಿ ಏನಾದರೂ ಹುರುಳಿದೆಯೆ?

ಬಿಬಿಎಂಪಿಗೆ ಈ ಬಾರಿ ಸದಾನಂದ ಗೌಡ ಸರ್ಕಾರಿ ಅನುದಾನವನ್ನು ಬಿಡುಗಡೆ ಮಾಡಿಲ್ಲ. ಏಕೆಂದರೆ ಬಿಡುಗಡೆಯಾದ ಅಷ್ಟೂ ದುಡ್ಡನ್ನೂ ಅಶೋಕ್ ನೇತೃತ್ವದ ಪಾಲಿಕೆ ಕಳ್ಳರ ಕೂಟವೇ ನುಂಗಿ, ಹಾಕುತ್ತದೆಯೆಂಬ ಭೀತಿಯಿಂದ. ಅದು ಸರ್ಕಾರಕ್ಕಾಗಲಿ, ಬೆಂಗಳೂರಿಗಾಗಲಿ ಹೇಗೆ ಕಂಟಕ?

ಸದಾನಂದ ಗೌಡ ಮುಖ್ಯಮಂತ್ರಿಯಾದಾಗಿನಿಂದ ಸರ್ಕಾರದ ದೊಡ್ಡ ಹಗರಣಗಳ್ಯಾವುದೂ ಬೆಳಕಿಗೆ ಬರಲಿಲ್ಲ. ಈ ಪೈಕಿ ಬಿಬಿಎಂಪಿಯ ಗಾಂಧಿನಗರ, ರಾಜರಾಜೇಶ್ವರಿ ನಗರ ಮತ್ತು ಮಲ್ಲೇಶ್ವರದ 1530 ಕೋಟಿ ರೂಪಾಯಿಗಳ ...ಸ್ ಬಿಲ್ ಕರ್ಮಕಾಂಡದ ಮೂಲ ಪುರುಷನೇ ಆರ್. ಅಶೋಕ್. ಇದೇನಾದರೂ ಬೆಂಗಳೂರಿನ ಅಷ್ಟೂ ...ಗೆ ವಿಸ್ತರಿಸಿತೆಂದರೆ ಬಹುಪಾಲು ಬಿಜೆಪಿ ಶಾಸಕರು ಜೈಲು ಪಾಲಾಗಬೇಕಾಗುತ್ತದೆ. ಅಶೋಕ್ ಬಣದ ...ಶಾಸಕರ ಈ ದೌರ್ಬಲ್ಯ ಅರಿತೇ ಬಿಬಿಎಂಪಿಗೆ ಬಿಡುಗಡೆ ಮಾಡಬೇಕಿದ್ದ ಸಾವಿರ ಕೋಟಿಯ ಅನುದಾನವನ್ನು ...ಿದ ಸದಾನಂದ ಗೌಡ ಆ ಮಟ್ಟಿಗಾದರೂ ಬೊಕ್ಕಸದ ಹಗಲು ದರೋಡೆಯನ್ನು ತಪ್ಪಿಸಿದ್ದಾರೆ. ಈ ಹಿಂದೆ ...ಂಬಲಿಗ ಶಾಸಕರಿಗೆಲ್ಲ ಯಥೇಚ್ಛವಾಗಿ ಅನುದಾನ ಕೊಟ್ಟು ಲೂಟಿಗೆ ದಾರಿ ಕಲ್ಪಿಸುತ್ತಿದ್ದ ಯಡ್ಡಿಯಿಂದ ...ಕಂಡಿದ್ದ ಬಿಜೆಪಿ ಶಾಸಕರಿಗೆ ಸದಾನಂದ ಗೌಡ ನಿಷ್ಪ್ರಯೋಜಕರಾಗಿ ...ರುವುದು ಭ್ರಷ್ಟಾಚಾರದ ಕಾರಣಕ್ಕೇ ಹೊರತು ಅಭಿವೃದ್ಧಿಗಲ್ಲ. ಮೂರೂವರೆ ...ಳ ಅವಧಿಯಲ್ಲಿ ಯಡ್ಡಿ ಸಾಧಿಸಿದ್ದು ಆಯಾ ಶಾಸಕರ ಕಪ್ಪುಹಣದ ಅಭಿವೃದ್ಧಿಯೇ ...ತು ನಾಡಿಗಾಗಲಿ, ಜನಸಾಮಾನ್ಯರಿಗಾಗಲಿ ಇದರಿಂದ ನಯಾಪೈಸೆಯ ...ೀಜನವಾಗಲಿಲ್ಲ. ಶೆಟ್ಟರ್ ಥರದವರಿಗೂ ದೊಡ್ಡಮಟ್ಟದ ಕೈಚಳಕ ...ಲಾಗುತ್ತಿಲ್ಲ ಅಂದರೆ ಇನ್ನೂ ಬಿಜೆಪಿಯ ಇತರೇ ಮಂತ್ರಿಗಳ ಪಾಡು ...ರಬೇಡ? ಯಡ್ಡಿ ಬಣದ ದೃಷ್ಟಿಯಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲು ...ಂದ ಗೌಡ ಅನುಕೂಲಕಾರಿಯಲ್ಲ ಎಂಬ ವಾದದ ಹಿಂದಿರುವುದು ಲೂಟಿ ಮತ್ತು ...ಚಾರದ ಹುನ್ನಾರವೇ ಹೊರತು ಮತ್ತೇನಲ್ಲ.



...ವೃದ್ಧಿಯೇನಿದ್ದರೂ ಅದು ದುರ್ಗತಿಯ ಮಟ್ಟಗೆ ...ೕ ಹೊರತು ಸಮೃದ್ಧಿಯಾಗಿದ್ದು ಭ್ರಷ್ಟಾಚಾರ, ...ಶೆ ಮತ್ತು ಅನಾಚಾರದಲ್ಲಿ ಮಾತ್ರ ಎಂಬುದನ್ನು ...ಅರ್ಥ ಮಾಡಿಸುವವರ್ಯಾರು?

...ಷ ಭ್ರಮೆಗೆ ಬಿದ್ದೇ ಯಡ್ಡಿ ಫೆಬ್ರವರಿ 23 ...ರ್ಶನಕ್ಕೆ ಕರೆಕೊಟ್ಟರು. ಹಾಗಂತ ಸೋಲನ್ನು ...ಬಾರದಲ್ಲ. ಜೊತೆಗೆ ಮುಖ್ಯಮಂತ್ರಿ ಸದಾನಂದ ...ೊಂದು ಬರೆ ಎಳೆಯಲೇಬೇಕಲ್ಲ. ಅದಕ್ಕೆಂದು ...ರುಕ ರಾಜಿಯೊಂದಕ್ಕೆ ಬಂದಿದ್ದು ತನ್ನ ...ಯ ಎದುರಾಳಿ ಜಗದೀಶ್ ಶೆಟ್ಟರ್ ಜೊತೆಗೆ!

ತಾನೊಬ್ಬ ಲಿಂಗಾಯತ ಲೀಡರ್ ಎಂಬ ಹಣೆಪಟ್ಟಿ ಕಳೆದುಕೊಳ್ಳಲು ಹೋಗದೆ ಮುಖ್ಯಮಂತ್ರಿ ಪದವಿಗೆ ತಂದ ಸದಾನಂದ ಗೌಡರೇ ಬೆನ್ನಿಗೆ ಚೂರಿ ಹಾಕಿದ ಮೇಲೆ ಇನ್ನು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಲಿಂಗಾಯತ ಜಾತಿವಾದವನ್ನು ಬಳಸಿಕೊಂಡರೆ ತಪ್ಪೇನಿದೆ?

ಇಂಥ ಅನಿವಾರ್ಯಕ್ಕೆ ಬಿದ್ದೇ ಯಡ್ಡಿ ಕೈಹಾಕಿದ್ದು ಶೆಟ್ಟರ್ ಹೆಗಲಿಗೆ. ಇಲ್ಲಿಗೆ ಎರಡು ತಿಂಗಳ ಹಿಂದೆಯೇ ಯಡ್ಡಿ ಮತ್ತು ಶೆಟ್ಟರ್ ಮಧ್ಯೆ ರಾಜಿ ಕುದುರಿತ್ತು. ಇಬ್ಬರನ್ನೂ ಸೇರಿಸಿ ಜಾತಿಯ ಫೆವಿಕಾಲ್ ಅಂಟಿಸಿದ್ದು ಸದ್ಯ ವೀರಶೈವ ಸಾಮ್ರಾಜ್ಯದ ರಾಜಗುರು ಎಂದೇ ಖ್ಯಾತಿವೆತ್ತ ಸುತ್ತೂರು ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿ. ಬೆಂಗಳೂರಿನ ಶ್ರೀಮಂತ ಭಕ್ತಾದಿಯೊಬ್ಬರ ಮನೆಗೆ ಯಡ್ಡಿ-ಶೆಟ್ಟರ್ ಇಬ್ಬರನ್ನೂ ಕರೆಸಿಕೊಂಡ ಸುತ್ತೂರು ದೇಶೀಕೇಂದ್ರ ಸ್ವಾಮಿ ಜಾತಿಮಂತ್ರ ಹೇಳಿಕೊಟ್ಟ ಮರುಗಳಿಗೆಯಿಂದಲೇ ಯಡ್ಡಿಯ ತಲೆಯಲ್ಲಿ ಹೊಸ ಹುನ್ನಾರವೊಂದು ಮೊಳೆತಿತ್ತು.



...ಖ್ಯಮಂತ್ರಿಯಾದ ಮೂರೇ ತಿಂಗಳಿಗೆ ತನ್ನನ್ನು ...ಾರಂಭಿಸಿದ ಸದಾನಂದ ಗೌಡ ಒಳಗೊಳಗೇ ...ಡರ ಜೊತೆ ಕೈಜೋಡಿಸಿದ್ದನ್ನು ಲೆಕ್ಕ ಹಾಕಿಯೇ ...ೂಸ ಷಡ್ಯಂತ್ರವೊಂದಕ್ಕೆ ಕೈಯಿಟ್ಟಿದ್ದರು. ಅದು ...ಯ ಪ್ರತಿಸ್ಪರ್ಧಿ ಶೆಟ್ಟರ್‌ರನ್ನು ಸದಾನಂದ ಗೌಡರ ...ಛೂಬಿಡುವುದು ಮತ್ತು ಬಿಜೆಪಿಯ ಒಕ್ಕಲಿಗರ ...ಂದ ಅಧಿಪತಿ ಆರ್. ಅಶೋಕ್‌ರನ್ನು ...ೇರಿಯವಾಗಿ ಸದಾನಂದ ಗೌಡರ ವಿರುದ್ಧ ...ವುದು.

...ನಂದ ಗೌಡರ ಕಾರಣಕ್ಕೆ ಆರೆಸ್ಸೆಸ್ ಮೂಲದ ...ರಾವಳಿ ಶಾಸಕರ ಬೆಂಬಲ ನಷ್ಟಗೊಂಡರೂ ...ಅಶೋಕ್ ಮತ್ತು ಶೆಟ್ಟರ್ ಬೆಂಬಲಿಗರ ... ಸರಿದೂಗಿಸಿಕೊಳ್ಳುವುದು ಯಡ್ಡಿಯ ...ವಾಗಿತ್ತು. ಬಿಜೆಪಿ ಮಟ್ಟಿಗೆ ತಾನೇ ಒಕ್ಕಲಿಗರ ...ಧಿಪತಿಯೆಂದು ಭಾವಿಸಿದ್ದ ಅಶೋಕ್ ಆ ... ಯಡ್ಡಿ ವಿರುದ್ಧ ಕತ್ತಿಮಸೆಯುತ್ತಲೇ ಬಂದರು. ...ಗೇ ದೇವೇಗೌಡರ ಜೊತೆ ಸಂಬಂಧ ...ಕೊಂಡರು. ಈ ಕಾರಣಕ್ಕೆ ತಾನೇ ಯಡ್ಡಿ ...ೆ ಪರ್ಯಾಯ ನಾಯಕನೆಂದು ಸದಾನಂದ ...ಿ, ಕ್ರೋಢೀಕರಿಸಿದ್ದು?

... ತಾನೇ ಸಾಕಿದ ಗಿಣಿ ತನ್ನನ್ನೇ ಕಚ್ಚುತ್ತಿದೆಯೆಂದ ...ಯಾವ ಕಾರಣಕ್ಕೆಂದು ಅಶೋಕ್ ವಿರುದ್ಧ ...ಂದ ಗೌಡರನ್ನು ಬೆಳೆಸಿದೆನೋ, ಅದೇ ...ನ್ನು ಚಿಕ್ಕಟ್ಟಬೇಕಲ್ಲವೆ?

ತಾನು ಮುಖ್ಯಮಂತ್ರಿಯಾಗದೆ ಹೋದರೆ ಕತ್ತೆಬಾಲ. ಆದರೆ ಲಿಂಗಾಯತರಿಗೆ ಅಧಿಕಾರ ಕೈತಪ್ಪಕೂಡದು. ಈ ಸದಾನಂದ ಗೌಡನಿಗೆ ಪಕ್ಷ ನಿಷ್ಠೆ ಕೂಡ ಇದ್ದಂತಿಲ್ಲ. ಇದ್ದಿದ್ದರೆ ದೇವೇಗೌಡರಿಗೆ ಮಣೆ ಹಾಕುತ್ತಿರಲಿಲ್ಲ. ನನ್ನ ಮಾತು ಕೇಳದಿದ್ದರೆ ಹಾಳಾಗಲಿ ಬಿಜೆಪಿಯಲ್ಲಿ ಯಾರ ಮಾತಿಗಾದರೂ ಬೆಲೆ ಕೊಡುತ್ತಿದ್ದಾನೆ? ಜಾರಕಿಹೊಳಿ, ಗೂಳಿಹಟ್ಟಿ, ವೆಂಕಟರಮಣಪ್ಪ, ನರೇಂದ್ರ ಸ್ವಾಮಿ ಇವತ್ತಲ್ಲ ನಾಳೆ ಬಿಜೆಪಿಗೆ ಕೈಕೊಡುವವರೆ. ಅಂಥವರ ಕ್ಷೇತ್ರಕ್ಕೆ ಕೋಟಿಗಟ್ಟಲೇ ಕೊಟ್ಟು ಮೂಲ ಬಿಜೆಪಿಯವರಿಗೆ ಏನೇನೂ ಕೊಡ್ತಾ ಇಲ್ಲ ಅಂದರೆ ಏನರ್ಥ?

ಈ ಮಾತು ಅಂತೂ ಶೆಟ್ಟರ್ ತಲೆ ಹೊಕ್ಕಿದೆ. ಬೇರೇನಕ್ಕಲ್ಲದಿದ್ದರೂ ತಾನು ಮುಖ್ಯಮಂತ್ರಿಯಾಗುವ ಅವಕಾಶಕ್ಕಾದರೂ ಯಡ್ಡಿಯ ನೆರಳಿರಲೇಬೇಕು. ಬಯಸದೇ ಮುಖ್ಯಮಂತ್ರಿಯಾದ ಸದಾನಂದ ಗೌಡನ ವಿರುದ್ಧ ತಾನು ಬಯಸಿ ಮುಖ್ಯಮಂತ್ರಿಯಾಗುವುದು ಏನು ಮಹಾ?

ಇದು ಶೆಟ್ಟರ್ ಲೆಕ್ಕಾಚಾರ.

ಯಡ್ಡಿಯ ಪಾಲಿಗೆ ಶೆಟ್ಟರ್ ಈಗ ಹೊಸ ಯಾಗದ ಕುದುರೆ. ಸುತ್ತೂರು ಸ್ವಾಮೀಜಿಯ ಆಶೀರ್ವಾದವಿದೆ. ಬಿಜೆಪಿಯ ಸಮಸ್ತ ಲಿಂಗಾಯತ ನಾಯಕರ ಕುಮ್ಮಕ್ಕಿದೆ. ಬಹುತೇಕ ವೀರಶೈವ ಮಠಾಧಿಪತಿಗಳು, ಅಧಿಕಾರಿಗಳು, ಕುಬೇರರೆಲ್ಲರಿಗೂ ಈಗ ಶೆಟ್ಟರ್ ಮಿನಿ ಯಡಿಯೂರಪ್ಪ!

ಸದಾನಂದಗೌಡರ ಶನಿದೆಸೆಗೆ ಮರುಗುವವರ್ಯಾರು?

ಉಲ್ಟಾ ಹೊಡೆದ ಸಿದ್ದಗಂಗಾ ಸ್ವಾಮಿ

ಮೈಸೂರು ಪ್ರಾಂತ್ಯದ ಲಿಂಗಾಯತ ಸ್ವಾಮಿಗಳ ಪೈಕಿ ಅತಿ ಹೆಚ್ಚು ಪ್ರಭಾವಶಾಲಿ ಸ್ವಾಮಿಯೆಂದರೆ ತುಮಕೂರಿನ ಸಿದ್ದಗಂಗಾ ಮಠದ ಶತಾಯುಷಿ ಶ್ರೀಯುತ ಶಿವಕುಮಾರ ಸ್ವಾಮಿಗಳು. ಅದರಲ್ಲೂ ಈ ಮಠ ರಾಜಧಾನಿ ಬೆಂಗಳೂರಿಗೆ ಅತ್ಯಂತ ಸಮೀಪದಲ್ಲಿರುವುದ ರಿಂದ ಇವರ ಬೇಡಿಕೆಯನ್ನು ಮತ್ತಷ್ಟು ಹೆಚ್ಚಿಸಿದೆ. ಲಾಗಾಯ್ತಿನಿಂದ ಮಠ ಕೈಗೊಂಡಿರುವ ಸೇವಾಕಾರ್ಯಗಳಿಂದ ಹಾಗೂ ಇತರೆ ಸ್ವಾಮಿಗಳಂತೆ ಮಾನಗೇಡಿ ಹಗರಣಗಳಲ್ಲಿ ಸಿಕ್ಕಿಹಾಕಿಕೊಳ್ಳದ ಕಾರಣದಿಂದಾಗಿ ಇವರಿಗೆ ಅಭಿಮಾನಿಗಳ ದೊಡ್ಡ ಬಳಗವೇ ಇದೆ. ಇಂಥಾ ಸ್ವಾಮಿ ಶತವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಮುನ್ನಡೆಯುತ್ತಿರುವುದು ಕೂಡಾ ಅವರ ಮೇಲಿನ ಅಭಿಮಾನವನ್ನು ಇಮ್ಮಡಿಗೊಳಿಸಿದೆ.

ಅರವತ್ತು ತುಂಬಿದ ನಂತರ ಅರಳೋ ಮರಳೋ ಎಂಬುದು ಅಚ್ಚ ಕನ್ನಡದ ಗಾದೆ. ಹಾಗಾದರೆ ನೂರು ತುಂಬಿದ ನಂತರ....? ಅಂಥದೊಂದು ಗಾದೆ ಈಗಷ್ಟೆ ಹುಟ್ಟಬೇಕಿದೆ. ಯಾಕೆ ಗೊತ್ತೆ? ಮಾನ್ಯ ಶತಾಯುಷಿಗಳ ಕೆಲವು ನಡವಳಿಕೆಗಳು ಇತ್ತೀಚಿನ ದಿನಗಳಲ್ಲಿ ನಾನಾ ಅನುಮಾನಗಳನ್ನು ಹುಟ್ಟುಹಾಕುತ್ತಿವೆ.



ತೀರಾ ಇತ್ತೀಚಿನ ಉದಾಹರಣೆಯನ್ನೇ ನೋಡಿ. ಫೆಬ್ರವರಿ 20 ರ ಸೋಮವಾರದಂದು ಸಿದ್ದಗಂಗಾ ಮಠದ ಆವರಣದಲ್ಲಿ ಜಗತ್ತಿನಲ್ಲೇ ಬೃಹತ್ತಾದ 121 ಅಡಿ ಎತ್ತರದ ಕೋಟಿ ಶಿವಲಿಂಗ ನಿರ್ಮಾಣಕ್ಕಾಗಿ ಶಂಕುಸ್ಥಾಪನೆ ಕಾರ್ಯವನ್ನು ನೆರವೇರಿಸಲಾಗಿತ್ತು. ಈ ಸ್ವಾಮಿಕಾರ್ಯದ ಯೋಜನೆಗೆ ಶಿಲಾನ್ಯಾಸ ಮಾಡಿದವರು ರಾಜ್ಯದ ಮುಖ್ಯಮಂತ್ರಿ ಸದಾನಂದಗೌಡರು. ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪ ಹಾಗೂ ಶಾಸಕ ಶಿವಣ್ಣ ಮುಂತಾದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದರ ಅಂದಾಜು ವೆಚ್ಚ ಬರೋಬ್ಬರಿ 12 ಕೋಟಿ ರೂಪಾಯಿಗಳು! ಜೀವಂತವಾಗಿರುವ ಲಕ್ಷಾಂತರ ಶಿವಪ್ಪನವರು, ಲಿಂಗಯ್ಯನವರು ತಲೆಮೇಲೆ ಸೂರಿಲ್ಲದೆ ಇರುವ ಈ ನಾಡಿನಲ್ಲಿ ನಿರ್ಜೀವ ಶಿವಲಿಂಗಕ್ಕೆ 12 ಕೋಟಿಗಳು!! ಈ ಚರ್ಚೆ ನಮಗಿಲ್ಲಿ ಅಪ್ರಸ್ತುತವಾದ್ದರಿಂದ ಅದನ್ನು ಪಕ್ಕಕ್ಕಿಟ್ಟು ಬಿಡೋಣ.

ನಮಗಿಲ್ಲಿ ಬಹಳ ಪ್ರಸ್ತುತವಾಗಿರುವ ಸಂಗತಿಯೆಂದರೆ ಈ ಶಿಲಾನ್ಯಾಸ ರಾಜಕೀಯದ ಹಿಂದಿನ ಹೊಲಸು ರಾಜಕೀಯ. ಕಳೆದ ಕೆಲವು ವರ್ಷಗಳಿಂದ ಸಿದ್ದಗಂಗಾ ಮಠದ ಪಟ್ಟಶಿಷ್ಯನಂತಿದ್ದ ಯಡಿಯೂರಪ್ಪನನ್ನೇ ಈ ಕಾರ್ಯಕ್ರಮಕ್ಕೆ ಆಹ್ವಾನಿಸಿರಲಿಲ್ಲ. ಅಷ್ಟೇ ಏಕೆ, ಕೋಟಿ ಲಿಂಗ ಪ್ರತಿಷ್ಠಾಪನಾ ಸಮಿತಿಯ ರಚನೆಯಾದಾಗಲೂ ಯಡ್ಡಿಗೆ ಮಾಹಿತಿ ಇರಲಿಲ್ಲ. ಸ್ವಾಗತ ಸಮಿತಿ ರಚನೆಯಲ್ಲಾಗಲಿ, ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯಲ್ಲಾಗಲೀ ಎಲ್ಲಿಯೂ ಯಡ್ಡಿಯ ಸುಳಿವೇ ಇರಲಿಲ್ಲ. ಈ ಕಾರ್ಯಕ್ರಮದ ರೂವಾರಿಗಳು ಯಡ್ಡಿಯನ್ನು ಮೂಲೆಗುಂಪು ಮಾಡುವ ಉದ್ದೇಶದಿಂದಲೇ ಪೂರ್ವಯೋಜಿತವಾಗಿ ನಡೆಸಿದ ರಾಜಕೀಯ ಸಂಚು ಎಂಬುದರಲ್ಲಿ ಯಾರಿಗೂ ಎಳ್ಳಷ್ಟು ಅನುಮಾನವೂ ಬೇಡ. ಬಿಜೆಪಿಯ ಕೇಂದ್ರ ಕಚೇರಿಯಲ್ಲಿ ಅಥವಾ ಕೇಶವ ಕೃಪಾದಲ್ಲಿ ಈ ರಾಜಕೀಯ ಸಂಚಿನ ಮೂಲ ಇದ್ದಿರಬಹುದು. ಅವರು ಇರುವುದೇ ಅದಕ್ಕಾಗಿ. ಅವರು ಹಾಳಾಗಲಿ. ಈ ಸ್ವಾಮೀಜಿ ಕತೆಯೇನು?

ಈ ಬೆಳವಣಿಗೆಗಳನ್ನು ಕಂಡು ಕೆರಳಿದ ಯಡ್ಡಿ ಈ ಸಂಚಿನ ಬಗ್ಗೆ ಎಚ್ಚರಿಕೆ ನೀಡಿ ಸ್ವಾಮೀಜಿಯವರಿಗೆ ಕೂಡಲೇ ಪತ್ರವೊಂದನ್ನು ಕಳಿಸಿದರು. ಒಟ್ಟಾರೆ ಈ ಪತ್ರದ ಎಚ್ಚರಿಕೆಗೆ ಮಣಿದ ಸ್ವಾಮಿಯವರು ತಮ್ಮ ಮಠದ ಆವರಣದಲ್ಲಿ ಉದ್ದೇಶಿತ ಕೋಟಲಿಂಗ ನಿರ್ಮಾಣದ ಕಾರ್ಯವನ್ನೇ ರದ್ದುಗೊಳಿಸಿರುವುದಾಗಿ ಘೋಷಿಸಿದ್ದಾರೆ. ಇಷ್ಟಕ್ಕೂ ಶಿಲಾನ್ಯಾಸಕ್ಕೂ, ಯೋಜನೆ ರದ್ದಾಗಿದೆಯೆಂದು ಘೋಷಿಸುವುದಕ್ಕೂ ನಡುವಿನ ಅಂತರ ಕೇವಲ ಎರಡೇ ದಿನಗಳು! ಅದಕ್ಕೆ ಅವರು ನೀಡಿದ ಕಾರಣ ಕೂಡಾ ರಾಜಕಾರಣಿಗಳಿಗೆ ತಕ್ಕನಾದದ್ದು! ಏನೆಂದರೆ ಶಿವಲಿಂಗ ನಿರ್ಮಾಣ ವಿಚಾರದಲ್ಲಿ ರಾಜಕೀಯ ಬೆರೆತಿದೆ ಎಂಬುದೇ ಆ ಕಾರಣವಂತೆ. ಈ ವಿಷಯ ಸ್ವಾಮೀಜಿಯವರಿಗೆ ಮೊದಲು ತಿಳಿದಿರಲಿಲ್ಲವಂತೆ!

ಇಲ್ಲಿ ಕೆಲವು ಮೂಲಭೂತ ಪ್ರಶ್ನೆಗಳು ಉದ್ಭವಿಸುತ್ತವೆ.

ಇಂಥಾ ಬೃಹತ್ತಾದ ಯೋಜನೆಯೊಂದರ ರೂಪುರೇಷೆಗಳನ್ನು ಶ್ರೀಯುತ ಸ್ವಾಮೀಜಿಗಳ ಅನುಮತಿಯಿಲ್ಲದೇ ಸಿದ್ಧಪಡಿಸಲು ಸಾಧ್ಯವೇ ಇಲ್ಲ. ಹಾಗೊಂದು ವೇಳೆ ಅವರ ಗಮನಕ್ಕೆ ಬಾರದೇ ಮಠದಲ್ಲಿ ಇಂಥಾ ಬೃಹತ್ ಯೋಜನೆ ನಡೆಯುತ್ತದೆ ಎಂದಾದರೆ ಅದು ಮತ್ತೊಂದು ಗಂಭೀರ ಸಮಸ್ಯೆಯೇ ಸರಿ. ಯಾವುದೇ ಭಿನ್ನ ಸ್ವರಗಳಿಲ್ಲದೆ ತಮ್ಮ ಖುದ್ದು ಹಾಜರಿಯಲ್ಲಿ ನಡೆದ ಕಾರ್ಯಕ್ರಮದ ಹಿನ್ನೆಲೆಯು ಸ್ಪಷ್ಟ ಅರಿವು ಈ ಸ್ವಾಮಿಗಿತ್ತು ಎಂಬುದು ಕಣ್ಣೆದುರಿಗಿರುವ ಸತ್ಯ. ಆದರೆ ತಮಗೇನೂ ಗೊತ್ತಿರಲಿಲ್ಲವೆಂದು ಅವರು ಹೇಳುತ್ತಿರುವುದಕ್ಕೆ ಕಾರಣವೇನು?

ಈ ವಿಷಯವನ್ನು ಅರ್ಥಮಾಡಿಕೊಳ್ಳಲು ಕೆಲವು ವಿಷಯಗಳನ್ನು ನೆನಪು ಮಾಡಿಕೊಳ್ಳುವುದು ಇಲ್ಲಿ ಮುಖ್ಯ. ಇದೇ ಸ್ವಾಮಿಗಳು ಯಡಿಯೂರಪ್ಪ ಅಧಿಕಾರದಲ್ಲಿದ್ದಷ್ಟೂ ದಿನ ಅವರ ತುತ್ತೂರಿಯಾಗಿದ್ದರು. ಯಡ್ಡಿ ಮೇಲೆ ನಾನಾ ಆರೋಪಗಳು ಬಂದಾಗಲೂ ಬಹಿರಂಗವಾಗಿ ಬೆಂಬಲಕ್ಕೆ ನಿಂತರು. "ನೀವು ಉತ್ತಮ ಕೆಲಸ ಮಾಡುತ್ತಿದ್ದೀರಿ, ನಿಮ್ಮ ಬೆನ್ನಹಿಂದೆ ನಾವಿದ್ದೇವೆ" ಎಂದು ಯಡ್ಡಿಯ ಬೆನ್ನು ತಟ್ಟಿದ್ದರು. ಅದಕ್ಕೆ ಪ್ರತಿಯಾಗಿ ಯಡ್ಡಿ ಮಠಮಾನ್ಯಗಳಿಗೆ ಕೊಟ್ಟ ಬೊಕ್ಕಸದ ಹಣದಲ್ಲಿ ಅಗ್ರಪಾಲು ಇದೇ ಸಿದ್ದಗಂಗಾ ಮಠಕ್ಕೆ ಸಂದಾಯವಾಗಿತ್ತು. ಅಷ್ಟು ಮಾತ್ರವಲ್ಲದೆ ವಿವಿಧ ಕಾಮಗಾರಿಗಳ ಹೆಸರಿನಲ್ಲಿ ಮಠದ ಸುತ್ತ ನೂರಾರು ಕೋಟಿಗಳನ್ನು ಸುರಿಯಲಾಗಿತ್ತು. ಶತಾಯುಷಿ ಸ್ವಾಮಿಗೆ ಬೇಕಾಗಿದ್ದುದು ಅಷ್ಟೇ. ಹೇಗೋ ಏನೋ ಮಠಕ್ಕೆ ಹಣ ಬಂದರೆ ಸಾಕು. ಇದು ಲಾಗಾಯ್ತಿನಿಂದಲೂ ಅವರು ಪಾಲಿಸುತ್ತಾ ಬಂದಿರುವ ಧರ್ಮ.

ಅದರಲ್ಲೂ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಸಿಕ್ಕಿಬಿದ್ದ ಯಡ್ಡಿ ಜೈಲು ಸೇರಿದಾಗ ಸ್ವಸ್ಥ ಮನಸ್ಥಿತಿಯನ್ನು ಹೊಂದಿರುವ ನಾಡಿನ ಪ್ರತಿಯೊಬ್ಬ ಪ್ರಜೆಯೂ ಜಾತಿ, ಧರ್ಮ, ಪಕ್ಷಾತೀತವಾಗಿ ಅದನ್ನು ಸ್ವಾಗತಿಸಿದರು. ಇದಕ್ಕೆ ಕಾರಣವಾದ ಲೋಕಾಯುಕ್ತರನ್ನು ಅಭಿನಂದಿಸಿದರು. ಆದರೆ ಆ ಸಂದರ್ಭದಲ್ಲಿ ಈ ಸ್ವಾಮಿಯ ನಡವಳಿಕೆ ಮಾತ್ರ ಅತ್ಯಂತ ಖಂಡನಾರ್ಹವಾದುದಾಗಿತ್ತು. ಅವರು ಯಡ್ಡಿಗೆ ಸಾಂತ್ವನ ಹೇಳಲು ಸೀದಾ ಜೈಲಿಗೆ ಭೇಟಿಕೊಟ್ಟರು. ಈ ನಡವಳಿಕೆ ನಾಡಿನಾದ್ಯಂತ ವ್ಯಾಪಕ ಖಂಡನೆಗೆ ಗುರಿಯಾಯಿತಲ್ಲದೆ ಸ್ವತಃ ಮಠದ ಅನುಯಾಯಿಗಳಲ್ಲೂ ತೀವ್ರ ಅಸಮಾಧಾನಕ್ಕೆ ಕಾರಣವಾಗಿತ್ತು.

ಆದರೆ ಈಗ ಯಡ್ಡಿ ಅಧಿಕಾರ ಕಳೆದುಕೊಂಡು ತನ್ನ ಪಕ್ಷದವರಿಂದಲೇ ತೀವ್ರ ಮುಜುಗರವನ್ನು ಅನುಭವಿಸುತ್ತಾ, ಬೈರಾಗಿಯಂತೆ ಊರೂರು ಅಲೆಯುತ್ತಿದ್ದಾನೆ. ದಿನೇದಿನೇ ಯಡ್ಡಿ ವಿರೋಧಿಗಳು ಪ್ರಬಲರಾಗುತ್ತಿದ್ದರೆ ಯಡ್ಡಿಯ ಶಕ್ತಿ ಕ್ರಮೇಣ ಕುಸಿಯುತ್ತಿದೆ. ಯಡ್ಡಿಗಳ ಪರಮಾಪ್ತ ಬೆಂಬಲಿಗರೆನಿಸಿಕೊಂಡಿದ್ದವರೂ ಕೂಡ ಅಧಿಕಾರ ಕೇಂದ್ರಕ್ಕೆ ತಮ್ಮ ನಿಷ್ಠೆ ಬದಲಾಯಿಸುತ್ತಿದ್ದಾರೆ. ಮಾತು ಬದಲಾಯಿಸುವುದು, ಕೊಟ್ಟ ಮಾತಿಗೆ ತಪ್ಪಿ ನಡೆಯುವುದು, ನಿಷ್ಠೆ ಬದಲಾಯಿಸುವುದು ರಾಜಕಾರಣಿಗಳ ಹುಟ್ಟು ಗುಣ. ಇಂಥಾ ಅಧಿಕಾರಹೀನ ಯಡ್ಡಿಯನ್ನು ತೊರೆಯುತ್ತಿರುವವರ ಸಾಲಿನಲ್ಲಿ ಶತಾಯುಷಿ ಸ್ವಾಮಿಯೂ ಸೇರಿಕೊಂಡಿದ್ದು ಮಾತ್ರ ಯಡಿಯೂರಪ್ಪನ ದುರ್ದೈವ. ಅಷ್ಟು ಮಾತ್ರವಲ್ಲ, ಯಡ್ಡಿಯಿಂದ ಎಚ್ಚರಿಕೆಯ ಮಾತುಗಳು ಕೇಳಿಬಂದದ್ದೇ ತಡ ಇದೇ ಸ್ವಾಮಿ ಮತ್ತೊಮ್ಮೆ ಉಲ್ಟಾ ಹೊಡೆದದ್ದು ಮಾತ್ರ ಸಿದ್ದಗಂಗಾ ಮಠದ ದುರ್ದೈವವೇ ಸರಿ.

ಇದು ತೀರಾ ನಿಷ್ಠುರವಾದ ಮಾತು ಎಂದು ಭಾವಿಸಬೇಡಿ. ಈ ಸ್ವಾಮೀಜಿ ತಮ್ಮ ಆಯುಷ್ಯಿನ ಉದ್ದಕ್ಕೂ ಆಸ್ಥಾನಕ್ಕೆ ಹತ್ತಿರವಾಗಿರಲು ಬಯಸಿದವರೇ ಹೊರತು ಅಪ್ಪಿತಪ್ಪಿಯಾದರೂ, ಅದೆಂಥದೇ ಸನ್ನಿವೇಶದಲ್ಲೂ ಅಧಿಕಾರಸ್ಥರನ್ನು ವಿಮರ್ಶಿಸಿದ ಉದಾಹರಣೆ ಇಲ್ಲ. ರಾಜಪುರೋಹಿತರಾದವರು ರಾಜರಿಗೆ ನಿಷ್ಠರಾಗಿರುತ್ತಾರೆಯೇ ಹೊರತು ಪ್ರಜೆಗಳಿಗಲ್ಲ. ಹಾಗೆ ರಾಜರು ಬದಲಾದಂತೆ ನಿಷ್ಠೆಯೂ ಬದಲಾಗುವುದು ನಮ್ಮ ಇತಿಹಾಸದಲ್ಲಿ ಹೊಸದೇನಲ್ಲ.

ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕೋ ಅಥವಾ ಅಧಿಕಾರ ಪೀಠ ಸನಿಹವಾಗಬೇಕೋ ಎಂಬುದನ್ನು ಶತಾಯುಷಿಗಳು ಅರಿಯುವಂತಾದರೆ ಇವರನ್ನು ನೆಚ್ಚಿಕೊಂಡಿರುವ ನೈಜ ಭಕ್ತಾದಿಗಳು ಧನ್ಯ!

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಎಚ್.ಕೆ.ಇ. ಸಂಸ್ಥೆಯಲ್ಲಿ ಮಸಲತ್ತುಗಾರರ

ಹೈದ್ರಾಬಾದ್ ಕರ್ನಾಟಕದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿರುವ 'ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ' ತನ್ನೆಲ್ಲ ಹಳವಂಡಗಳಿಂದಾಗಿ ಆಗಾಗ ಸುದ್ದಿಯಲ್ಲಿರುತ್ತದೆ. ಮೆಡಿಕಲ್, ಇಂಜಿನಿಯರಿಂಗ್, ಪಾಲಿಟೆಕ್ನಿಕ್‌ಗಳ ಜೊತೆಗೆ 40 ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಈ ಸಂಸ್ಥೆ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿಯೆ ಒಂದು ಮಹತ್ವದ ಸಂಸ್ಥೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಸಂಸ್ಥೆ ಆರಂಭಿಸುವ ಸಂದರ್ಭದಲ್ಲಿ ಇಟ್ಟುಕೊಂಡಿದ್ದ ಜನಪರ ಕಾಳಜಿಗಳನ್ನು ಈಗ ಇಲ್ಲಿ ದೀಪ ಹಚ್ಚಿ ಹುಡುಕಬೇಕು. ಘಟಿಂಗರು, ನಾಮರ್ಧರು ಹಾಗೂ



ಕುತಂತ್ರಿಗಳು ಈ ಸಂಸ್ಥೆಯನ್ನು ಹೊಕ್ಕು ಸಂಸ್ಥೆಯನ್ನು ಗಬ್ಬೆಬ್ಬಿಸಿಬಿಟ್ಟಿದ್ದಾರೆ. ಪ್ರಜಾಪ್ರಭುತ್ವದ ಮೂಲ ತಳಹದಿಯ ಮೇಲೆ ರಚಿತವಾಗಿದ್ದ ಎಚ್.ಕೆ.ಇ.ಯನ್ನು ಸರಕಾರ ಮಧ್ಯಪ್ರವೇಶಿಸುವ ಮೂಲಕ ಸುಧಾರಿಸದಿದ್ದರೆ ನಮ್ಮ ಕಣ್ಣೆದುರಿಗೆ ಮಹತ್ವದ ಶಿಕ್ಷಣ ಸಂಸ್ಥೆಯೊಂದು ಕುಸಿದು ಬೀಳುತ್ತದೆ. ಮಾತ್ರವಲ್ಲ ಕೆಲವೇ ಜನಗಳ ಖಾಸಗಿ ಆಸ್ತಿಯಾಗಿ ಹೋಗುತ್ತದೆ.

ನಮ್ಮ ರಾಜ್ಯ ಕಂಡ ಅಪರೂಪದ ಮುಖ್ಯ ಮಂತ್ರಿಗಳಲ್ಲಿ ಒಬ್ಬರಾದ ಎಸ್.ನಿಜಲಿಂಗಪ್ಪನವರು 1958–59 ರ ಸಂದರ್ಭದಲ್ಲಿ ಈ ಭಾಗದ ಬಗೆಗೆ ವಿಶೇಷ ಕಾಳಜಿ ವಹಿಸದೇ ಹೋಗಿದ್ದರೆ ಇಂದು ಈ ಎಚ್.ಕೆ.ಇ. ಸೊಸೈಟಿ ಇರುತ್ತಿರಲಿಲ್ಲ. ಹೈದ್ರಾಬಾದ್ ನಿಜಾಮರ ಆಡಳಿತದಲ್ಲಿ ತುಳಿತಕ್ಕೆ ಒಳಗಾಗಿದ್ದ ಈ ಭಾಗ ಮೈಸೂರು ಪ್ರಾಂತದ ಜಿಲ್ಲೆಗಳಂತೆ ತಲೆ ಎತ್ತಿ ನಿಲ್ಲಬೇಕಾದರೆ ಈ ಭಾಗದ ಜನರಿಗೆ ಶಿಕ್ಷಣವನ್ನು ಕೊಡಲೇಬೇಕೆಂದು ನಿಜಲಿಂಗಪ್ಪ ನಿರ್ಧರಿಸಿದ್ದರು. ಆಗಿನ ಡಿವಿಜನಲ್ ಕಮಿಶನರ್ ಜಿ.ಎನ್. ನಾಗರಾಜರಾವ್ ಅವರ ಮೂಲಕ ಶಿಕ್ಷಣ ಸಂಸ್ಥೆಯೊಂದನ್ನು ಆರಂಭಿಸಲು ಇಲ್ಲಿನ ರೈತರಿಂದ, ಮುನ್ಸಿಪಾಲಿಟಿಗಳಿಂದ ಹಣ ಸಂಗ್ರಹಿಸಲು ಕ್ಯಾಬಿನೆಟ್ ನಿರ್ಧಾರ ಕೂಡ ಮಾಡಿಸಿದರು.


ಅಂದಂತೆ, ಇಲ್ಲಿನ ರೈತರು ಅಂಗಡಿಗಳಿಗೆ ತಮ್ಮ ಸರಕುಗಳನ್ನು ಮಾರಾಟ ಮಾಡಲು ಬಂದಾಗ ಅವರಿಂದ ಡಬಲ್ ತಶೀಲ (ಕರ) ವಸೂಲಿ ಮಾಡಲಾಯಿತು. ಜೊತೆಗೆ ಬಿಜಾಪುರ ಮತ್ತು ಕಲಬುರ್ಗಿಯ ಮುನ್ಸಿಪಾಲಿಟಿಗಳ ಮೂಲಕವೂ ಜನರಿಂದ ಹೆಚ್ಚಿನ ಕರ ಪಡೆಯಲಾಯಿತು. ಆಗ ಸಂಗ್ರಹವಾದ ಹಣದ ಮೊತ್ತ ತೊಂಬತ್ತೊಂಬತ್ತು ಲಕ್ಷ ಐವತ್ತೆಂಟು ಸಾವಿರ ಏಳುನೂರಾ ಎಂಬತ್ನಾಲ್ಕು ರೂಪಾಯಿಗಳು. ಈ ಇಡುಗಂಟು ಇಂದು ಚಿಕ್ಕದಾಗಿ ಕಾಣಬಹುದು. ಆದರೆ ಐವತ್ತೆರಡು ವರ್ಷಗಳ ಹಿಂದೆ ಸಂಗ್ರಹವಾದ ಈ ಮೊತ್ತ ಈಗ ತಾಳೆ ಹಾಕಿದರೆ ಕೋಟ್ಯಂತರ ರೂಪಾಯಿಗಳೆಂದು ಯಾರಾದರೂ ಲೆಕ್ಕಹಾಕಬಹುದು.

ಒಟ್ಟಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜನಗಳ ಬೆವರಿನಿಂದ ನಿರ್ಮಿತವಾದ ಸದರಿ ಸಂಸ್ಥೆಯಲ್ಲಿ ಆಗ ಜಂಟಿ ಕಾರ್ಯದರ್ಶಿಗಳಾಗಿ ರಮೇಶಕುಮಾರ ಲಾಹೋಟಿಯವರು ಮತ್ತು ಮಹಾದೇವಪ್ಪ ರಾಂಪುರೆ ಅವರು ಇದ್ದರು. ಜಿಲ್ಲಾಧಿಕಾರಿಯೆ ಈ ಸಂಸ್ಥೆಯ ಅಧ್ಯಕ್ಷರಾಗಿರುತ್ತಿದ್ದರು. ರಮೇಶಕುಮಾರ ಲಾಹೋಟಿಯವರ ಉದಾರತನ ಹಾಗೂ ರಾಂಪುರೆಯವರ ಕರ್ತೃತ್ವಶಕ್ತಿಯ ಮೂಲಕ ಎಚ್.ಕೆ.ಇ. ಸಂಸ್ಥೆ ಬೆಳೆದು ನಿಂತ ಬಗೆ ಎಂಥವರನ್ನೂ ದಂಗುಬಡಿಸುತ್ತದೆ.

ಕಾಲೇಜಿನ ಮೆಟ್ಟಿಲನ್ನು ಹತ್ತದಿದ್ದ ಮಹಾದೇವಪ್ಪ ರಾಂಪುರೆಯ ಕರ್ಣಧಾರತ್ವದಲ್ಲಿ ಸೊಸೈಟಿ ನಡೆದುಬಂದ ದಾರಿ ಹೂವಿನ ಹಾಸಿಗೆಯಾಗಿರಲಿಲ್ಲ. ಆದರೆ ತಾವು ಮನಸ್ಸಿನಲ್ಲಿ ಅಂದುಕೊಂಡದ್ದನ್ನು ಮಾಡುವ ಛಲ ಹಾಗೂ ಸದಾ ಹೊಸ ಕನಸುಗಳನ್ನು ಕಾಣಲು ತವಕಿಸುತ್ತಿದ್ದ ಮಹಾದೇವಪ್ಪ ರಾಂಪುರೆ ಅಂದಿನ ರಾಜಕಾರಣಿಗಳಿಗೆ ಬೇತಾಳದಂತೆ ಗಂಟುಬಿದ್ದು ಶೈಕ್ಷಣಿಕ ಸಂಸ್ಥೆಗಳನ್ನು ಈ ಭಾಗದಲ್ಲಿ ತೆರೆದರು. ಈ ಮೂಲಕ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಶಿಕ್ಷಣದ ಹೊಸ ಮನ್ವಂತರವನ್ನೆ ಸೃಷ್ಟಿ ಮಾಡಿದರು.




ಶರಣಬಸಪ್ಪ



ಡಾಕ್ಟರ್

ಇದೆಲ್ಲ ಸರಿ. ಆದರೆ ಈಗ ಸಂಪೂರ್ಣವಾಗಿ ಹೆಮ್ಮರವಾಗಿ ಬೆಳೆದು ನಿಂತಿರುವ ಎಚ್.ಕೆ.ಇ. ಸಂಸ್ಥೆಗೆ ಹಲವಾರು ರೋಗಗಳು ತಗುಲಿವೆ. ನಾಮರ್ಧ ಜನಗಳು ಸದರಿ ಸೊಸೈಟಿಯ ಒಳಗಡೆ ಹೊಕ್ಕಿರುವುದರಿಂದ ತಮ್ಮ ಸ್ವಾರ್ಥಸಾಧನೆಗಾಗಿ ಪ್ರಜಾಪ್ರಭುತ್ವದ ಮೂಲ ತತ್ವಗಳನ್ನು ಗಾಳಿಗೆ ತೂರಿದ್ದಾರೆ. ಮಹಾದೇವಪ್ಪ ರಾಂಪುರೆಯವರು ಜೀವಂತ ಇರುವವರೆಗೂ ಮುಕ್ತವಾಗಿದ್ದ ಈ ಸಂಸ್ಥೆಯ ಸದಸ್ಯತ್ವ ಇಂದು ಎಲ್ಲರಿಗೂ ಮುಕ್ತವಾಗಿಲ್ಲ. ಹೀಗಾಗಿ ಕೆಲವೇ ಜನ ತಮ್ಮ ಸ್ವಹಿತಾಸಕ್ತಿಗಾಗಿ, ಹಣ ಕಮಾಯಿಸುವುದಕ್ಕಾಗಿ ಈ ಸಂಸ್ಥೆಯನ್ನು ಊರುಗೋಲನ್ನಾಗಿ ಮಾಡಿಕೊಂಡಿದ್ದಾರೆ. ಇದರಿಂದ ಸಹಜವಾಗಿ ಇಲ್ಲಿ ಶಿಕ್ಷಣದ ಮಹತ್ವ ಹಾಗೂ ಈ ಭಾಗದ ಜನಗಳ ಬಗೆಗಿನ ಕಾಳಜಿಗಳು ಮಾಯವಾಗಿ ಅಲ್ಲಿ ಹಲಾಲುಖೋರತನ ಮಾತ್ರ ಬೆಳೆದುನಿಂತಿದೆ.





ನಮೋಶಿ

ಬಂಗಾರದ ತತ್ತಿ ಇಡುವಂಥ ಇಂಜಿನಿಯರಿಂಗ್, ಮೆಡಿಕಲ್ ಹಾಗೂ ನರ್ಸಿಂಗ್ ಕಾಲೇಜುಗಳು ಇರುವುದರಿಂದ ಈ ಸಂಸ್ಥೆಯ ಸುತ್ತಮುತ್ತ ಈಗ ಹಲವಾರು ಹಾವು, ಚೇಳು, ಸರಿಸೃಪಗಳು ಬಿಲ ಮಾಡಿಕೊಂಡು ಕುಳಿತುಕೊಂಡಿವೆ. ವೀರೇಂದ್ರ ಪಾಟೀಲರ ಅಳಿಯ ಉರ್ಫ್ ಮಾಜಿ ಲೋಕಸಭಾ ಸದಸ್ಯ ಡಾ.ಬಿ.ಜಿ.ಜವಳಿ ಎಂಬ ಮಹಾಶಯ ಈ ಸಂಸ್ಥೆಗೆ ಎರಡು ಬಾರಿ ಅಧ್ಯಕ್ಷನಾಗಿ ಮಾಡಿದ ಕಮಾಯಿ ಎಂಥವರನ್ನೂ ದಂಗುಬಡಿಸುತ್ತದೆ. ಸೊಸೈಟಿಯ ಅಂಗಳದಲ್ಲಿದ್ದ ಏರೋಪ್ಲೇನ್ (ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಆಕಸ್ಮಿಕವಾಗಿ ಬಂದಿಳಿದಿದ್ದು) ಅನ್ನು ರಿಪೇರಿಗೆ ಕಳಿಸುತ್ತೇವೆಂದು ಹೇಳಿ ಒಂದು ಕೋಟಿ ಹದಿನೇಳು ಲಕ್ಷಕ್ಕೆ ಮಾರಿಕೊಂಡು ತಿಂದ ಕತೆಗಳೆಲ್ಲ ಇಲ್ಲಿ ಜನಜನಿತ. ಇನ್ನು ನಿತ್ಯವೂ ಮುತ್ತು ರತ್ನಗಳನ್ನೆ ಉದುರಿಸುವ ಇಂಜಿನಿಯರಿಂಗ್, ಮೆಡಿಕಲ್ ಸೀಟುಗಳು ಇವರ ಅಡಿದಾವರೆಗಳಲ್ಲಿ ಸಿಕ್ಕರೆ ಅದನ್ನು ಕುಲಗೆಡಿಸದೆ ಬಿಟ್ಟಾರೆಯೆ?

ಒಟ್ಟಿನಲ್ಲಿ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಗೆ ಮಹಾದೇವಪ್ಪ ರಾಂಪುರೆಯವರ[illegible] ಹೊರತುಪಡಿಸಿ ಇದುವರೆಗೆ ಅಧ್ಯಕ್ಷರಾಗಿ ಹೋ[illegible] ಶರಣಬಸವಪ್ಪ ಅಪ್ಪ, ಡಾ.ಎ.ಬಿ.ಮಲಕರೆಡ್ಡಿ ಮಡಿವಾಳಪ್ಪ ಮಂಠಾಳೆ, ಡಾ.ಬಿ.ಜಿ.[illegible] ಬಸವರಾಜ ಭೀಮಳ್ಳಿ, ಇದೀಗ ಶಶೀ[illegible] ನಮೋಶಿ ಎಂಬ ಮಹಾಶಯರುಗಳ[illegible] ತಮತಮಗೆ ದಕ್ಕಿದ್ದನ್ನು ಗೆಬರಿಕೊಂ[illegible] ಈ ಶೈಕ್ಷಣಿಕ ಸಂಸ್ಥೆಯನ್ನು ತಮ್ಮ ಅಪ್ಪ-ಅಮ್ಮನಿಂದ ಬಂದ ಬಳುವಳಿಯೆಂಬಂತೆ ವರ್ತಿಸುತ್ತಿರುವ[illegible] ಕೆಲವು ಸ್ವಹಿತಾಸಕ್ತರು 30–3–1981 ತಮ್ಮ ಸಂಘದ ಬೈಲಾವನ್ನು ತಿದ್ದುಪ[illegible] ಒಳಪಡಿಸಿಕೊಂಡಿದ್ದಾರೆ. ಈ ಉಪನಿಯಮಗಳ ಪ್ರಕಾರ ಈ ಹಿಂದೆ ಸಂಘದ ಸದಸ್ಯರಾಗಿದ್ದವರ ಮನೆಯ[illegible] ಮಾತ್ರ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಬೇಕು[illegible] ಅರ್ಜಿಯು ಸಂಘದ ಕೌನ್ಸಿಲ್ ಸದಸ್ಯ[illegible] ಮೆಜಾರಿಟಿಯೊಂದಿಗೆ ಅನುಮೋದನೆ[illegible] ಪಡೆಯತಕ್ಕದ್ದು ಎಂದು ಸೇರಿಸಿದ್ದಾರೆ.

ಇದರಿಂದ ಸಹಜವಾಗಿ ಪ್ರಜಾಪ್ರಭುತ್ವದ ತತ್ವಗಳು ಸಂಸ್ಥೆಯಲ್ಲಿ ಮಾಯವಾಗಿ ಸರ್ವಾಧಿಕಾರ ಪ್ರವೃತಿ [illegible] ಎತ್ತಿನಿಂತಿದೆ. ಹಿಂದೊಮ್ಮೆ ಈ ಭಾಗದ ಜನರ ಕಾ[illegible] ತೆರೆದುಕೊಂಡಿದ್ದ ಸಂಸ್ಥೆ ಇಂದು ಗಂಟುಗಳ್ಳರ ಕೂಟವಾಗಿದೆ. ಈ ಆಕ್ಟೋಪಸ್‌ಗಳ ಹಿಡಿತದಿಂದ ಹೇಗಾದರೂ ಮಾಡಿ ಸಂಸ್ಥೆಯನ್ನು ಬಿಡುಗಡೆಗೊಳಿಸಬೇಕು; ಸಂಸ್ಥೆಯು ಹಿಂದಿನಂತೆ [illegible] ಜನರಿಗೂ ಮುಕ್ತವಾಗುವಂತೆ ಮಾಡಬೇಕೆಂದು ಗುಲ್ಬರ್ಗಾದ ಪ್ರಜ್ಞಾವಂತ ಜನತೆ ಪಣ ತೊಟ್ಟು ಕೋರ್ಟ ಕಟಕಟೆ ಏರಿದೆ.

ಆದರೆ ಚಾಪೆಯ ಕೆಳಗೆ ತೂರಿದರೆ ರಂಗೋ[illegible] ಕೆಳಗೆ ನುಗ್ಗುವ ಛಾತಿ ಉಳ್ಳ ಈ ಸಂಸ್ಥೆಯ [illegible] ಆಸಾಮಿಗಳು ಕೋರ್ಟನಲ್ಲಿ ಈ ಭಾಗದ ಆಸಕ್ತ ಜನ[illegible] ಸದಸ್ಯತ್ವವನ್ನು ಪಡೆಯುತ್ತೇವೆ. ಯಾವುದನ್ನೂ ಗೌಪ[illegible] ಮಾಡುವುದಿಲ್ಲ. ಪತ್ರಿಕಾ ಪ್ರಕಟಣೆಯ ಮು[illegible] ಸದಸ್ಯತ್ವವನ್ನು ಕೋರುತ್ತೇವೆ ಎಂದು ಮುಚ[illegible] ಬರೆದುಕೊಟ್ಟಿದ್ದಾರೆ. ಇಷ್ಟೇ ಅಲ್ಲದೆ ದಿ. 12–10–2[illegible] ರಂದು ಪತ್ರಿಕೆಗಳಲ್ಲಿ ನೋಟಿಫಿಕೇಶನ್ ಹೊರಡಿಸಿ[illegible] ಇವರ ಹುನ್ನಾರಗಳನ್ನು ಅರಿಯದ ಜನ ತಾ ಮುಂ[illegible] ಮುಂದೆ ಎಂದು ಈ ಸಂಸ್ಥೆಯ ಸದಸ್ಯರಾಗಲು ಎಪ್ಪ[illegible] ಸಾವಿರ ಅರ್ಜಿಗಳನ್ನು ಗುಜರಾಯಿಸಿದ್ದಾರೆ. ಹೀಗೆ [illegible] ಹಾಕಿದವರಿಗೆ ಸದಸ್ಯತ್ವ ಸ್ವೀಕರಿಸಲಾಗಿದೆ/ ಸ್ವೀಕ[illegible] ಎಂದು ಕೇವಲ 15 ದಿನಗಳೊಳಗಾಗಿ ತಿಳಿಸಬೇಕು. [illegible]



ರೇಷ್ಮೆ ರೈತರಿಗೆ ಚಿಗರಿ ಕಾಟ

ರೇಷ್ಮೆ ಬೆಳೆಗೆ ರಾಜ್ಯ ಸರ್ಕಾರ ಬೆಲೆ ನಿಗದಿಪಡಿಸದೆ ಸಬೂಬು ಹೇಳುತ್ತಾ ಬಂದಿದೆ. ಇಂಥಾ ದುಸ್ಥಿತಿಯಲ್ಲಿ ರೇಷ್ಮೆ ವಹಿವಾಟು ಅವನತಿ ಅಂಚಿಗೆ ತಲುಪಿದೆ. ಇಷ್ಟು ಸಾಲದೆಂಬಂತೆ ರೈತ ಬೆಳೆದ ರೇಷ್ಮೆಗೂಡಿಗೆ ಉತ್ತಮ ಬೆಲೆ ದೊರಕಿಸಿಕೊಡಬೇಕಾದ ರೇಷ್ಮೆ ಮಾರುಕಟ್ಟೆ ಅಧಿಕಾರಿಗಳು ಗೂಡು ಮಾರಾಟ ಮಾಡಲು ಬರುವ ರೈತರನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದಾರೆ..!

ಈ ಸಾಲಿಗೆ ಸೇರುವುದರಲ್ಲಿ ಬಹುಶಃ ಕೊಳ್ಳೇಗಾಲದ ಮುದಿಗುಂಡ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆ ಅಧಿಕಾರಿಗಳು ಮೊದಲಿಗರು. ಇಲ್ಲಿ ಈ ಹಿಂದೆಯೇ ತಿಂದುಂಡು ದುಂಡಾಗಿ ವರ್ಗಾವಣೆಯಾಗಿದ್ದ ಮಾರುಕಟ್ಟೆಯ ಡಿ.ಡಿ. ವೈ.ಎಸ್.ಚಿಗರಿ ಮತ್ತೆ ಹೊಂಚುಹಾಕಿ ಇದೇ ಸ್ಥಳಕ್ಕೆ ವಕ್ಕರಿಸಿದ್ದಾನೆ. ಚಾಮರಾಜನಗರ ಜಿಲ್ಲೆಯ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಯಿಂದ ಓ.ಓ.ಡಿ ಮೇಲೆ ಬಂದಿರುವ ಈ ಆಸಾಮಿ ಕಾಲಿಟ್ಟು ಕೆಲ ತಿಂಗಳುಗಳು ಕಳೆಯುತ್ತಿದ್ದಂತೆ ಮಾರುಕಟ್ಟೆ ಧರ್ಮಛತ್ರವಾಗಿ ಹೋಗಿದೆ.

ಡಿ.ಡಿ. ಚಿಗರಿಯ ದುರಾಡಳಿತದಿಂದಾಗಿ ಇಲ್ಲಿನ ಸುಲಿಗೆಕೋರ ಅಧಿಕಾರಿಗಳು ಮಾರುಕಟ್ಟೆಯಲ್ಲಿ ರೇಷ್ಮೆಗೂಡು ಮಾರಾಟ ಮಾಡಲು ದೂರದ ತಾಲೂಕಿನಿಂದ ಬರುವ ರೈತರನ್ನು ಪ್ರತಿ ಹಂತದಲ್ಲಿಯೂ ಸುಲಿಗೆ ಮಾಡುತ್ತಿದ್ದಾರೆ. ದೂರದ ಊರುಗಳಿಂದ ಬರುವ ಬಡಪಾಯಿ ರೈತರಲ್ಲಿ ಎಷ್ಟೋಮಂದಿ ಬಸ್‌ಚಾರ್ಜ್ ಮತ್ತು ಲಗೇಜಿಗೆ ಬೇಕಾದ ಹಣಕ್ಕೂ ಸಾಲಮಾಡಿ ಬಂದಿರುತ್ತಾರೆ. ಇಂಥಾ ಹಲವು ರೈತರಿಗೆ ತಮ್ಮ ಗೂಡು ಮಾರಾಟವಾಗದ ಹೊರತು ಕಾಫಿ ತಿಂಡಿಗೂ ಕೈಯಲ್ಲಿ ಕಾಸಿರುವುದಿಲ್ಲ. ಆದರೆ ರೈತರ ಗೋಳು ಏನೇ ಇರಲಿ, ಇಲ್ಲಿನ ಅಧಿಕಾರಿಗಳಿಗೆ ಮಾತ್ರ ಪ್ರತಿಹಂತದಲ್ಲೂ ತಪ್ಪದೇ ಕಾಣಿಕೆ ಸಲ್ಲಿಸಲೇಬೇಕು. ಇವರ ಕೃಪೆಯಿಲ್ಲದೆ ಇಲ್ಲಿ ಯಾವ ಕೆಲಸವೂ ಆಗುವುದಿಲ್ಲ.

ರೇಷ್ಮೆ ಗೂಡು ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಮೊದಲು ರೈತರು ಪ್ರತಿ ಲಾಟ್ ಚೀಟಿಗೆ 10 ರೂಪಾಯಿ ಕೊಡಬೇಕು. ಕಾಯಿಗೂಡು ಪರೀಕ್ಷೆ ಚೀಟಿಗೆ ಹಾಗೂ ತೂಕ ಮಾಡಿಸಲು ತಲಾ 5 ರೂ ಸೇರಿದಂತೆ, ಮತ್ತೆ ಪೇಮೆಂಟ್ ಪಡೆದುಕೊಳ್ಳಲು 15 ರೂಪಾಯಿಗಳನ್ನು ಕಡ್ಡಾಯವಾಗಿ ಕೊಡಲೇಬೇಕಾಗಿದೆ. ಹೋಗಲಿ ಕನಿಷ್ಟಪಕ್ಷ ಮಾರುಕಟ್ಟೆ ಪ್ರಾಂಗಣದಲ್ಲಿರುವ ಶೌಚಾಲಯವನ್ನು ಬಳಸಲೂ ಕೂಡ ತಲಾ 3 ರೂಪಾಯಿಗಳನ್ನು ಅಧಿಕಾರಿಗಳು ಪೀಕಿಸುತ್ತಾರೆ. ಹೀಗೆ ಪ್ರತಿಯೊಬ್ಬ ರೈತನಿಂದ ನಿತ್ಯ 40 ರೂಪಾಯಿಗಳನ್ನು ಅಕ್ರಮವಾಗಿ ವಸೂಲಿ ಮಾಡುತ್ತಿದ್ದು ಈ ಅಕ್ರಮ ಗಳಿಕೆಯೇ ದಿನವೊಂದಕ್ಕೆ ಹತ್ತಾರು ಸಾವಿರ ರೂ ದಾಟುತ್ತಿದೆ.



ಪ್ರತಿನಿತ್ಯ ಕನಕಪುರ, ಚನ್ನಪಟ್ಟಣ, ರಾಮನಗರ, ಹುಣಸೂರು, ಮಳವಳ್ಳಿ, ಮಂಡ್ಯ ತಾಲೂಕಿನಿಂದ 250 ರಿಂದ 350ಕ್ಕೂ ಹೆಚ್ಚು ರೈತರು ರೇಷ್ಮೆ ಗೂಡನ್ನು ಮಾರಾಟ ಮಾಡಲು ಮುದಿಗುಂಡ ಮಾರುಕಟ್ಟೆಯನ್ನು ಆಶ್ರಯಿಸುತ್ತಿದ್ದಾರೆ. ಬಹು ನಿರೀಕ್ಷೆ ಹೊತ್ತು ಬರುವ ರೈತರಿಗೆ ಮಾರುಕಟ್ಟೆ ಪ್ರಾಂಗಣದಲ್ಲಿ ದೊರೆಯಬೇಕಾದ ಸೌಲಭ್ಯಗಳು ಮರೀಚಿಕೆಯಾಗಿವೆ. ದೂರದ ಊರುಗಳಿಂದ ಬರುವ ರೈತರು ತಂಗಲಿಕ್ಕೆಂದು ನಿರ್ಮಾಣವಾಗಿರುವ ರೈತಭವನದಲ್ಲಿ ಕಸಗುಡಿಸುವ[illegible] ಗತಿಯಿಲ್ಲ. ಹೀಗಿರುವಾಗ ಇನ್ನೂ ಸ್ವಚ್ಛತೆ ಎಂಬ ವ[illegible] ಬಹಳ ದೂರವೇ ಉಳಿಯಿತು. ರಾತ್ರಿ[illegible] ಮಾರುಕಟ್ಟೆಯಲ್ಲಿರುವ ಸೋಲಾರ್ ದೀಪಗಳು [illegible] ಕಣ್ಣು ಮುಚ್ಚಿ ನಿದ್ರಿಸುತ್ತಿರುವುದರಿಂದ ರೈತರು ಕ[illegible] ಹಾವು ಚೇಳುಗಳ ಭಯದಲ್ಲಿ ಕಾಲದೂಡುವಂತ[illegible] ಉಪಾಹಾರ ಮಂದಿರವಿದ್ದರೂ ಮಾರು[illegible] ಹೊರಭಾಗದಲ್ಲಿರುವ ಹೊಟೇಲ್‌ನವರೊಂ[illegible] ಅಧಿಕಾರಿಗಳು ಶಾಮೀಲಾಗಿರುವುದರಿಂದ ರೈ[illegible] ಉಪಾಹಾರಕ್ಕಾಗಿ ದುಬಾರಿ ಹಣ ತೆರಬೇಕಾಗಿದೆ.

ಇನ್ನು ಜಲ್ಲಿಗೂಡುಗಳನ್ನು ಹರಾಜು ಮಾಡುವು[illegible] ಎ.ಡಿ.ಎಸ್ ಹಾಗೂ ಎಸ್.ಇ.ಓ.[illegible] ಪಕ್ಷಪಾತನೀತಿ ಅನುಸರಿಸುತ್ತಾ ರೈ[illegible] ಅಲ್ಲೂ ಉಂಡೆ ನಾಮ ತಿಕ್ಕುತ್ತಿದ[illegible] ಆದರೂ ರೈತರ ಇಂಥ ಎಲ್ಲಾ ಸಮ[illegible] ಬಗ್ಗೆ ಡಿ.ಡಿ. ಚಿಗರಿ ಜಾಣ ಕುರ[illegible] ಪ್ರದರ್ಶಿಸುತ್ತಾ ಬಂದಷ್ಟು ಹಣ[illegible] ಕಿಸೆಗಿಳಿಸಿ ಮೈಸೂರಿನ ತನ್ನ ಬಂಗಲೆ[illegible] ಬೆಚ್ಚಗಿದ್ದಾನೆ.

ರಾತ್ರಿ-ಹಗಲು ಹೆಡ್ ಕ್ವಾರ್ಟರ್[illegible] ಉಳಿದು ರೈತರ ಬವಣೆಯನ್ನು ಸುಧಾರಿಸಬೇಕಾದ ಎ.ಡಿ.ಎಸ್. ಪ್ರೇಮನಾಥ್, ಎಸ್.ಇ.ಓಗಳಾದ ಶಿವ[illegible] ಎಸ್.ವಿ.ಕುಂಬಾರ್ ಯಾರೂ ತಮ್ಮ ಕಾಯಕವನ್ನು ಸರಿಯಾಗಿ ಮಾಡುತ್ತಿಲ್ಲ. ಇವರೆಲ್ಲಾ ಬೇರೆಬೇರೆ ಊರುಗಳಿಂದ ಸಂಚರಿಸುತ್ತಿದ್ದು ಡಿ.ಡಿ. ಚಿಗರಿಯ[illegible] ಹಾದಿಯನ್ನೆ ಅನುಸರಿಸುತ್ತಾ ಹಗಲುದರೋಡೆ ಮಾಡುತ್ತಿದ್ದಾರೆ. ಉಳಿದ ಸಿಬ್ಬಂದಿಗಳಾದ

...ಎಚ್.ಕೆ.ಇ. ಸೊಸೈಟಿಯ ಅಕ್ಟೋಪಸ್ ಹಿಡಿತವೂ, ಬಚಾವ್ಹೋ ಸಮಿತಿಯೂ

...ಂಡಾಕಿಯ ಮಗ ಇಲ್ಲದೆ ಹೋದರೂ ಪರವಾಯಿಲ್ಲ ಇಟ್ಟುಕೊಂಡಾಕಿಯ ಮಗನನ್ನಾದರೂ ಈ ಸಂಸ್ಥೆಯ ... [illegible] ಬಯಸುತ್ತಿದ್ದಾರೆ. ಅವರ ನಾಲ್ಕಾರು ಜನ ಮಕ್ಕಳಿರುವ ... ತಂದೆ ಯಾರ ಒಬ್ಬರ ಹೆಸರನ್ನು ಎಚ್.ಕೆ.ಇ. ಸಂಸ್ಥೆಗೆ ಸೂಚಿಸಿದರೆ ಉಳಿದ ಮೂವರು ಮಕ್ಕಳು ತಂದೆಯ ...ಗಬದ್ಧ ಪರಿಣಾಮ ಮನಗಳು ರಣಾಂಗಣವಾಗಿ ಮಾರ್ಪಟ್ಟಿವೆ. ಇದಕ್ಕೆಲ್ಲ ಮುಖ್ಯ ಕಾರಣವೆಂದರೆ ಈ ಸಂಸ್ಥೆಯ ... ಸಂಗುಗಳು ಹಾಗೂ ಇಂಥ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಕಾರ್ಯಕಾರಿ ಮಂಡಳಿಯ ಸದಸ್ಯರಾಗುವವರು ... ಕೂಡಮಾಡುವ ಸೌಕರ್ಯಗಳು.

...ರ್ಚ್ 31 ರೊಳಗೆ ನಡೆಯಬೇಕಿದ್ದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಪ್ರತಿ ಸದಸ್ಯನಿಗೆ ಐದು ಲಕ್ಷ ... ಮನೆಯಲ್ಲಿ ಒಬ್ಬನಿಗೆ ನೌಕರಿ ಹಾಗೂ ಸೊಸೈಟಿಯ ಹಲವಾರು ಉಪಯೋಗಗಳು ಪುಕ್ಕಟೆಯಾಗಿ ... [illegible] ಬರುತ್ತಿದ್ದಂತೆ ಶಶೀಲ ನಮೋಶಿ ಅಧ್ಯಕ್ಷತೆಯ ಟೀಮ್ ಸುಮಾರು ... [illegible] 200... [illegible] ...ಗಿದೆ. ಜೊತೆಗೆ 500 ರಿಂದ 600 ಜನರಿಗೆ ಸಂಸ್ಥೆಯಲ್ಲಿ ನೌಕರಿ ...

[illegible]


...ಆ ಅರ್ಜಿಗಳನ್ನು ಹಾಗೆಯೇ ಇಟ್ಟುಕೊಂಡು ...ಂದಾರು ತಿಂಗಳುಗಳ ಹಿಂದೆ ಮಾತ್ರ ಆ ...ನ್ನು ಹಾಗೂ ಪೋಸ್ಟಲ್ ಆರ್ಡರ್‌ಗಳನ್ನು ...ಕಳಿಸಿ 2/3 ಮೆಜಾರಿಟಿ ...ಇರುವುದರಿಂದ ತಮ್ಮ ...ನ್ನು ತಿರಸ್ಕರಿಸಿದ್ದಾಗಿ .... ಆದರೆ ಒಳಗೊಳಗೆ ... ಸದಸ್ಯರಾಗಿ ರುವವರ ...ದ ವರ್ಗದ 903 ... ಸದಸ್ಯತ್ವ ಕೊಡ ...ದೆ! ...ಲ್ಲ ಅದ್ವಾನವನ್ನು ತನ್ನ ...ಗೆ ಇಟ್ಟುಕೊಂಡೂ ... ಮಾರ್ಚ 31 ರ ...ಅಧ್ಯಕ್ಷ / ಉಪಾಧ್ಯಕ್ಷ / ...ರ್ಯ ಮಂಡಳಿಯ ... ಚುನಾಯಿಸಲು ...ಕೇಶನ್ ...ಲಾಗಿತ್ತು, ಇದನ್ನು ...98 ಜನ ಗುಲ್ಬರ್ಗಾ ...ಹೈಕೋರ್ಟಿನ ಮೆಟ್ಟಲೇರಿದ್ದರು. ಸಂಸ್ಥೆಯ ...ರಿಗಳನ್ನು, ಲಫಡಾಗಳನ್ನು ಹಾಗೂ ಕಾನೂನುಬಾಹಿರ ಕ್ರಮಗಳನ್ನು ಗಮನಿಸಿದ ಕೋರ್ಟ ಇವರ ಚುನಾವಣೆಗೆ ಅಡ್ಡಗಾಲುಹಾಕಿದೆ. ಜೊತೆಗೆ 900 ಜನರಿಗೆ ನೀಡಿದ ಸದಸ್ಯತ್ವ ಕೂಡ ಕೋರ್ಟಿನ ತಡೆಯಾಜ್ಞೆಗೆ ಒಳಪಟ್ಟಿದೆ.




ಇನ್ನೇನು ಇದೆಲ್ಲಾ ಮುಗಿದು ಮತ್ತೆ ಬಗೆಬಗೆಯ ಭಕ್ಷ್ಯಭೋಜನದ ವ್ಯವಸ್ಥೆಯನ್ನು ಭರ್ಜರಿಯಾಗಿ ಸವಿಯಬೇಕೆಂದಿದ್ದ ಮಂದಿಗೆ ಈಗ ಅಂಡಿನಲ್ಲಿ ಏನೋ ಸಿಕ್ಕಬಿದ್ದಂತಾಗಿ ವಿಲವಿಲನೆ ಒದ್ದಾಡುತ್ತಿದ್ದಾರೆ. ಜನಸಾಮಾನ್ಯರ ಶ್ರಮದ ಪ್ರತೀಕವಾಗಿದ್ದ ಸಂಸ್ಥೆ ಜನರಿಗಾಗಿಯೆ ಇದ್ದರೆ ಅದು ಜೀವಂತವಾಗಿರುತ್ತದೆ. ಇಲ್ಲದೆ ಹೋದರೆ ಅದು ಬರುಬರುತ್ತ ಕೊಳೆಯುತ್ತದೆ. ಈ ಸಂಸ್ಥೆಯನ್ನು ಸ್ವಚ್ಛಗೊಳಿಸುವ ಕೆಲಸವನ್ನು ಮಾನ್ಯ ನ್ಯಾಯಾಲಯ ಪರಾಂಬರಿಸಬಹುದು ಎಂಬ ಆಶಯ ಇಲ್ಲಿನ ಜನಗಳಲ್ಲಿ ಇನ್ನೂ ಜೀವಂತವಾಗಿದೆ.

• ವಿಶ್ವಾರಾಧ್ಯ ಸತ್ಯಂಪೇಟೆ

...ರಾಜೇ ಅರಸ್, ಮಹದೇವ್, ಸಿದ್ದರಾಜು, ..., ಜಗನ್ನಾಥ್ ಅರಸ್ ಎಂಬುವವರದೂ ಇದೇ ...ಕ. ಈ ಮಹಾನ್ ಕಳ್ಳರು ... ಜಿಗಣೆಗಳಂತೆ ಹಣ ಸುಲಿಗೆ ...ಡಿ. ಪಾದಗಳಿಗರ್ಪಿಸಿ ...ಗುತ್ತಿದ್ದಾರೆ. ... ನಾಲ್ಕು ವರ್ಷದ ಹಿಂದೆಯೇ ... ಡಿ.ಡಿ. ಚಿಗರಿ ದುರಾಡಳಿತದ ...ರದಿ ಮಾಡಿದ್ದ ಪರಿಣಾಮ ...ಈತನನ್ನು ಮೈಸೂರಿನ ... ದಿಢೀರ್ ವರ್ಗ ಮಾಡಿತ್ತು, ...ತ ತನ್ನ ಹೀನಚಾಳಿ ...ವರೆಸಿ ಅಲ್ಲಿಯೂ ...ರಗಳಲ್ಲಿ ತೊಡಗಿದ್ದರಿಂದ ಈ ...ಭಾವನನ್ನು ಚಾ.ನಗರದ ಬಿತ್ತನೆ ...ಲ್ಲಿ ಜಪ ಮಾಡಲು ..., ಆದರೆ ಈ ಚಾಣಾಕ್ಷ ಹಾಗೆ ... [illegible] ...ವವನಲ್ಲ, ...ಯನ್ನು ಕಟ್ಟುನಿಟ್ಟಾಗಿ ... ಸುಲಿಗೆಕೋರ ...ಗಳಿಗೆ ಕಡಿವಾಣ ಹಾಕಿದ್ದ ...ಡಿ.ಡಿ. ಬಸವಣ್ಣ ಅವರನ್ನು ಏನೆಲ್ಲಾ ಕುತಂತ್ರ ..., ಜಾತಿ ಪ್ರಭಾವ ಬಳಸಿ ಓ.ಓ.ಡಿ ಮೇಲೆ ... ಬಿತ್ತನೆ ಕೋಠಿಗೆ ಕಿಕ್ ಕೊಡಿಸಿದ. ಈತನ ...ಗೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತ ...ಶಾಂಬಿಕೆದೇವಿ ಕೂಡ ಸಾಥ್ ನೀಡಿದ್ದು ... ಸರಿ. 'ಹೋದೆಯಾ ಪಿಶಾಚಿ ಅಂದ್ರೆ ...' ಎಂಬಂತೆ ಮತ್ತೆ ವಕ್ಕರಿಸಿರುವ ಡಿ.ಡಿ. ಚಿಗರಿ ಇದೀಗ ಮಾರುಕಟ್ಟೆಯನ್ನು ಗುಜರಿ ಅಡ್ಡೆಯನ್ನಾಗಿ ಮಾಡಿಕೊಂಡಿದ್ದಾನೆ.





ಮಾಜಿ ಸಚಿವ ಶ್ರೀರಾಮುಲು ಕೃಪಾಶೀರ್ವಾದ ಇರುವರೆವಿಗೂ ತನ್ನನ್ನು ಯಾರೂ ಏನೂ ಮಾಡಲು ಸಾಧ್ಯವಿಲ್ಲವೆಂದು ಎಲ್ಲರೊಂದಿಗೆ ಪದರುವುದು ಈತನ ಬಹಳ ಪ್ರಿಯವಾದ ಹವ್ಯಾಸವಾಗಿ ಹೋಗಿದೆ. ತನ್ನದೇ ಇತಿಹಾಸವನ್ನು ಹೊಂದಿರುವ ರೇಷ್ಮೆನಗರಿಯೆಂದೇ ಖ್ಯಾತವಾಗಿರುವ ಕೊಳ್ಳೇಗಾಲದ ಮುಡಿಗುಂಡ ರೇಷ್ಮೆ ಮಾರುಕಟ್ಟೆಯನ್ನು ಕುಲಗೆಡಿಸುವುದರಲ್ಲಿ ನಿರತನಾಗಿರುವ ಈ ಪ್ರಭೃತಿ ತನ್ನ ಹುಟ್ಟೂರಾದ ಬಾಗಲಕೋಟೆಯ ಹೆಸರಿಗೂ ಮಸಿಬಳಿಯುತ್ತಿರುವುದು ಸುಳ್ಳಲ್ಲ. ಇಂತಹ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅರಿತು ಕ್ಷೇತ್ರದ ಶಾಸಕ ಜಿ.ಎನ್.ನಂಜುಂಡಸ್ವಾಮಿ ಹಾಗೂ ಸಂಸದ ಆರ್.ಧ್ರುವ ನಾರಾಯಣ್ ಅವರಾದರೂ ಈ ಪರಮಭ್ರಷ್ಟ ಚಿಗರಿಗೆ ತಕ್ಕ ಬುದ್ಧಿ ಕಲಿಸಿ ಕ್ಷೇತ್ರದ ಹೆಸರನ್ನು ಕಾಪಾಡಿಕೊಳ್ಳಬೇಕಾಗಿದೆ. ಅಥವಾ ರೇಷ್ಮೆ ಇಲಾಖೆಯ ಸಚಿವರು ಮತ್ತು ಇಲಾಖೆಯನ್ನು ನಿಯಂತ್ರಿಸುತ್ತಿರುವ ತೋಟಗಾರಿಕೆ ರಾಜ್ಯ ಕಾರ್ಯದರ್ಶಿ ಪಂದಿತಾಶರ್ಮ ಅವರಾದರೂ ಇಲಾಖೆಯ ಮರ್ಯಾದೆ ಉಳಿಸಿ ರೈತರ ಜೀವ ಕಾಪಾಡಬೇಕಾಗಿದೆ. ಇಲ್ಲದೇ ಹೋದರೆ ಇಲಾಖೆಯ ಮಾನ ಮರ್ಯಾದೆಯನ್ನು ಈ ಭ್ರಷ್ಟ ಚಿಗರಿ ಪಟಾಲಂ ಮೂರು ಕಾಸಿಗೆ ಹರಾಜು ಹಾಕುವುದು ಗ್ಯಾರಂಟಿ! ❋

ಪುಸ್ತಕ ಪರಿಚಯ




ಚಂದ್ರಶೇಖರ್ ಐಜೂರ್

ಮನುಷ್ಯ ಸಂವೇದನೆಯ ಹುಡುಕಾಟದಲ್ಲಿ ದಕ್ಕಿದ ಪದ್ಯಗಳು

ಈ ಸಲದ 'ವಿಭಾ ಸಾಹಿತ್ಯ ಪ್ರಶಸ್ತಿ' ಚನ್ನಪ್ಪ ಅಂಗಡಿಯವರ 'ಭೂಮಿ ತಿರುಗುವ ಶಬ್ದ' ಕವನ ಸಂಕಲನಕ್ಕೆ ಸಿಕ್ಕಿದೆ. 'ಭೂಮಿ ತಿರುಗುವ ಶಬ್ದ' ಕಿವಿಗೆ ಕೇಳುವುದಿಲ್ಲ, ಹಾಗಾದರೆ ಭೂಮಿಯ ಮೇಲೆ ನಡೆಯುವ ಎಲ್ಲ ವಿದ್ಯಮಾನಗಳ ಸದ್ದೇನು? ಎಂಬ ಪ್ರಶ್ನೆ ತಮಗೆ ತಾವೇ ಕೇಳಿಕೊಳ್ಳುತ್ತಲೇ ಕವಿ ತಮ್ಮ ಸುತ್ತಣ ವಿದ್ಯಮಾನಗಳಿಗೆ ಕಣ್ಣು ಕಿವಿಯಾಗಿದ್ದಾರೆ.

ಒಡೆದ ಗಾಜಿನ ಚೂರಿನಂತೆ ಬಿದ್ದುಕೊಂಡಿದೆ ನಗರ
ಕಂಡೂಕಾಣದ ಬದುಕು; ಬದುಕಿರುವುದಕ್ಕೆ ಸಾಕ್ಷಿ
ಹುಡುಕುತಿವೆ ಜೀವ ಹೊತ್ತ ಜೀವಿಗಳು
ನೀಲಿಗಟ್ಟಿದ ಮುಖ, ವಿಷಪ್ರಾಶನ ಮಾಡಿಸಿದ
ಸೂರ್ಯನ ಕಣ್ಣಿಂದ ನಡುಮಧ್ಯಾಹ್ನಕಿಳಿಯುವ ಕಿಚ್ಚಿಧಾರೆ (ನಗರ ದೂರದಿಂದ)

ಚರಿತ್ರೆಯ ಬಿರುಕು ಮತ್ತು ವರ್ತಮಾನದ ಸಂಘರ್ಷಗಳನ್ನು ಬಲ್ಲ ಈ ಕವಿ ತಮ್ಮ ಕಾವ್ಯಕ್ಕೆ ಚಂದದ ರೂಪಕ ತೊಡಿಸಿ ಅತಿ ಅಲಂಕಾರದ ಮಾತುಗಳನ್ನು ತಮ್ಮ ಕಾವ್ಯದಿಂದ ಹೊರಡಿಸುವುದಿಲ್ಲ. ಆದಿಮ ಸಂಸ್ಕೃತಿಯ ಅನುಸಂಧಾನಗಳ ಜೊತೆಗೆ ವಚನ ಪರಂಪರೆಯ ಕಸುವನ್ನು ಹೇರಳವಾಗಿ ತುಂಬಿಕೊಡುವ ಪ್ರತಿಮೆಗಳನ್ನು ಅವರ ಘಟವೃಕ್ಷ, ಗಳಿಗೆಬಟ್ಟಲು, ತಾಯಿಪದ, ಕಲ್ಯಾಣದ ಮುಂದಿನ ದಾರಿ, ಕಾರಣಿಕ, ತೊದಲುಗೊಂಬೆ... ಮೊದಲಾದ ಪದ್ಯಗಳಲ್ಲಿ ಕಾಣಬಹುದು.



ಪಡೆದೆನೆಂಬ ಗರ್ವ
ಕಳೆದೆನೆಂಬ ಕೊರಗು
ಕ್ಷಣಮಾತ್ರದಲಿ ತಲೆಕೆಳಗು
ಕಾಲನ ಮಹಿಮೆಗೆ ಬಾಗುವ-
ದರಲದೆಂತದೋ ಹಿತ! ಕಾದು ನಿಂದರೂ ಅನಾಹತ. (ಗಳಿಗೆಬಟ್ಟಲು)


'ಚನ್ನಪ್ಪನವರಿಗೆ ಬರವಣಿಗೆಯ ಹದ ಗೊತ್ತಿದೆ. ಅದಕ್ಕೆ ಬೇಕಾದ ಸಾಂಸ್ಕೃತಿಕ ಪ್ರತೀಕಗಳ ದ್ರವ್ಯವೂ ಒದಗಿದೆ. ಇಷ್ಟಲ್ಲದೆ ಕನ್ನಡ ಕಾವ್ಯ ಪರಂಪರೆಯಲ್ಲಿ ಉದ್ದಕ್ಕೂ ಸಾಗಿಬಂದ ಜೀವಪರ, ಪ್ರಗತಿಪರ, ಮಾನವೀಯ ಸಂವೇದನೆಗಳ ದನಿಯ ಧಾರೆಗೆ ಅವರು ದನಿಗೂಡಿಸ ಬಯಸಿದ್ದಾರೆ' ಎಂದು ಚನ್ನಪ್ಪನವರ ಕಾವ್ಯದ ಬಗ್ಗೆ ನಾಲ್ಕು ಮೆಚ್ಚುಗೆಯ ಮಾತುಗಳನ್ನು ಹೇಳಿರುವ ಡಾ.ಬಂಜಗೆರೆ ಜಯಪ್ರಕಾಶರು ಮುಂದುವರೆದು 'ಕವಿಯಾಗಬಯಸುವವನಿಗೆ ಇಂದಿನ ಸಮಾಜದ ಸಂಕೀರ್ಣತೆಗಳ ಅರಿವಿರದಿದ್ದರೆ, ಈ ಮೊದಲು ಹೇಳಿದ ಎಲ್ಲವುಗಳಿದ್ದರೂ ಅದು ಕೇವಲ ಗತಕಾಲದ ಕನವರಿಕೆಯಾಗಿಬಿಡುವ ಅಪಾಯವಿರುತ್ತದೆ ಅಥವಾ ಕೇವಲ ಕಾವ್ಯ ಕುಶಲತೆ ಮಾತ್ರವಾಗಿಬಿಡುವ ಅನರ್ಥವೂ ಇದೆ' ಎಂಬ ಎಚ್ಚರದ ಮಾತುಗಳನ್ನು ಹೇಳುತ್ತಾರೆ.

ಚನ್ನಪ್ಪನವರ ಇಲ್ಲಿನ ಕವನಗಳನ್ನು ಹಸ್ತಪ್ರತಿ ಹಂತದಲ್ಲಿರುವಾಗಲೇ 'ವಿಭಾ ಸಾಹಿತ್ಯ ಪ್ರಶಸ್ತಿ'ಗೆ ಆಯ್ಕೆ ಮಾಡಿದವರು ಪ್ರೊ.ಎಸ್.ಜಿ.ಸಿದ್ದರಾಮಯ್ಯ ಮತ್ತು ಡಾ.ಎಮ್.ಎಸ್.ಆಶಾದೇವಿ. 'ಇಲ್ಲಿನ ಪದ್ಯಗಳು ವಚನ ಚಳವಳಿಯ ಆಶಯಗಳನ್ನು ಚಿಂತನೆಯ ಗರ್ಭದಲ್ಲಿ ತುಂಬಿಕೊಂಡಿದ್ದರೂ ಅದು ಸಮಮೂಲದ ವಚನಕಾರರ ಸಂವೇದನೆಯ ನೆಲೆಯಲ್ಲಿ ಬೇರುಬಿಟ್ಟ ಬೆಳೆಯಾಗಿದೆ' ಎಂಬ ಎಸ್.ಜಿ.ಸಿದ್ದರಾಮಯ್ಯನವರ ಬೆನ್ನುಡಿಯ ಮಾತುಗಳನ್ನು ಪುಷ್ಟೀಕರಿಸುವ ಅನೇಕ ಪದ್ಯಗಳು ಈ ಸಂಕಲನದಲ್ಲಿವೆ.

ಭೂಮಿ ತಿರುಗುವ ಶಬ್ದ
ಚನ್ನಪ್ಪ ಅಂಗಡಿ
ಪ್ರಕಾಶಕರು: ಲಡಾಯಿ ಪ್ರಕಾಶನ, # 21, ಪ್ರಸಾದ್ ಹಾಸ್ಟೆಲ್, ಗದಗ -582 101
ಪುಟಗಳು: 108, ಬೆಲೆ: ರೂ.60, ಪ್ರಕಟಣೆ:2011

ಮಳೆಗೆ ಚಿಗುರಿದ ಕತೆಗಳು

ಚುಕ್ಕಿ, ಮಾಯಾಪೆಟ್ಟಿಗೆಯಂತಹ ಕವನ ಸಂಕಲಗಳ ಮೂಲಕ ತಮ್ಮದೇ ವಿಶಿಷ್ಟ ಶೈಲಿಯಿಂದ ಕನ್ನಡದ ಸಾಹಿತ್ಯ ನೆಲದಲ್ಲಿ ಗುರುತಿಸಿಕೊಂಡವರು ಜ್ಯೋತಿ ಗುರುಪ್ರಸಾದ್. ಕಳೆದ ನಾಲ್ಕು ವರ್ಷಗಳಲ್ಲಿ ನಾಡಿನ ಅನೇಕ ಪತ್ರಿಕೆಗಳಲ್ಲಿ ಪ್ರಕಟಗೊಂಡ ಜ್ಯೋತಿಯವರ ಕತೆಗಳು ಈಗ 'ತಂತಿ ಪಕ್ಷಿ'ಯಾಗಿ ಹಾರುತ್ತಿವೆ. ಇದು ಅವರ ಚೊಚ್ಚಲ ಕಥಾಸಂಕಲನ ಕೂಡ. ಜ್ಯೋತಿಯವರು ಇಲ್ಲಿನ ಎಲ್ಲ ಕತೆಗಳಲ್ಲೂ ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ಆಕೆಯ ಶಕ್ತಿ, ಅಸಹಾಯಕತೆ, ಸಂಕಟಗಳನ್ನೆಲ್ಲ ನವಿರಾಗಿ ರೂಪಿಸುವ ಪ್ರಯತ್ನ ಮಾಡಿದ್ದಾರೆ. ತಂತಿ ಪಕ್ಷಿ, ಚಿಗುರು, ಸುಂದರ ದಿನ, ಬ್ಲ್ಯಾಂಕ್ ಮೆಸೇಜ್, ಹದ, ಮೌನ ಗೌರಿ, ಅನುಸೂಯೆ, ಜೀವ, ಮಳೆ... ಈ ಎಲ್ಲ ಕತೆಗಳಲ್ಲೂ ಆಧುನಿಕ ಹೆಣ್ಣು ವರ್ತಮಾನದೊಂದಿಗೆ ಮುಖಾಮುಖಿಯಾಗಿರುವ ಹಲವು ಚಿತ್ರಗಳಿವೆ. ಅವರ 'ಕ್ರಿಯೇಟಿವ್' ಕತೆ ಕೃತಕ ಅನ್ನಿಸಿದರೆ, ಇನ್ನೂ ತೀವ್ರವಾಗಿ ಬೆಳೆಯಬಹುದಾದ ಸಾಧ್ಯತೆಗಳಿರುವ ಇಲ್ಲಿನ ಎಲ್ಲ ಕತೆಗಳನ್ನು ಲೇಖಕಿ ಆಚಾನಕ್ಕಾಗಿ ಕೊನೆಗೊಳಿಸುವುದು ಕೊಂಚ ಬೇಸರ ತರಿಸುತ್ತದೆ. ಇದನ್ನು ಅವರ 'ಮಳೆ' ಕತೆಯಲ್ಲಿ ಕಾಣಬಹುದು:



ಅವಳು

'ಸುರಿಯುವ ಮಳೆಯೊಡನೆ ಅವನ ನೆನಪೂ ಇಳಿದುಬರುತ್ತಿದೆ. ಯಾರೋ ಏನೋ? ಒಂದೂ ತಿಳಿಯದು. ಆದರೂ ಅವನು ಮತ್ತೊಮ್ಮೆ ಎದುರು ಬಂದರೆ ಅವನ ಹಸ್ತವನ್ನಾದರೂ ಮುಟ್ಟಿ ತಾನು ಅವನಿಗೆ ತುಂಬಾ ಹತ್ತಿರದವಳೆಂದೂ ತಿಳಿಸಬೇಕು. ಇಲ್ಲದಿದ್ದರೆ ಈ ಮಳೆಗೂ, ನೆನಪುಗಳಿಗೂ ಏನು ಅರ್ಥ?'


ಅವನು


'ಅವಳ ಮನೆಯ ದಾರಿಯಲ್ಲೆ ನಮ್ಮ ಮನೆಯಿದ್ದರೂ ಒಂದು ದಿನವಾದರೂ ಅವನು ಅವಳು ಆಚೀಚೆ ನೋಡಿ ಅನಗತ್ಯ ಹರಟೆಗಾಗಿ, ಪರಿಚಯಕ್ಕಾಗಿ ಕಾತರಿಸಿದವಳಲ್ಲ, ಒಂದೇ ಸಮಾಧಾನ. ಅವಳು ಇದ್ದಾಳೆ. ಎಲ್ಲೋ ಇದ್ದಾಳೆ. ಮಳೆ ಬರುವಾಗಲೆಲ್ಲ ಅವಳ ನೆನಪು...'

ಜ್ಯೋತಿ ಗುರುಪ್ರಸಾದರ 'ತಂತಿ ಪಕ್ಷಿ'ಯ ಬೆನ್ನಿಗೆ 'ಇಲ್ಲಿರುವ ಹದಿನೈದು ಕಥೆಗಳು ಒಂದು ಬಗೆಯ ವಿಶಿಷ್ಟತೆಯಿಂದ ಒಂದೇ ಬಿಂದುವಿನಲ್ಲಿ ಸಂಧಿಸುತ್ತವೆ. ಆ ವಿಶಿಷ್ಟತೆಯೇ 'ತಂತಿ ಪಕ್ಷಿ'ಯ ಪ್ರತಿಮೆಯ ಕ್ರಮ. ಇಲ್ಲಿ ಪ್ರಶಾಂತ ಮನಸ್ಸೊಂದರ ಶೋಧನೆಯ ಸ್ತ್ರೀಯಾತ್ಮಕ ನೆಲೆಗಟ್ಟಿನ ಆಪ್ತ ದೃಷ್ಟಿಕೋನವಿದೆ' ಎಂಬ ಪ್ರಕಾಶಕರ ಮಾತುಗಳಿವೆ. ಲೇಖಕಿ ಇನ್ನೂ ದೊಡ್ಡ ಕತೆಗಳನ್ನು, ಗಟ್ಟಿಗಿತ್ತಿ ಹೆಣ್ಣನ್ನು ಸೃಷ್ಟಿಸುವ ಎಲ್ಲ ರಿಸ್ಕ್ ತೆಗೆದುಕೊಳ್ಳಲಿ.

ತಂತಿ ಪಕ್ಷಿ
ಜ್ಯೋತಿ ಗುರುಪ್ರಸಾದ್
ಪ್ರಕಾಶಕರು: ದೇಸಿ ಪುಸ್ತಕ, ನಂ.121, 13ನೇ ಮುಖ್ಯ ರಸ್ತೆ, ಎಮ್.ಸಿ.ಲೇಔಟ್, ವಿಜಯನಗರ, ಬೆಂಗಳೂರು-40
ಪುಟಗಳು: 80, ಬೆಲೆ: ರೂ.50, ಪ್ರಕಟಣೆ:2010

ಮುಸ್ಲಿಮರಿಗೆ ಈಗ ಒಬ್ಬ ಅಂಬೇಡಕರ್ ಬೇಕು





ದಕ್ಷಿಣ ಏಷ್ಯಾದಲ್ಲಿ ಕೋಮು ಹಾಗೂ ಧಾರ್ಮಿಕ ಸಹಬಾಳ್ವೆಗಾಗಿ ಶ್ರಮಿಸಿದ್ದಕ್ಕಾಗಿ 2004ರಲ್ಲಿ ರೈಟ್ ಲಿವಲಿಹುಡ್ ಪ್ರಶಸ್ತಿ ಪಡೆದ ಎಂಜಿನಿಯರ್ 'ಮಿಂಟ್' ಜತೆ ತಮ್ಮ ಬದುಕು, ಸುಧಾರಕನಾಗಿ ತಮ್ಮ ಕಾರ್ಯಚಟುವಟಿಕೆ ಹಾಗೂ ಭಾರತೀಯ ಜಾತ್ಯತೀತತೆಯ ಅವಸ್ಥೆ ಕುರಿತು ಮಾತನಾಡಿದ್ದರು. ಆ ಸಂದರ್ಶನದ ಆಯ್ದ ಭಾಗವಿದು...

ಸಂದರ್ಶನ

ರಾಜಸ್ಥಾನದ ಒಬ್ಬ ಧರ್ಮ ಗುರುವಿನ ಮಗನಾಗಿ ಅಸ್ಗರ್‌ಅಲಿ ಎಂಜಿನಿಯರ್ 1939ರಲ್ಲಿ ಜನಿಸಿದರು. 72 ವರ್ಷ ಪ್ರಾಯದ ಅಸ್ಗರ್‌ಅಲಿ ಅವರು ಎಂಜಿನಿಯರಿಂಗ್ ಪದವಿ ಪಡೆದರು. ಜೊತೆಗೆ ಇಸ್ಲಾಮಿನ ಅಧ್ಯಯನದಲ್ಲಿ ತೊಡಗಿದರು. ಕಡೆಗೆ ವಿದ್ವಾಂಸರಾದರು, ಸುಧಾರಕರಾದರು. ಸುಧಾರಣೆಗಾಗಿ ಅವರು ಮಂಡಿಸಿದ ವಿದ್ವತ್‌ಪೂರ್ಣ ವಾದಗಳು ಇಸ್ಲಾಂ ವಿಮೋಚನಾ ದೈವಶಾಸ್ತ್ರಕ್ಕೆ ಅಪಾರ ಕೊಡುಗೆ ನೀಡಿದವು. ಲ್ಯಾಟಿನ್ ಅಮೆರಿಕನ್ ಪಾದ್ರಿಗಳು ಸಾಮಾಜಿಕ ನ್ಯಾಯದ ಸಂದರ್ಭದಲ್ಲಿ ಕ್ರಿಶ್ಚಿಯನ್ ಧರ್ಮದ ಬೋಧನೆಗಳ ಭಾಷ್ಯವನ್ನು ಬಣ್ಣಿಸಲು ಮೊಟ್ಟ ಮೊದಲ ಸಲ ಕ್ರಿಶ್ಚಿಯನ್ ವಿಮೋಚನಾ ದೈವಶಾಸ್ತ್ರ ಎನ್ನುವ ಪದಪುಂಜ ಬಳಕೆಗೆ ತಂದಿದ್ದರು. ಲಿಂಗ ಸಮಾನತೆ ಹಾಗೂ ಜಾತ್ಯತೀತ ಪ್ರಜಾಪ್ರಭುತ್ವದ ವಕ್ತಾರರಾದ ಎಂಜಿನಿಯರ್ ಬೊಹ್ರಾ ಪುರೋಹಿತಶಾಹಿಯ ಕಟು ಟೀಕಾಕಾರರೂ ಹೌದು. ಅವರು ಪ್ರಗತಿಪರ ದಾವೂದಿ ಬೊಹ್ರಾ ಸುಧಾರಣಾ ಚಳವಳಿ ನೇತಾರರಾಗಿದ್ದಾರೆ.

ಅವರ ಅತ್ಯಂತ ವೈಯಕ್ತಿಕವಾದ ಗ್ರಂಥ, ಆತ್ಮ ಚರಿತ್ರೆ 'ಎ ಲಿವಿಂಗ್ ಫೇಥ್: ಎ ಕ್ವೆಸ್ಟ್ ಫಾರ್ ಪೀಸ್, ಹಾರ್ಮನಿ ಆಂಡ್ ಸೋಷಿಯಲ್ ಚೇಂಜ್' ಈ ತಿಂಗಳ ಮೊದಲ ವಾರ ಬಿಡುಗಡೆ ಆಯಿತು. ದಕ್ಷಿಣ ಏಷ್ಯಾದಲ್ಲಿ ಕೋಮು ಹಾಗೂ ಧಾರ್ಮಿಕ ಸಹಬಾಳ್ವೆಗಾಗಿ ಶ್ರಮಿಸಿದ್ದಕ್ಕಾಗಿ 2004ರಲ್ಲಿ ರೈಟ್ ಲಿವಲಿಹುಡ್ ಪ್ರಶಸ್ತಿ ಪಡೆದ ಎಂಜಿನಿಯರ್ 'ಮಿಂಟ್' ಜತೆ ತಮ್ಮ ಬದುಕು, ಸುಧಾರಕನಾಗಿ ತಮ್ಮ ಕಾರ್ಯಚಟುವಟಿಕೆ ಹಾಗೂ ಭಾರತೀಯ ಜಾತ್ಯತೀತತೆಯ ಅವಸ್ಥೆ ಕುರಿತು ಮಾತನಾಡಿದ್ದರು. ಆ ಸಂದರ್ಶನದ ಆಯ್ದ ಭಾಗವಿದು:

ಪ್ರ: ಒಬ್ಬ ವಿದ್ವಾಂಸ ಹಾಗೂ ಸುಧಾರಕನಾಗಿ ನೀವು ನಿಮ್ಮ ಕಾರ್ಯ ಚಟುವಟಿಕೆಯನ್ನು ಹೇಗೆ ಆರಂಭಿಸಿದಿರಿ?

ಉ: ನಾನೊಬ್ಬ ಧರ್ಮಗುರುವಿನ ಮಗ. ನಾನು ಅತ್ಯಂತ ಸಂಪ್ರದಾಯವಾದಿ ಪರಿಸರದಲ್ಲಿ ಬೆಳೆದೆ. ಅರೇಬಿಕ್ ಹಾಗೂ ಪರ್ಶಿಯನ್ ಕಲಿತೆ. ಕುರಾನ್ ಅಧ್ಯಯನಕ್ಕೆ ತೊಡಗಿದೆ. ನಾನು ಕುರಾನ್‌ಅನ್ನು ಅರ್ಥೈಸುವಲ್ಲಿ ತುಂಬ ಕಟ್ಟುನಿಟ್ಟಾಗಿದ್ದೆ. ನನಗೆ ಮುಸ್ಲಿಮೇತರ ಗೆಳೆಯರಿದ್ದರು. ದಯೆ ಹಾಗೂ ನ್ಯಾಯವನ್ನು ಯಾವತ್ತೂ ಮಹತ್ವದ ಮೌಲ್ಯಗಳೆಂದು ಪರಿಗಣಿಸಿದ್ದೆ. ನಾನು ಇಂದೋರನಲ್ಲಿ ಎಂಜಿನಿಯರಿಂಗ್ ಓದುತ್ತಿದ್ದಾಗ ಜಬಲಪುರದಲ್ಲಿ 1061ರಲ್ಲಿ ಕೋಮು ಗಲಭೆಗಳು ನಡೆದವು. ನಾನು ತುಂಬಾನೇ ತೀವ್ರವಾಗಿ ಘಾಸಿಗೊಂಡೆ. ಆ ಗಲಭೆಗಳನ್ನು ತನಿಖೆ ಮಾಡಲು ತೀರ್ಮಾನಿಸಿದೆ. ಹಿಂಸೆಗೆ ದಾರಿ ಮಾಡಿಕೊಟ್ಟದ್ದು ಧರ್ಮಗಳ ಸಂಘರ್ಷವಾಗಿರದೆ ಹಿತಾಸಕ್ತಿಗಳ ಸಂಘರ್ಷವಾಗಿತ್ತು ಎನ್ನುವುದು ನನಗೆ ಮನವರಿಕೆಯಾಯಿತು. ನಾನು ತನಿಖೆ ಮಾಡಿದ ನಂತರದ ಗಲಭೆಗಳು ನನ್ನ ತೀರ್ಮಾನವನ್ನು ಸಮರ್ಥಿಸಿದವು. 1962ರಲ್ಲಿ ನಾನು ಮುಂಬೈಗೆ ಬಂದೆ. ಕೋಮುಸೌಹಾರ್ದ ನೆಲೆಸುವಂತೆ ಮಾಡುವುದೇ ನನ್ನ ಜೀವನದ ಧ್ಯೇಯವಾಯಿತು.

ಪ್ರ: ನಿಮ್ಮನ್ನು 'ಇಸ್ಲಾಮಿಕ್ ಸುಧಾರಕ' ಎಂದು ಕರೆಯಲಾಗುತ್ತದೆ. ಇದು ನಿಮಗೆ ಸಮ್ಮತವಾಗುವ ಪದವೆ?

ಉ: ಒಂದು ರೀತಿಯಲ್ಲಿ ಹೌದು. ಕುರಾನ್‌ನ ನಮ್ಮ ತಿಳಿವಳಿಕೆಯನ್ನು ಪುನರ್‌ಪರಿಶೀಲಿಸಬೇಕು ಎಂದು ನಾನು ನಂಬಿದ್ದೇನೆ. ನಾನು ಎಲ್ಲ ಧರ್ಮಗ್ರಂಥಗಳನ್ನು ಸಾಂದರ್ಭಿಕ ಹಾಗೂ ತಾತ್ವಿಕ ಎಂದು ಎರಡು ಭಾಗಗಳನ್ನಾಗಿ ವರ್ಗೀಕರಿಸುತ್ತೇನೆ. ತಾತ್ವಿಕವಾಗಿರುವ ಧರ್ಮಗ್ರಂಥದ ಮೌಲ್ಯಗಳು ಶಾಶ್ವತ ಹಾಗೂ ಸಾರ್ವತ್ರಿಕವಾಗಿ ಉಳಿಯುತ್ತವೆ. ಆಚರಣೆಗಳು ವಿಶಿಷ್ಟವಾಗಿರುತ್ತವೆ. ಹಾಗಾಗಿ ನೀವು ಮುಸ್ಲಿಂ ಇಲ್ಲಾ ಹಿಂದೂ ಇಲ್ಲಾ ಕ್ರಿಶ್ಚಿಯನ್ ಇಲ್ಲಾ ಬೌದ್ಧ ಇಲ್ಲಾ ಜೈನ್ ಎಂದು ಗುರುತಿಸಲ್ಪಡಬೇಕೆಂದು ಬಯಸಿದರೆ ಅದು ಆಚರಣೆಗಳಿಂದ ಮಾತ್ರ ಸಾಧ್ಯ, ಕೇವಲ ಮೌಲ್ಯಗಳಿಂದ ಅದು ಸಾಧ್ಯವಾಗಲಾರದು. ಧರ್ಮಗ್ರಂಥಗಳ ಸಾಂದರ್ಭಿಕ ಅರ್ಥವಿವರಣೆಗಳಲ್ಲಿ ಬದಲಾವಣೆಗಳಿಗೆ ಅವಕಾಶವಿರಬೇಕು.

ಆದ್ದರಿಂದ ಕುರಾನ್‌ನ ಮೌಲ್ಯಗಳು ಶಾಶ್ವತವಾಗಿದ್ದರೂ ಕುರಾನ್‌ನಲ್ಲಿ ನಿಶ್ಚಿತವಾಗಿಯೂ ಸಾಂದರ್ಭಿಕ ಹೇಳಿಕೆಗಳಿವೆ. ಉದಾಹರಣೆಗೆ ಅದು ಲಿಂಗ ಸಮಾನತೆ ಕುರಿತು ಪ್ರಸ್ತಾಪಿಸುತ್ತದೆ. ಆದರೆ ಅದು ಆಚರಣೆಯಲ್ಲಿ ಮುಸಲ್ಮಾನರಿಂದ ಎಂದೂ ಸ್ವೀಕೃತವಾಗಲಿಲ್ಲ, ಕಾರಣ ಅವರ ಪಿತೃಪ್ರಧಾನ ಹಾಗೂ ಪಾಳೆಯಗಾರಿ ಸಮಾಜದಲ್ಲಿ ಲಿಂಗ ಸಮಾನತೆ ಊಹಾತೀತವಾಗಿತ್ತು. ನಾವು ಎಷ್ಟೋ ಸಲ ಸಂಸ್ಕೃತಿಯನ್ನು ಧಾರ್ಮಿಕ ಚಿಂತನೆ ಜತೆ ಬೆರೆಸುತ್ತೇವೆ. ಆದರಿಂದಾಗಿ ಇಸ್ಲಾಮನ್ನು ಟೀಕಿಸುವವರು ಗೊಂದಲಕ್ಕೀಡಾಗುತ್ತಾರೆ.

ಪ್ರ: ಭಾರತೀಯ ಇಸ್ಲಾಮಿನೊಳಗೆ ಲಿಂಗ ಸಮಾನತೆಗಾಗಿ ಪ್ರಯತ್ನಿಸಿದ ನಿಮ್ಮ ಅನುಭವ ಎಂತಹದು?

ಉ: ಸಾಕಷ್ಟು ಪ್ರಗತಿಯಾಗಿದೆ ಎನ್ನುವುದನ್ನು ಯಾರೂ ಅಲ್ಲಗಳೆಯಲಾರರು. ಪರಿಸ್ಥಿತಿಗಳು ಶೀಘ್ರವಾಗಿ ಬದಲಾಗತೊಡಗಿವೆ. ಮುಲ್ಲಾಗಳು ಹೊರಡಿಸುವ ಫತ್ವಾಗಳ ಮೇಲೆ ಮಾಧ್ಯಮದ ಒತ್ತನ್ನು ಗಮನಿಸುವ ಪತ್ರಿಕೆಯ ಓದುಗರು ಇಲ್ಲಾ ಟಿ.ವಿ. ವೀಕ್ಷಕರಿರಬಹುದು. ಅವರು ಮುಸ್ಲಿಂ ಮಹಿಳೆಯರು 1400 ವರ್ಷಗಳ ಹಿಂದೆ ಹಿಂದುಳಿದ ಹಾಗೆಯೆ ಇಂದು ಸಹ ಹಿಂದುಳಿದಿದ್ದಾರೆ ಎಂದು ನಂಬಬಹುದು. ಅದು ಇಸ್ಲಾಂ ಅಂತರ್ಗತವಾಗಿ ಸಂಪ್ರದಾಯವಾದಿಯಾಗಿದೆ ಎನ್ನುವ ಭಾವನೆ ಮೂಡಿಸುತ್ತದೆ. ನಾನು ಅದನ್ನು ಅಲ್ಲಗಳೆಯುತ್ತೇನೆ. ಮುಸಲ್ಮಾನರಲ್ಲಿ ಮಧ್ಯಮ ಹಾಗೂ ಮೇಲ್‌ಮಧ್ಯಮ ವರ್ಗ ಶೀಘ್ರವಾಗಿ ಸುಶಿಕ್ಷಿತವಾಗುತ್ತಿದೆ, ಧರ್ಮ ಗುರುಗಳನ್ನು ಪ್ರಶ್ನಿಸುತ್ತಿದೆ. ಇತ್ತೀಚೆಗೆ ಮುಂಬೈಯಲ್ಲಿ ಮಹಿಳೆಯರು ಮನೆಯೊಳಗೇ ಉಳಿಯಬೇಕು, ಅವರು ಸಾರ್ವಜನಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಕೂಡದು ಎಂದು ಒಬ್ಬ ಧರ್ಮ ಗುರು ಫತ್ವಾ ಹೊರಡಿಸಿದಾಗ ಅವರು ಪತ್ರಿಕಾಗೋಷ್ಠಿಯನ್ನು ಏರ್ಪಡಿಸಿದರು. ಆ ಧರ್ಮಗುರುವಿನ ಭಾವಚಿತ್ರ ಇರಿಸಿದರು ಹಾಗೂ ಬೂಟುಗಳಿಂದ ಭಾವಚಿತ್ರಕ್ಕೆ ಬಾರಿಸಿದರು. ಇಂತಹ ಹಿಂಸೆಯ ಪ್ರದರ್ಶನವನ್ನು ನಾನು ಸಮ್ಮತಿಸುವುದಿಲ್ಲ. ಆದಾಗ್ಯೂ ಭಾವನೆ ಸುಸ್ಪಷ್ಟವಾಗಿತ್ತು.

ಪ್ರ: ಇದು ಗ್ರಾಮೀಣ ಭಾರತದಲ್ಲಿ ವಾಸ್ತವವೂ ಆಗಿದೆಯೆ?

ಉ: ಇಲ್ಲ, ಇದು ಹೆಚ್ಚಾಗಿ ಭಾರತದ ನಗರ ಪ್ರದೇಶ. ಅದರಲ್ಲೂ ಕೇವಲ ವಿದ್ಯಾವಂತ ಮಧ್ಯಮ ವರ್ಗದ ವಾಸ್ತವ. ನಗರಗಳಲ್ಲಿ ಹೆಚ್ಚಿನ ಸಂಖ್ಯೆಯ ಮುಸ್ಲಿಂ ಹೆಣ್ಣುಮಕ್ಕಳು ಇಂದು ಮನೆಗೆಲಸ ಇಲ್ಲ ಕೂಲಿನಾಲಿ ಮಾಡಿ ಅಷ್ಟಿಷ್ಟು ಗಳಿಸುತ್ತಿದ್ದಾರೆ.

ಪ್ರ: ನೀವು ಯಾವುದನ್ನು ಮಹಿಳೆಯರ ವಿಷಯವಾಗಿ ಸಾಮಾಜಿಕ ಬದಲಾವಣೆ ತರಬಲ್ಲ ಸಾಧನವೆಂದು ಭಾವಿಸುತ್ತೀರಿ?

ಉ: ಸೂಕ್ತ ಶಿಕ್ಷಣ ಎಂದು ಹೇಳಬಲ್ಲೆ. ನಾವು ಭಾರತೀಯ ವಿಧಿಪಕ್ಷಪಾತದ ಶಿಕ್ಷಣವನ್ನು ಸಮಸ್ಯೆಯ ಪರಿಹಾರಕ್ಕಿಂತ ಹೆಚ್ಚಾಗಿ ಅದರ ಅಂಗವೆಂದು ಭಾವಿಸುತ್ತೇನೆ. ಮಧ್ಯಕಾಲೀನ ಇತಿಹಾಸವನ್ನು ಹೇಗೆ ಕಲಿಸಲಾಗುತ್ತಿದೆ ಎನ್ನುವುದನ್ನೇ ನೋಡಿರಿ. ಎಲ್ಲ ಮುಸ್ಲಿಂ ಅರಸರು ಹಿಂದೂ ಮಂದಿರಗಳನ್ನು ಧ್ವಂಸ ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದರು. ಮಕ್ಕಳು ಇಂತಹ ಪೂರ್ವಗ್ರಹಗಳೊಂದಿಗೆ ಬೆಳೆಯುತ್ತಾರೆ. ಲಿಂಗ ಸಂಬಂಧಗಳನ್ನೇ ನೋಡಬಹುದು. ಇತ್ತೀಚೆಗೆ ನಾನು ನೋಡಿದ ಪಠ್ಯಪುಸ್ತಕದಲ್ಲಿ ಹೀಗೆ ಬರೆಯಲಾಗಿತ್ತು: ಒಬ್ಬ ಒಳ್ಳೆಯ ಗೃಹಿಣಿ ವಿಧೇಯ ಹೆಂಡತಿಯಾಗಿರುತ್ತಾಳೆ. ಅವಳು ಗಂಡನ ಸೇವೆ ಮಾಡುತ್ತಾಳೆ. ಮಕ್ಕಳು ಉಪಹಾರ ಸೇವಿಸಿ ಶಾಲೆಗೆ ಹೋಗಲಿ ಎಂದು ಸಮಯಕ್ಕೆ ಸರಿಯಾಗಿ ಅಡುಗೆ ಮಾಡುತ್ತಾಳೆ.

ಮದರಸಾಗಳು ಸಂಪ್ರದಾಯಗಳಿಗೆ ಕಟ್ಟು ಬಿದ್ದಿವೆ. ಅವು ಔರಂಗಜೇಬನ ಕಾಲದಲ್ಲಿ ರೂಪಿಸಿದ ಪಠ್ಯಕ್ರಮವನ್ನೇ ಬೋಧಿಸುತ್ತಿವೆ. ಮುಲ್ಲಾಗಳು ಬದಲಾಗಲು ಸಿದ್ಧರಿಲ್ಲ, ಮದರಸಾ ಶಿಕ್ಷಣದ ಆಧುನಿಕತೆಗಾಗಿ ಒತ್ತಾಯಿಸುತ್ತ ಬಂದಿದ್ದೇನೆ. ಆದರೆ ಮುಲ್ಲಾಗಳಿಗೆ ಆಧುನೀಕರಣ ಎಂದರೆ ಏನು? ಕಂಪ್ಯೂಟರ್‌ಗಳೆ? ಆದರೆ ಕಂಪ್ಯೂಟರಗಳು ಸಾಧನವಷ್ಟೇ. ಜ್ಞಾನವನ್ನು ಆಧುನೀಕರಿಸದಿರುವಾಗ ಕಂಪ್ಯೂಟರ್ ಆಧುನಿಕತೆಯ ಸಂಕೇತವಾಗಲಾರದು.

ಪ್ರ: ಪ್ರಯೋಗ ಮಾಡಬಯಸುವ ಮದರಸಾಗಳಿವೆಯೆ?

ಉ: ಇವೆ. ಅವು ಆಧುನೀಕರಣಗೊಂಡಿವೆ ಅಷ್ಟೇ ಅಲ್ಲ ಮದರಸಾ ನಿವಾಸಿಗಳನ್ನು ಜಾತ್ಯತೀತಗೊಳಿಸಿವೆ. ಅಲಹಾಬಾದ್‌ನಲ್ಲಿ ಒಂದು ಮದರಸಾ ಇದೆ. ಅಲ್ಲಿನ 40 ಪ್ರತಿಶತ ವಿದ್ಯಾರ್ಥಿಗಳು ಹಿಂದೂಗಳಾಗಿದ್ದಾರೆ. ಪಾಲಕರು ತಮ್ಮ ಮಕ್ಕಳನ್ನು ಅಲ್ಲಿಗೆ ಕಳಿಸುವುದೇಕೆಂದರೆ ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಣಕ್ಕಿಂತ ಮದರಸಾಗಳಲ್ಲಿ ಚೆನ್ನಾಗಿ ಬೋಧಿಸಲಾಗುತ್ತಿದೆ. ಮುಸ್ಲಿಮರು ಒಬ್ಬ ಸರ್ ಸೈಯದ್ (1875ರಲ್ಲಿ ಅಲಿಗಢ್ ಮುಸ್ಲಿಂ ಯುನಿವರ್ಸಿಟಿಯನ್ನು ಸ್ಥಾಪಿಸಿದ ಸರ್ ಸೈಯದ್ ಅಹಮದ್ ಖಾನ್)ರನ್ನು ರೂಪಿಸಿದರು. ಸರ್ ಸೈಯದ್‌ರ ಮುಖ್ಯ ಕಾಳಜಿ ಜಮೀನು ದಾರರು ಹಾಗೂ ಅವರ ಮಕ್ಕಳಾಗಿದ್ದರು. ಅಂಬೇಡಕರ್ ಬಡವರಲ್ಲೇ ಕಡುಬಡವರಿಗಾಗಿ ದುಡಿದರು. ಮುಸ್ಲಿಮರು ಈಗ ಒಬ್ಬ ಅಂಬೇಡಕರ್‌ರನ್ನು ರೂಪಿಸುವ ಅವಶ್ಯಕತೆ ಇದೆ.

ಪ್ರ: ಭಾರತದಲ್ಲಿ ಸಂಪ್ರದಾಯವಾದ ಹಾಗೂ ಜಾತ್ಯತೀತ ಪ್ರಜಾಪ್ರಭುತ್ವ ಹೇಗೆ ಪರಸ್ಪರ ಕಲೆತು ಕ್ರಿಯಾಶೀಲವಾಗುತ್ತಿವೆ?

ಉ: ಇಲ್ಲಿ ಎಲ್ಲ ಉಲೆಮಾ, ಪಾಕಿಸ್ತಾನ್ ಜಮಾತ್-ಎ-ಇಸ್ಲಾಮಿಗಿಂತ ತೀರ ಭಿನ್ನವಾದ ಜಮಾತ್-ಎ-ಇಸ್ಲಾಮಿ-ಎ-ಹಿಂದ್ ಸಹ, ಜಾತ್ಯತೀತತೆಯನ್ನು ಸ್ವಾಗತಿಸುತ್ತದೆ. ಅವರು ತಮ್ಮ ಸ್ವಾತಂತ್ರ್ಯವನ್ನು ಕೇವಲ ಜಾತ್ಯತೀತ ಭಾರತದಲ್ಲಿ ಮಾತ್ರ ಚಲಾಯಿಸಬಹುದು. ಒಮ್ಮೆ ಮಲೇಷ್ಯಾದಲ್ಲಿ ನನ್ನ ಉಪನ್ಯಾಸದ ನಂತರ ಒಬ್ಬ ಕೇಳಿದ: "ಬ್ರದರ್, ನೀವು ಮುಸ್ಲಿಮರೆ?" ಹೌದು, ಬಹುತೇಕ ಹಾಗೆಯೆ ಇದ್ದೇನೆ ಎಂದು ನಾನು ಹೇಳಿದೆ. "ಜಾತ್ಯತೀತ ಪ್ರಜಾಪ್ರಭುತ್ವವನ್ನು ನೀವು ಹೇಗೆ ಬೆಂಬಲಿಸುತ್ತೀರಿ? ಇಸ್ಲಾಮಿನಲ್ಲಿ ಜಾತ್ಯತೀತತೆ ಹರಾಮ್(ನಿಷಿದ್ಧ)ವಾಗಿದೆಯಲ್ಲ?" ಎಂದು ಅವನು ಕೇಳಿದ. "ಮುಸ್ಲಿಮರು ಬಹುಸಂ... ಗಿರುವ ದೇಶದಲ್ಲಿ ನೀವು ವಾಸಿಸುತ್ತಿದ್ದೀರಿ. ಸ... ಭಾರತಕ್ಕೆ ಬಂದು ನೆಲೆಸಿರಿ. ಜಾತ್ಯತೀತತೆ ಎಂದ... ಎನ್ನುವುದು ನಿಮಗೆ ಗೊತ್ತಾಗುತ್ತದೆ" ಎಂದು ನಾನು ... ಹಿತಾಸಕ್ತಿಗಳ ಆಟದಲ್ಲಿ ಜಿನ್ನಾ ನೇತೃತ್ವದ ಮುಸ್ಲಿಮರು ... ಭಾರತದಲ್ಲಿ ತಮಗೆ ಅಧಿಕಾರ, ನ್ಯಾಯ ಇಲ್ಲಾ ನೌ... ಸಿಗಲಾರವು, ಇಸ್ಲಾಮಿನ ಹೆಸರಿನಲ್ಲಿ ತಮಗಾಗಿ ... ದೇಶವನ್ನು ಪಡೆಯುವುದೇ ಸೂಕ್ತವೆಂದು ಭಾವಿಸಿದರು ... ಧರ್ಮವನ್ನು ಅನುಸರಿಸುವುದಕ್ಕೆ ಯಾವ ದೇಶದಲ್ಲಿ ... ಸ್ವತಂತ್ರರೋ ಆ ದೇಶದಲ್ಲಿ ವಾಸಿಸುವುದಕ್ಕೆ ಉಲೆಮಾ ... ನೀಡಿದರು. ಜಮೀಯತ್ ಉಲಮಾ-ಎ-... ಅಧಿಕೃ...ತ ವಿಭಜನೆಯ... ವಿರೋಧಿಸಿತು, ... ಹಾಗೂ ಜಾ... ಪ್ರಜಾ ಪ್ರಭುತ್ವ... ಬೆಂಬಲಿಸಿತು.

ಆ ಕಾರಣಕ... ವೈಯಕ್ತಿಕ ಕಾನೂನುಗಳು ಮುಂದುವರಿದಿ... ಲಿಂಗ ಕುರಿತ ಹೆ... ನ್ಯಾಯ ದೊರಕಿಸುವುದ... ಸಮಾನ ನಾಗರಿ... ಸಂಹಿತೆ ಒಂದು ... ಜತೆಗೆ ಇತರ ಅಪಾಯಗಳೂ ಇ... ಅಲ್ಪಸಂಖ್ಯಾತರಿಗೆ ಎಂದೂ ಒಪ್ಪಿಗೆಯಾಗದ ಸಂಹಿತೆಯೊಂದ... ರೂಪಿಸುವುದರಲ್ಲೇ ಕಾಲಹರಣ ... ಮಾಡುವುದಕ್ಕಿಂತ ಸಂಸ್ಕೃತಿಯ ಚೌಕಟ್ಟಿನೊಳಗೇ ಲಿಂಗ ಸಮಾನ... ಪ್ರಯತ್ನಿಸುವುದು ಹೆಚ್ಚು ಸೂಕ್ತ ... ನಾನು ಭಾವಿಸುತ್ತೇನೆ.

ಪ್ರ: ಬಹುತ್ವ ಹಾಗೂ ಪ್ರಜಾಪ್ರಭುತ್ವದ ಜತೆ ಇಸ್ಲಾಮಿ... ಹೊಂದಾಣಿಕೆ ಕುರಿತು ನೀವು ... ಸಾಕಷ್ಟು ಬರೆದಿದ್ದೀರಿ. ಅರಬ್ ... ಆರಂಭವಾದದ್ದನ್ನು ಗಮನಿಸಿದಾ... ನೀವು ಯೋಚಿಸಿದ್ದೇನು?

ಉ: ಇದೊಂದು ಶುಭ ಸ... ಮುಸ್ಲಿಮರು ಸಹ ಇತರರಂತೆ... ಪ್ರಜಾಪ್ರಭುತ್ವಕ್ಕಾಗಿ ಹಂಬಲಿಸು... ಎನ್ನುವುದನ್ನು ಮಧ್ಯ ಪ್ರಾಚ್ಯ ... ಅರಬ್ ಜಗತ್ತಿನಲ್ಲಿ ಜನತೆಯ ಬಂಡಾಯ ಸೂಚಿಸು... ಇಸ್ಲಾಂ ಮೂಲತಃ ಹಿಂಸಾತ್ಮಕ ಧರ್ಮ ಎನ್ನುವ ... ಆಪಾದನೆಯನ್ನೂ ಅದು ಸುಳ್ಳೆಂದು ಸಾಬೀತು ಮ... ಪ್ರತಿಭಟನೆಗಳು ಹಿಂಸಾತ್ಮಕ ರೂಪ ಪ... ಅದು ಸರ್ವಾಧಿಕಾರಿಗಳ ಬೆಂಬಲಿಗರಿಂ... ಇಲ್ಲಾ ಪಾಶ್ಚಿಮಾತ್ಯರ ಕೈವಾಡದಿಂದ...

ಪ್ರ: ಭಾರತ ಕಳೆದ ಎರಡು ದಶಕ... ಬಹುಸಂಖ್ಯಾತವಾದದತ್ತ ಬಲು ಶೀಘ್ರ... ಜಾರಿದೆ ಎಂದು ಅನಿಸುವುದಿಲ್ಲವೆ?

ಉ: ಹೌದು, ಅದು ಹೆಚ್ಚು ಬಹುಸಂಖ್ಯಾತವಾದಿಯಾಗಿದೆ. ಕಾಂಗ್ರೆ... ತತ್ವಗಳು ಜಾತ್ಯತೀತ ಹಾಗೂ ಪ್ರಜಾಸತ್ತಾತ್ಮಕವಾಗಿವೆ. ಆದರೆ ಪ್ರತಿಯೊ... ನೀತಿ ನಿರ್ಧಾರದ ಸಮಯದಲ್ಲಿ ಅದು ... ಕಡೆಗೆ ನೋಡುತ್ತಿದೆ–ಅದರ ಪ್ರತಿಕ್ರಿಯೆ... ಅಂದಾಜು ಮಾಡಿಕೊಳ್ಳಲು.

ನೋಡಿರಿ, ಮಧ್ಯಮ ವರ್ಗ ನೀತಿನಿರೂಪಣೆ... ಮಹತ್ವದ್ದಾಗತೊಡಗಿದೆ. ಮಧ್ಯಮ ವರ್ಗ ಬಿ.ಜೆ.ಪಿ... ಹೋಗುವ ಪ್ರವೃತ್ತಿ ಕಂಡುಬರುತ್ತಿದೆ–ಮೊದಲು ... ಹಿಂದುತ್ವಕ್ಕಾಗಿ ಬೆಂಬಲಿಸಬೇಕಾಯಿತು, ಎರಡನೆಯದಾಗಿ ಮೀಸಲಾತಿಗಳಿಂದ ತಮಗೆ ಅ... ಕಾದಿದೆ ಎನಿಸಿದ್ದು ಕಾರಣ. (ಅಣ್ಣಾ) ಹಜಾರೆ ಅವ... ಭ್ರಷ್ಟಾಚಾರ ವಿರೋಧಿ ಆಂದೋಲನವನ್ನೇ ನೋ...

ಅದು ಅಪ್ಪಟ ಮೇಲ್‌ಜಾತಿ ಮೇಲ್‌ವರ್ಗದ ... ಪ್ರದೇಶದ ಆಂದೋಲನವಾಗಿ ಆರಂಭಗೊಂಡಿತು ... ಪ್ರಾಯಶಃ ಪ್ರಜ್ಞಾಪೂರ್ವಕವಾಗಿ ಇಲ್ಲಾ ಅಪ್ರಜ್ಞಾಪೂರ್ವಕವಾಗಿ ಯೋಚನೆ ಏನೆಂದರೆ ಇ... (ಲೋಕಪಾಲ) ಬಿಲ್ ಮೇಲೆ ನಾವು ಒತ್ತಡ ಹೇರಬಹುದಾದರೆ ನಾಳೆ ಮೀಸಲಾತಿ ವಿಷಯವಾ... ನಾವು ಇದನ್ನೇ ಮಾಡಬಹುದು ಎನ್ನುವುದಾಗಿದೆ...

ಕನ್ನಡಕ್ಕೆ: ಹಸನ್ ನಯೀಂ ಸುರ...



ವಿಷದ ಸೀಸೆ

ಕತೆ

• ಸಂತೋಷ ಗುಡ್ಡಿಯಂಗಡಿ

ಆ ಪೇಟೆಯಲ್ಲಿ ರಂಗಯ್ಯನಿಗೆ ಪುಟ್ಟದೊಂದು ವಿಷದ ಸೀಸೆ ಬೇಕಾಗಿತ್ತು. ಪೇಟೆಯಲ್ಲಿ ಅಡ್ಡಾಡಿದ ಅಸಾಮಿಯಲ್ಲ, ಕುರಹಟ್ಟಿಯಲ್ಲಿದ್ದ ಏಕೈಕ 'ಮಲೆ ಮಹದೇಶ್ವರ ಜನರಲ್ ಸ್ಟೋರ್ಸ್' ರಂಗಯ್ಯನ ಕುಟುಂಬದ ಎಲ್ಲಾ ಅಗತ್ಯ ವಸ್ತುಗಳನ್ನು ಪೂರೈಸುತ್ತಿದ್ದರಿಂದ ನಂಜನಗೂಡಿನಂತಹ ಪೇಟೆ ಅವನನ್ನು ಕರೆಸಿಕೊಳ್ಳುವ ಮನಸ್ಸು ಮಾಡಿರಲಿಲ್ಲ. ಆ ಪೇಟೆಯಲ್ಲಿ ವಿಷದ ಸೀಸೆ ದೊರೆಯುವ ಸ್ಥಳ ತಿಳಿದಿಲ್ಲವಾದರೂ ಕೇಳುವುದಕ್ಕೆ ಅವನಿಗೆ ಮುಜುಗರ. ದಿಕ್ಕುತಪ್ಪಿ ಹೋಗುವಷ್ಟು ದೊಡ್ಡದೇನು ಅಲ್ಲದ ನಂಜನಗೂಡಿನಲ್ಲಿ ರಂಗಯ್ಯ ಅಲೆಯುತ್ತಿದ್ದಾನೆ. ಅಚ್ಚುಕಟ್ಟಾಗಿ ಕೂರಿಸಿದರೆ ಮೆಟ್ರೋದ ಕಾರ್‌ಪಾರ್ಕಿಂಗ್‌ನಲ್ಲಿ ಕೂಡಿಡುವಷ್ಟು ಅಂಗಡಿಗಳಿದ್ದವು. ಆದರೆ ಅವೋ... ಸಂದಿಗೊಂದಿಗಳಲ್ಲಿ ಚದುರಿಕೊಂಡು ಸ್ವತಂತ್ರವಾಗಿದ್ದವು; ಕೆಲವು ನಡೆದಾಡುತ್ತಲೂ ಇರುತ್ತವೆ.

ಇಂತಹ ನಂಜನಗೂಡಿನಲ್ಲಿ ಊರಿಗಿಂತ ತುಸು ದೊಡ್ಡದಾದ ಶಿವಾಲಯ. ಮಹಾ ಶಿವರಾತ್ರಿಯ ತಯಾರಿ ಭರ್ಜರಿಯಾಗಿಯೇ ನಡೆದಿದೆ; ನಾಳೆಯೇ ಶಿವರಾತ್ರಿ. ಕಪಿಲೆಯ ದಂಡೆಯಲ್ಲಿ, ಶಿವಾಲಯದ ಒಳಹೊರಗೆ ಭಕ್ತರ ಜಾತ್ರೆ ತರಾತುರಿಯಲ್ಲಿ ನಡೆದಾಡುತ್ತಿತ್ತು. ರಂಗಯ್ಯ ಒಂದಷ್ಟು ಹೊತ್ತು ಪೇಟೆಯ ಓಣಿಗಳಲ್ಲಿ ಓಡಾಡಿದವನು ಕಪಿಲೆಯಲ್ಲಿ ಮುಖ ತೊಳೆದು ಚುರುಚುರು ಬಿಸಿಲಿನಲ್ಲಿ ಶಿವಾಲಯದ ಕಡೆಗೆ ಹೆಜ್ಜೆ ಕಿತ್ತಿಟ್ಟ. ಸುತ್ತಲೂ ದಟ್ಟವಾಗಿ ಹರಡಿದ್ದ ಭಕ್ತಿಯ ಗೌಜಿನಲ್ಲಿ ಸೇರಿಕೊಂಡಿದ್ದ ಮಾತಿನ ಅರೆಬರೆ ತುಣುಕುಗಳು ರಂಗಯ್ಯನ ಕಿವಿಯ ಮೇಲೂ ಬಿದ್ದವು! "ಗಂಗಾ... ಉಚಿತ.... ನಾಳೆ... ಪವಿತ್ರ... ವಿತರಣೆ ಜಲ..." ಹೀಗೆ ಏನೇನೋ. ಅವನ ಮನಸ್ಸು ಮಾತ್ರ ಕಿವಿ ಮೇಲೆ ಬಿದ್ದವುಗಳನ್ನು ಮನಸ್ಸಿಗೆ ಹಾಕಿಕೊಳ್ಳದೆ ವಿಷ ಸಿಗುವ ಜಾಗ, ಕುರಹಟ್ಟಿಯಲ್ಲಿನ ಈಗಿನ ಲಕ್ಷಣವನ್ನು ಕಲ್ಪಿಸಿಕೊಳ್ಳುವುದಕ್ಕೆ ಹೆಣಗಾಡುತ್ತಿತ್ತು. ಶಿವಾಲಯದ ಎದುರಿನ ಡಾಂಬರು ರಸ್ತೆ ಬಿಸಿಲಿಗೆ ಮೈ ಕಾಯಿಸಿಕೊಂಡು ಬೆತ್ತಲೆ ಪಾದಗಳ ಸತ್ವ ಪರೀಕ್ಷೆ ಮಾಡಿ ಭಕ್ತರನ್ನು ನಂಜುಂಡೇಶ್ವರನ ಸನ್ನಿಧಿ ತಲುಪಿಸುತ್ತಿತ್ತು. ರಂಗಯ್ಯನೂ ಇದರಿಂದ ತಪ್ಪಿಸಿಕೊಳ್ಳಲಾರದೆ ನೆರಳಲ್ಲಿ ಕುಳಿತು ಆಲೋಚನೆಗೊಳಗಾದ.

'ಏಳಯ್ಯ!' ಎಂದವನೊಬ್ಬ ಏಳುವುದಕ್ಕಿಂತ ಮೊದಲೆ ತಳ್ಳಿಬಿಡುತ್ತಾನೆ. ತನ್ನ ದೇಹವನ್ನೇ ಮರೆತಿದ್ದ ರಂಗಯ್ಯನ ಮನಸ್ಸು ದೇಹದ ಸಮೇತ ಜಗುಲಿಯ ಕೆಳಕ್ಕೆ ಬೀಳುತ್ತದೆ. ಚಪ್ಪಡಿ ಕಲ್ಲಿನ ಅಂಚು ಮೊಣಕಾಲಿನ ಕೆಳಗೆ ಗಾಯಮಾಡಿ ರಕ್ತ ನೋಡುತ್ತದೆ. ಗಾಯಕ್ಕೆ ಒಂಚೂರು ಎಂಜಲು ಹಚ್ಚಿ ರಂಗಯ್ಯ ನಡೆಯುತ್ತಾನೆ. ಅವ ಕೂತಿದ್ದ ಜಾಗದಲ್ಲಿ ದೇವರ ಆಳುಗಳು ಸಣ್ಣದೊಂದು ರೆಡಿಮೇಡ್ ಅಂಗಡಿ ನೆಟ್ಟು ಪ್ಲಾಸ್ಟಿಕ್ ಬೋರ್ಡು ನೇತುಹಾಕಿದರು. ರಂಗಯ್ಯನಿಗೆ ಅವೆಲ್ಲವೂ ಕೂಡಿ ಬಣ್ಣ ಬಣ್ಣ ಕಂಡಿತು. 'ಗಂಗಾಜಲ ವಿತರಣೆ' ಮತ್ತೆ ಕಿವಿ ಮೇಲೆ ಬಿತ್ತು. ಮುಂಚೆ ಕಿವಿಯಲ್ಲಿದ್ದ ಅರೆಬರೆ ತುಣುಕುಗಳು ಈಗ ಬಿದ್ದ ಸದ್ದು ಗುಣಾಕಾರ ಭಾಗಾಕಾರ ವ್ಯವಕಲನ ಸಂಕಲನಗೊಂಡು 'ನಾಳೆ ಗಂಗಾಜಲ ವಿತರಣೆ... ಉಚಿತ!" ಎಂಬುದು ತಾಳೆಯಾಗುತ್ತದೆ.

ಯಾಕೋ ಏನೊ ವಿಷದ ಸೀಸೆಯ ಹುಡುಕಾಟಕ್ಕೆ ತಾತ್ಕಾಲಿಕ ವಿರಾಮ ಬಿದ್ದು ರಂಗಯ್ಯ ಹುರುಪಿನಿಂದಲೇ ನಡೆಯುತ್ತಾನೆ. ಅಷ್ಟೊತ್ತಿಗೆ ಹಸಿವು ನಿತ್ರಾಣಗಳು ದೇಹದೊಳಗೇ ಬಂಡೆದ್ದು ರಂಗಯ್ಯನ ವೇಗವನ್ನು ಜಗ್ಗೀಜಗ್ಗಿ ನಿಯಂತ್ರಿಸುತ್ತವೆ. ರೈಲು ನಿಲ್ದಾಣದಲ್ಲಿ ರಂಗಯ್ಯ ನಿಲುಗಡೆಯಾಗುತ್ತಾನೆ. ಅಲ್ಲಿ 'ಶುದ್ಧ ಕುಡಿಯುವ ನೀರು' ಕುಡಿದು ನಿದ್ರೆಯಾಗುತ್ತಾನೆ.

ಕುರಹಟ್ಟಿಯಲ್ಲಿ ರಂಗಯ್ಯನದು ಚಿಕ್ಕ ಸಂಸಾರ. ಉಣ್ಣುವುದಕ್ಕೆ ದಿನಾಲೂ ಮೂರು ಹೊಟ್ಟೆ. ಆದರೂ ಹಟ್ಟೆ ಮಾತ್ರ ಯಾವಾಗಲೂ ಪ್ರತಿಭಟನಾ ನಿರತವಾಗಿರುತ್ತಿದ್ದವು. ಇದ್ದ 'ಅರ್ಧ ಎಕರೆ ಬಾಳೆತೋಟ'ವನ್ನು ನೀರು ಬಹಿಷ್ಕರಿಸಿದ್ದವು; ಬಾಳೆತೋಟವನ್ನಷ್ಟೇ ಅಲ್ಲ ಕುರಹಟ್ಟಿಯನ್ನೇ! ಹೆಂಡತಿ ಸಾಕಮ್ಮನೋ ಕ್ಯಾನ್ಸರಿನ ಜೊತೆಯ ಗುದ್ದಾಟದಲ್ಲಿ ಹಣ್ಣಾಗಿ ಬರಿಯುವಂತಿದ್ದಳು; ರೋಗ ಪತ್ತೆ ಮಾಡಲಾಗದ ದುಗ್ಗಿಮಾರಮ್ಮನ ಪೂಜಾರಿ ಭಂಡಾರವನ್ನು ಖಾಲಿ ಮಾಡಿಬಿಟ್ಟಿದ್ದ. ಇದ್ದೊಂದು ಮಗು ಶಾಲೆಯ ಬಿಸಿಯೂಟಕ್ಕೆ ಹುಟ್ಟಿದ್ದೇನೋ ಅನ್ನೋವಂಗೆ 'ಸಂ..ದೇ..' ಬಿಟ್ಟು ಬಿಸಿಯೂಟ ತಪ್ಪಿಸಿಕೊಂಡಿದ್ದೇ ಇಲ್ಲ.

ದೇಹದೊಳಗಿನ ದಂಗೆಯನ್ನೇ ಹತ್ತಿಕ್ಕಲಾಗದ ರಂಗಯ್ಯ ಹಟ್ಟಿಯ ಒಳಹೊರಗಿನ ಸಾಮೂಹಿಕ ಪ್ರತಿಭಟನೆಗೆ ಮೌನಿಯಾಗಿದ್ದ. ಸಾಲಮನ್ನಾದ ಕಾನೂನು ಜಾರಿಯಾಗುತ್ತಲೇ ಕುರಹಟ್ಟಿಯ ಏಕೈಕ ಮಲೆ ಮಹದೇಶ್ವರ ಜನರಲ್ ಸ್ಟೋರ್ಸ್ ಸಾಲ ನೀಡುವುದನ್ನು ರದ್ದು ಪಡಿಸಿ ತನ್ನದೇ ಆದ ವಸೂಲಿ ಕಾನೂನನ್ನು ಜಾರಿ ಮಾಡಿ ರಂಗಯ್ಯನ ಅರ್ಧ ಎಕರೆ ಬಾಳೆತೋಟವನ್ನು ಮುಟ್ಟುಗೋಲು ಹಾಕುವ ಯೋಜನೆ ಹೆಣೆದಿತ್ತು.

ಈ ಎಲ್ಲಾ ಜೈವಿಕ ಕಾರಣಗಳಿಂದಾಗಿ ರಂಗಯ್ಯನ ಮನಸ್ಸು ಕೀಟನಾಶಕದ ಕೆಟ್ಟುಪಯೋಗದ ಬಗ್ಗೆ ಸಲಹೆ ನೀಡಿತ್ತು. ರಂಗಯ್ಯ ತನಗಿದ್ದ ಎಲ್ಲಾ ಸೆಂಟಿಮೆಂಟಲ್ ಇನ್‌ಫ್ಲೂಯೆನ್ಸ್ ಬಳಸಿಕೊಂಡು ಮಲೆ ಮಹದೇಶ್ವರ ಜನರಲ್ ಸ್ಟೋರ್ಸ್‌ನಲ್ಲಿ ಕೀಟನಾಶಕಕ್ಕೊಂದು ಅಲಿಖಿತ ಅರ್ಜಿ ಗುಜರಾಯಿಸಿದ್ದ. ಆದರೆ ಸಾಲದ ಅರ್ಜಿ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ತಿರಸ್ಕೃತಗೊಂಡು ಬಿಟ್ಟಿತ್ತು.

ನಿದ್ರೆಹೋಗಿದ್ದ ರಂಗಯ್ಯನನ್ನು ರೈಲ್ವೇ ಸೊಳ್ಳೆಗಳು ಸ್ವಲ್ಪ ಹೊತ್ತು ಪರೀಕ್ಷೆ ನಡೆಸಿ ಶಿವಾಲಯದ ಬೀದಿಯ ಕಡೆ ಹೊರಟುಹೋಗಿದ್ದವು. ಮೈಸೂರಿನಿಂದ ಬಂದ ಬೆಳಗಿನ ರೈಲು ನಂಜನಗೂಡಿನಲ್ಲಿ ಸೂರ್ಯನ ಬೆಳಕನ್ನು ಬಿಟ್ಟು ಚಾಮರಾಜನಗರಕ್ಕೆ ಹೊರಟು ಹೋಯ್ತು. ಬೆಳಕಾದ ನಂಜನಗೂಡಿನಲ್ಲಿ ರಂಗಯ್ಯನ ಕಣ್ಣುಗಳು ತೆರೆದುಕೊಂಡವು. ಮತ್ತೆ ರೈಲ್ವೇ ಶುದ್ಧ ಕುಡಿಯುವ ನೀರು.

ರಂಗಯ್ಯ ಶಿವಾಲಯದ ಕಡೆಗೆ ನಡೆಯುತ್ತಾನೆ. ದೇವರ ಆಳುಗಳು. ಭಕ್ತರು ಶಿವರಾತ್ರಿಯ ಸಂಭ್ರಮದಿಂದಾಗಿ ಅಲ್ಲಲ್ಲೇ ಸುತ್ತುವರೆಯುತ್ತಿದ್ದರು. ನೂರಾರು ಸದ್ದುಗಳು, ಗೌಜುಗಳು ತೆರೆದುಕೊಳ್ಳುತ್ತಿದ್ದಂತೆ. ಬಿಸಿಲು ತನ್ನ ಇರುವಿಕೆಯನ್ನು ಸ್ಪಷ್ಟವಾಗಿ ಖಚಿತಪಡಿಸಿಕೊಂಡಿತ್ತು. ಸಾವಿರಾರು ಭಕ್ತರ ಸಮೂಹದಲ್ಲಿ ರಂಗಯ್ಯ ಏಕಾಂಗಿಯಾಗಿ ನಡೆದು ರೆಡಿಮೇಡ್ ಅಂಗಡಿಯ ಪಕ್ಕದಲ್ಲಿ ಕೂತುಬಿಡುತ್ತಾನೆ. ಭಕ್ತಿಯ ಗೌಜು ರಂಗಯ್ಯನನ್ನು ವಿಚಲಿತಗೊಳಿಸಲಿಲ್ಲ. ಅವನನ್ನು ಕದಲಿಸಿದ್ದು ಮೈಕು. ಆ ಗದ್ದಲದಲ್ಲಿ ಮೈಕು ತನ್ನನ್ನು ಸ್ಥಾಪಿಸಿಕೊಂಡಿದ್ದೇ ಬಣ್ಣದ ಅಂಗಡಿಯಲ್ಲಿ ದೇವರ ಆಳುಗಳು ಪ್ರತ್ಯಕ್ಷ. ರಂಗಯ್ಯ ಎದ್ದು ನಿಂತ. ಚದುರಿಕೊಂಡಿದ್ದ ಭಕ್ತರು ಅವನ ಹಿಂದೆ ಸಾಲಾಗುತ್ತಿದ್ದಂತೆ ದೇವರ ಆಳೊಬ್ಬ ರಂಗಯ್ಯನ ಕೈಮೇಲೆ ಪುಟ್ಟದೊಂದು ಸೀಸೆಯಿಟ್ಟು ಮುಂದೆ ಕಳುಹಿಸುತ್ತಾನೆ. ಅಷ್ಟರಲ್ಲಿ ಅಸಾಧ್ಯ ನೂಕಾಟವು ಸಾಲನ್ನು ಛಿದ್ರಗೊಳಿಸಿಬಿಟ್ಟಿತ್ತು. ಪೊಲೀಸರ ಲಾಠಿಯ ಇರುವಿಕೆಗೆ ಮತ್ತೆ ಸಾಲು ಸಾಲಾಯಿತು.

ಹೊಟ್ಟೆಯ ತುಂಬಾ ಕಪಿಲೆಯ ನೀರಿಟ್ಟುಕೊಂಡು ರಂಗಯ್ಯ ಕುರಹಟ್ಟಿ ತಲುಪಿದಾಗ ಶಿವರಾತ್ರಿಯ ಜಾಗರಣೆ ಮುಗಿಸಿದ್ದ. ಮತ್ತೆ ಮೈಸೂರಿಂದ ಬಂದ ರೈಲು ಬೆಳಕನ್ನು ತುಂಬಿ ಬದನವಾಳನ್ನು ಬಿಟ್ಟು ಹೋಗುತ್ತಿರುವುದಕ್ಕೆ ಕೂಗುತ್ತಿತ್ತು. ಹಟ್ಟಿಯ ಹೊಕ್ಕವನೆ ಸೀಸೆಯ ನಾಲ್ಕಾರು ಹನಿಯಿಂದ ಸಾಕಮ್ಮನ ಬಾಯಿ ಪಸೆ ಆರಿಸಿದ. ಮತ್ತೆ ಬಿಂದಿಗೆ ಹಿಡಿದು ಮಗುವೊಂದಿಗೆ ರಂಗಯ್ಯ ಅ.ಎ.ತೋ. ಕಡೆಗೆ ನಡೆಯುತ್ತಾನೆ. ಹೇಗೋ ಒಂದರ್ಧ ಬಿಂದಿಗೆ ನೀರು ಸಂಪಾದಿಸಿ ಅದಕ್ಕೆ ಗಂಗಾಜಲ ಬೆರೆಸಿ ಹೊಲದಲ್ಲಿ ಸಿಂಪಡಿಸಿದ.

ಅಪ್ಪ ಮಗು ಹಟ್ಟಿಯತ್ತ ಬರುವಾಗ ಕುರಹಟ್ಟಿಯ ಸಹಾನುಭೂತಿಗಳು ನೆರೆದು ಸಾಕಮ್ಮನ ಗುಣಗಾನದಲ್ಲಿ ಸಮಯ ಮಾಡಲು ಕಣ್ಣೀರು ಹರಿಯಬಿಡುತ್ತಿದ್ದರು; ಅಂತೂ ರಂಗಯ್ಯ ಬಂದ. ಎಲ್ಲ ಸದ್ದುಗಳು ನಿಶ್ಶಬ್ದದ ಮನೆಹೊಕ್ಕು ನಿರಾಳವಾದವು. ಕುರಹಟ್ಟಿಯಲ್ಲಿ ತಾನೊಬ್ಬನೆ ಗಂಗಾಜಲ ಪಡೆದವನು, ಇವರೆಲ್ಲ ಗಂಗೆಗಾಗಿ ನೆರೆದರೇನೋ? 'ಛೆ! ಎಂದುಕೊಂಡ ರಂಗಯ್ಯನ ಮನಸ್ಸು ನೀನೆಲ್ಲವನ್ನು ಚೆಲ್ಲಿಬಿಟ್ಟೆಯಲ್ಲ!!' ಎಂದು ಗದರಿತು.

ಸಾಕಮ್ಮ ಬದುಕು ಬಿಡಿಸಿಕೊಂಡು ಹೋಗಿದ್ದಳು. ಯಾರೋ ದೇವರ ಆಳುಗಳು ದಡದಡನೆ ಬಂದವರು ಎಳೆದು ಬಡಿದು ನೆಲಕ್ಕೆ ಹಾಕಿ ತುಳಿಯುತ್ತಾರೆ. ರಂಗಯ್ಯನ ದೇಹಕ್ಕದು ಅಗತ್ಯಕ್ಕಿಂತ ಜಾಸ್ತಿಯೇ. ಸ್ವಲ್ಪ ಹೊತ್ತು ಕೊಸರಾಡಿ ಹೆಂಡತಿಗೆ ಜೊತೆಯಾದ. ಮಗು ಮಾತ್ರ ಅಳುವಾಗಿತ್ತು. ದೇವರ ಆಳುಗಳು ಬಂದಷ್ಟೇ ವೇಗದಲ್ಲಿ ಕರಗಿಹೋದರು. ಏನು ನಡೆಯಿತು ಎಂಬುದು ಅಲ್ಲಿದ್ದ ಯಾರ ಅರಿವಿಗೂ ನಿಲುಕದೆ ಪ್ರಶ್ನೆಗಳೇ ಕಣ್ಣುಗಳಿಂದ ಕಣ್ಣುಗಳಿಗೆ ಪಾಸಾಗುತ್ತಿದ್ದರೆ ಸದ್ದುಗಳೆಲ್ಲ ಮಗುವಿನ ಅಳುವಿನಲ್ಲಿ ಲೀನಗೊಂಡವು. ಕುರಹಟ್ಟಿಯ ಏಕೈಕ ಮ.ಮ.ಜ. ಸ್ಟೋರ್‌ನ ಬಂಗಾರಸೆಟ್ಟಿಯ ಚಿನ್ನಲೇಪಿತ ದೇಹವು ಅಲ್ಲಿಗಾಗಮಿಸಿ ಹಟ್ಟಿಯೊಳಗೆ ನುಗ್ಗಿ ಏನೇನೋ ತಡಕಾಡಿ ಮಾಸಿದ ಕಾಗದಪತ್ರವನ್ನು ವಶಪಡಿಸಿಕೊಂಡು ಹೊರಬಂದಿತು. ಗಾಳಿಯಲ್ಲಿ ಹರಿದಾಡುತ್ತಿದ್ದ ಪ್ರಶ್ನೆಗಳನ್ನು ಬಂಗಾರಶೆಟ್ಟಿಯ ಮೂಗು ಉಸಿರಾಡಿ ಬಾಯಿ ಉತ್ತರವನ್ನು ಉಗುಳಿತು.

ಕುರಹಟ್ಟಿಯ ಸಹಾನುಭೂತಿಗಳಿಗೆಲ್ಲ ರಂಗಯ್ಯನ ದೈವದ್ರೋಹದ ಧಾರ್ಮಿಕ ಕಾರಣಗಳು ಅರಿವಾಗಿ ಗುಜುಗುಜು ಸದ್ದುಗಳು, ಮಳೆಗಾಲ ಅಣಬೆಯಂತಿದ್ದು ಮಂದಿ ಕರಗತೊಡಗಿದರು. ರಂಗಯ್ಯ ಗಂಗಾಜಲವನ್ನು ಮಣ್ಣಿಗೆ ಹಾಕಿ ದೇವರ ದ್ರೋಹ ಕಟ್ಟಿಕೊಂಡದ್ದು, ಸಾಕಮ್ಮ ಸಕಾರಣಕ್ಕಾಗಿಯೇ ಹೆಣವಾದದ್ದು, ರಂಗಯ್ಯನ ದೇವರ ಆಳುಗಳು ಬಡಿದದ್ದು ಸರಿಯೆ ಇರಬಹುದು ಎಂಬ ಸಂಶಯಾಸ್ಪದ ಅನುಮಾನಗಳ ಮುದ್ದೆಯಾಗಿ ನಿಪ್ಪದಲ್ಲಿ ನಡೆದುಬಿಟ್ಟರು ಕುರಹಟ್ಟಿಯ ಸಹಾನುಭೂತಿಗಳು.

ಆದರೆ ಈ ದ್ಯಾವನೂರಿನ ಚನ್ನನ ಮಗನಿಗೆ ಸಂಶಯದ ಪರ್ವತವೇ ತಲೆ ಮೇಲೆ ನಿಂತು ತಾಳಲಾರದೆ ಭಾರವಾಗಿ ಕೂತಿದ್ದವನು. ರಂಗಯ್ಯನ ಮಗುವನ್ನು ಸಮಾಧಾನಿಸುವ ಕಾರಣಕ್ಕಾಗಿ ತೊಡೆಯುತ್ತಾನೆ. ಕೊನೆಗೂ ಅಳುವು ತನ್ನನ್ನು ನಿಯಂತ್ರಿಸಿಕೊಂಡು ಮಗುವನ್ನು ಚನ್ನನ ಮಗನೊಂದಿಗೆ ಮಾತಿಗೆ ದೂಡಿತು.

ಚನ್ನನ ಮಗ: ಗಂಗಾಜಲವನ್ನು ಮಣ್ಣಿಗೆ ಚೆಲ್ಲಿದ್ಯಾಕೆ?

ರಂಗಯ್ಯನ ಮಗ: ನಮ್ಮೂರಲ್ಲಿ ಮಳೆಯಿಲ್ಲದ್ದು ಗೊತ್ತಲ್ಲ.

ಚನ್ನನ ಮಗ: ಗೊತ್ತು.

ರಂಗಯ್ಯನ ಮಗ: ನಮ್ಮವ್ವನಿಗೆ ಗುಣಪಡಿಸಲಾಗದ ರೋಗ ಗೊತ್ತಲ್ಲ.


ಚನ್ನನ ಮಗ: ಗೊತ್ತು.

ರಂಗಯ್ಯನ ಮಗ: ನಮ್ಮ ತೋಟದ ಬಾಳೆ ಒಣಗಿರುವುದು ಗೊತ್ತಲ್ಲ.

ಚನ್ನನ ಮಗ: ಗೊತ್ತು.

ರಂಗಯ್ಯನ ಮಗ: ಅದಕ್ಕೆ ಅಪ್ಪ, ಅವ್ವನ ರೋಗ ಗುಣ ಆಗಲಿ. ಮಳೆ ಬಂದು ನಮ್ಮೂರಿಗೆಲ್ಲ ನೀರಾಗಲಿ. ನಮಗೆಲ್ಲ ಉಣಲಿಕ್ಕೆ ಸಿಗಲಿ ಅಂತ ಪವಿತ್ರ ಗಂಗಾಜಲ ಹೊಲದಲ್ಲಿ ಸಿಂಪಡಿಸಿದ್ದ.

ಆ ದ್ಯಾವನೂರಿನ ಚನ್ನನ ಮಗ ಎದ್ದುನಿಂತ ರಂಗಯ್ಯನ ಮಗುವಿನ ಜೊತೆ.



ನನ್ನ ತೋಟ ಮತ್ತು ಲಂಕೇಶರ ಸಮಯಪ್ರಜ್ಞೆ

ಲಂಕೇಶರು ಸಾಮಾನ್ಯವಾಗಿ ಪ್ರತಿದಿನ ತೋಟಕ್ಕೆ ಹೋಗಿಬರುತ್ತಿದ್ದರು. ಅವರ ಆರೋಗ್ಯ ಚೆನ್ನಾಗಿದ್ದಾಗ ಅವರು ತೋಟಕ್ಕೆ ಹೋಗದೇ ಇದ್ದ ದಿನ ಬಹಳ ಅಪರೂಪ. ಅಷ್ಟು ಹೊತ್ತಿಗೆ ಕಾಲೇಜು ತೊರೆದಿದ್ದ ನಮ್ಮ ಮಗ ಅಜಿತು ತೋಟದ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳಲು ಮುಂದಾದ. ಅದಕ್ಕೆ ಲಂಕೇಶರೂ ಒಪ್ಪಿದರು. ಆದರೆ ಅಜಿತು ತೋಟದ ಕೆಲಸದವರಿಗೆ ಒಂದು ಕೆಲಸ ಹೇಳಿ ಬಂದರೆ ಲಂಕೇಶರು ಅದೇ ಕೆಲಸಗಾರರಿಗೆ ಮತ್ತೊಂದು ಕೆಲಸ ಹೇಳಿ ಬರುತ್ತಿದ್ದರು. ಇದರಿಂದಾಗಿ ಅಪ್ಪ ಮಗನ ನಡುವೆ ಸಣ್ಣಪುಟ್ಟ ತಿಕ್ಕಾಟ ಪ್ರಾರಂಭವಾಯಿತು. "ನನ್ನ ಮಾತನ್ನು ತೋಟದ ಕೆಲಸದವರು ಕೇಳುವುದಿಲ್ಲ" ಎಂದು ಅಜಿತು ರೇಗುತ್ತಿದ್ದ. ಕೊನೆಗೆ ತೋಟವನ್ನು ತನ್ನ ಹೆಸರಿಗೆ ಬರೆದುಕೊಡಬೇಕೆಂದು ಅಜಿತು ಹಠ ಹಿಡಿದ. ಅದರಂತೆ ಒಂದು ದಿನ ಲಂಕೇಶರು, ಗೌರಿ, ಬೇಬಿ, ಅಜಿತು ಮತ್ತು ನಾನು ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ತೋಟವನ್ನು ಅವನ ಹೆಸರಿಗೆ ಮಾಡಿಸಿ ಬಂದೆವು.

ಅಜಿತು ತನ್ನ ವಾಸ್ತವ್ಯವನ್ನು ತೋಟಕ್ಕೆ ವರ್ಗಾಯಿಸಿದ. ಅವನಿಗೆಂದು ನಾನು ತೋಟದ ಮನೆಯಲ್ಲಿ ಅಗತ್ಯವಾದ ಸಾಮಾನುಗಳನ್ನು ಇಟ್ಟುಬಂದೆ. ಅಜಿತು ತೋಟದಲ್ಲಿ ಹೈನು ಗಾರಿಕೆ, ನರ್ಸರಿ, ಮೊಲ ಸಾಕಾಣಿಕೆ ಇತ್ಯಾದಿ ಪ್ರಯೋಗಗಳನ್ನು ಮಾಡಿ ನೋಡಿದ. ಅದ್ಯಾವುದೂ ಏಳಿಗೆ ಆಗಲಿಲ್ಲ. ಸ್ವಲ್ಪ ದಿನಗಳ ನಂತರ ಅವನು ತೋಟದ ಮನೆಯನ್ನು ಬಿಟ್ಟು ನಮ್ಮ ಮನೆಗೆ ವಾಪಸ್ ಬಂದ.

ಲಂಕೇಶರು ಮಾಡಿದ್ದ ಹನ್ನೊಂದು ಎಕರೆ ತೋಟವನ್ನು ನಮ್ಮ ಮಗನ ಹೆಸರಿಗೆ ವರ್ಗಾಯಿಸಿದ ಮೇಲೆ ನಮ್ಮ ಹೆಣ್ಣುಮಕ್ಕಳಿಗೆ ತೋಟ ಇಲ್ಲದಂತಾಗುತ್ತಲ್ಲ ಎಂದು ನನಗನ್ನಿಸಿತು. ಆಗ ನಾನು ನನ್ನ ಸೀರೆ ವ್ಯಾಪಾರದಿಂದ ಬಂದಿದ್ದ ಹಣದಿಂದ ನೆಲಮಂಗಲದ ಹತ್ತಿರ ಐದು ಎಕರೆ ಹೊಲ ವನ್ನು ಖರೀದಿಸಿದೆ.

ನನಗಿಂತ ಮುಂಚೆ ಆ ಭೂಮಿಯ ಒಡೆಯರಾಗಿದ್ದವರು ಅಲ್ಲಿ ರಾಗಿ ಬೆಳೆಯುತ್ತಿದ್ದರು. ಅದು ಸಮತಟ್ಟಾದ, ಚೌಕಾಕಾರದಲ್ಲಿದ್ದ ಜಾಗ. ಅಲ್ಲಿ ಒಂದು ತೋಟ ಮಾಡುವ ಆಶೆ ನನ್ನದು. ಪ್ರತಿ ಭಾನುವಾರ ಅಂಗಡಿಗೆ ರಜಾ ಇರುತ್ತಿದ್ದರಿಂದ ನಾನು ಅವತ್ತು ನನ್ನ 'ಹೊಲ'ಕ್ಕೆ ಹೋಗುತ್ತಿದ್ದೆ. ಬೆಳಗಿನ ತಿಂಡಿ, ಮಧ್ಯಾಹ್ನದ ಊಟ ಕಟ್ಟಿಕೊಂಡು ಆರು ಗಂಟೆಯ ಹೊತ್ತಿಗೆ ನಾನು ಅಲ್ಲಿರುತ್ತಿದ್ದೆ. ಬೇಲಿ ಹಾಕಿಸುವುದು, ತೋಟದ ಅಂಚಿನಲ್ಲಿ ಟೀಕ್ ಸಸಿ ನಡೆಸುವುದು ಇತ್ಯಾದಿ ಕೆಲಸಗಳನ್ನು ಪ್ರಾರಂಭಿಸಿದೆ. ತೋಟ ನೋಡಿಕೊಳ್ಳುವವ ರಿಗೆಂದು ಒಂದು ಚಿಕ್ಕ ಮನೆ ಕಟ್ಟಿಸಿದೆ. ಬೋರ್‌ವೆಲ್‌ಗೆ ಜಿಯಾಲಿಜಿಸ್ಟ್ ಒಬ್ಬರಿಂದ ಪಾಯಿಂಟ್ ಮಾಡಿಸಿ ಬೋರ್‌ವೆಲ್ ಕೊರೆಸಿದೆ. ನೀರು ಬರಲಿಲ್ಲ. ಅಷ್ಟುಹೊತ್ತಿಗೆ ನನ್ನ ಕೈ ಬರಿದಾಗಿತ್ತು. ನೀರು ಬಾರದಿದ್ದರಿಂದ ಬಹಳ ಬೇಜಾರಾಗಿ ಇನ್ನು ನಾಲ್ಕು ತಿಂಗಳ ಕಾಲ ಏನು ಮಾಡು ವುದೂ ಬೇಡ ಎಂದು ಸುಮ್ಮನಾದೆ.

ಆಮೇಲೆ ಅರಕೆರೆಯಿಂದ ವಾಚ್ ಹಿಡಿದು ಪಾಯಿಂಟ್ ನೋಡುವವರನ್ನು ನನ್ನ ಪರಿಚಯದ ಒಬ್ಬರು ಕರೆದುಕೊಂಡು ಬಂದರು. ಆತ ಎರಡು ಕಡೆ ಪಾಯಿಂಟ್ ತೋರಿಸಿದ. ಮೊದಲನೇ ಪಾಯಿಂಟ್‌ನಲ್ಲೇ ಮೂರು ಇಂಚು ನೀರು ಬಂತು. ಅರಕೆರೆಯಿಂದಲೇ ತೆಂಗಿನಸಸಿ ತರಿಸಿ ನೆಡಿಸಿದೆ. ಕಲ್ಲಪ್ಪ ಎಂಬುವವರನ್ನು ತೋಟ ನೋಡಿಕೊಳ್ಳಲು ನೇಮಿಸಿದೆ. ಆತ ತುಂಬಾ ಒಳ್ಳೆಯ ಕೆಲಸಗಾರ. ಎಲ್ಲ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದ. ಬೋರ್‌ವೆಲ್‌ಗೆಂದು ಕರೆಂಟ್ ಕನೆಕ್ಷನ್‌ಗೆ ಅರ್ಜಿ ಹಾಕಿದೆ. ಒಂದು ತಿಂಗಳಲ್ಲಿ ಕರೆಂಟ್ ಕನೆಕ್ಷನ್ ಕೊಡುತ್ತೇವೆ ಎಂದಿದ್ದವರು ಎಷ್ಟು ದಿನವಾದರೂ ಕೊಡಲಿಲ್ಲ. ಆಗ ಹೇಗೂ ಮಳೆಗಾಲ ಇದ್ದದ್ದರಿಂದ ಪರ ವಾಗಿಲ್ಲ ಅಂತ ಸುಮ್ಮನಾದೆ. ನಾಲ್ಕು ತಿಂಗಳಾದರೂ ಕರೆಂಟ್ ಮಂಜೂರು ಆಗಲಿಲ್ಲ. ಅದಕ್ಕಾಗಿ ಅಲೆದೂ ಅಲೆದೂ ನನಗೆ ಸಾಕಾಯಿತು. ಮಳೆಗಾಲ ಮುಗಿದಿದ್ದರಿಂದ ನಾನು ಹಾಕಿಸಿದ್ದ ತೆಂಗಿನ ಸಸಿಗಳು ಬಾಡಲಾರಂಭಿಸಿದವು.

ನನ್ನ ಜಮೀನಿನ ಹತ್ತಿರ ಒಂದು ಹೊಂಡ ಇದೆ. ನಾನು 20 ಜನ ಕೂಲಿಯವರನ್ನು ಕರೆದು ಆ ಹೊಂಡದಿಂದ ಬಿಂದಿಗೆಯಲ್ಲಿ ನೀರು ತರಿಸಿ ತೆಂಗಿನ ಸಸಿಗಳಿಗೆ ಹಾಕಿಸಿದೆ. ಸ್ವಲ್ಪ ದಿನ ಊರಿನವರು ಸುಮ್ಮನಿದ್ದರು. ಆದರೆ ಅವರೆಲ್ಲ ಒಂದು ದಿನ ಬಂದು "ನೀವು ನಿಮ್ಮ ತೋಟಕ್ಕೆ ಹೊಂಡ ದಿಂದ ನೀರು ಹಾಕಿಸಿದರೆ ನಾಳೆ ನಮ್ಮ ದನಗಳಿಗೆ ಹೊಂಡದಲ್ಲಿ ನೀರು ಇರುವುದಿಲ್ಲ" ಎಂದು ನನ್ನೊಂದಿಗೆ ಜಗಳಕ್ಕೆ ನಿಂತರು. ಅವರು ಹೇಳಿದ್ದು ನ್ಯಾಯವಾಗೇ ಇತ್ತು. ವಿಧಿ ಇಲ್ಲದೆ ಕೆಇಬಿ ಅಧಿಕಾರಿಗಳಿಗೆ ಲಂಚ ಕೊಟ್ಟು ನನ್ನ ತೋಟಕ್ಕೆ ಕರೆಂಟ್ ಕನೆಕ್ಷನ್ ಪಡೆದೆ. ಅದರಿಂದಾಗಿ ತೆಂಗಿನಸಸಿಗಳು ಬದುಕುಳಿದವು.

ತೆಂಗಿನಸಸಿಗಳು ಬೆಳೆಯುವ ಮುನ್ನ ನಾನೂ ಇತರರಂತೆ ಅಲ್ಲಿ ರಾಗಿ, ಜೋಳ, ಹಸಿರುಕಾಳು ಇತ್ಯಾದಿಗಳನ್ನು ಬೆಳೆಯುವ ಪ್ರಯೋಗ ಮಾಡಿದೆ. ಅದೆಲ್ಲದರಿಂದ ನನ್ನ ಕೈಗೆ ಒಂದು ನಯಾಪೈಸೆಯೂ ಹತ್ತಲಿಲ್ಲ.

ಒಂದು ದಿನ 'ಕಟ್ಟೆಪುರಾಣ'ದ ಚಂದ್ರೇಗೌಡರೊಂದಿಗೆ ಲಂಕೇಶರು ನಾನು ಮಾಡಿದ್ದ ತೋಟ ನೋಡಲು ಬಂದರು. "ತೋಟವನ್ನು ಚೆನ್ನಾಗಿ ಮಾಡಿಸಿದ್ದಾಳೆ. ಆದರೆ ಯಾಕೆ ಬೇಕಿತ್ತು ಇವಳಿಗೆ ಇದೆಲ್ಲ" ಎಂದರು ಲಂಕೇಶರು. ಅವರ ಈ ಮಾತಿಗೆ ಕಾರಣ ಇತ್ತು. ಅವರು ಅಷ್ಟು ಹೊತ್ತಿಗಾಗಲೇ ತೋಟ ಮಾಡುವಲ್ಲಿ ಬೇಕಾದಷ್ಟು ಅನುಭವ ಪಡೆದಿದ್ದರು. ಆದರೆ ನನಗೆ ಇದು ಹೊಸ ಅನುಭವ. ತೋಟ ಮಾಡುವಲ್ಲಿ ಏನೇನು ಕಷ್ಟಗಳು ಎದುರಾಗುತ್ತವೆ ಎಂದು ಅನುಭವಿಸಿದಾಗಲೇ ಜನರಿಗೆ ಅರ್ಥವಾಗುವುದು. ನಾನೂ ಅಂತಹ ಹತ್ತಾರು ಕಷ್ಟ ಸಮಸ್ಯೆಗಳನ್ನು ಎದುರಿಸಿದೆ.


ಆದರೂ ತೋಟಕ್ಕೆ ಹೋಗಿ ಕೂತರೆ ಆ ಶುಭ್ರ ವಾತಾವರಣ, ಗಾಳಿ, ಹಸಿರು ಎಲ್ಲವೂ ಮುದ ನೀಡುವಂತಹದ್ದು. ಅದರಲ್ಲೂ ಮಳೆ ಬಂದಾಗ ಸಿಗುವ ಆಹ್ಲಾದಕರ ಅನುಭವ ನಗರ ಪ್ರದೇಶದಲ್ಲಿ ಸಿಗುವುದಿಲ್ಲ.

ತೋಟಕ್ಕೆ ಹೋದಾಗ ಅಲ್ಲಿ ಇರಲು ಜಾಗ ಇರಲಿಲ್ಲ. ನನ್ನೊಂದಿಗೆ ತೋಟಕ್ಕೆ ಬನ್ನಿ ಅಂದರೆ ನನ್ನ ಹೆಣ್ಣುಮಕ್ಕಳು "ಅಲ್ಲಿ ಒಂದು ಟಾಯ್ಲೆಟ್ ಕೂಡ ಇಲ್ಲ. ಮರೆಗೆ ಒಂದು ಮರ ಕೂಡ ಇಲ್ಲ" ಎಂದು ಹಿಂದೇಟು ಹಾಕುತ್ತಿದ್ದರು. ಈ ಸಮಸ್ಯೆಯನ್ನು ನಿವಾರಿಸಲು ನಾನು ತೋಟದಲ್ಲಿ ಒಂದು ಚಿಕ್ಕ ಮನೆ ಕಟ್ಟಿಸಲು ನಿರ್ಧರಿಸಿದೆ. ಆಗ ರಂಗ ನಿರ್ದೇಶಕ "ಪ್ರಸನ್ನ ಅವರು ಹೆಗ್ಗೋಡಿನಲ್ಲಿ ಕಟ್ಟಿಸಿರುವಂತಹ ಮನೆಯನ್ನೇ ತೋಟದಲ್ಲಿ ಕಟ್ಟಿಸು, ಚೆನ್ನಾಗಿರುತ್ತದೆ" ಎಂದಳು ಮಗಳು ಗೌರಿ. ಸರಿ ಎಂದು ನಾನು ಹೆಗ್ಗೋಡಿಗೆ ಹೋಗಿ ಪ್ರಸನ್ನ ಅವರ ಮನೆಯನ್ನು ನೋಡಿಕೊಂಡು ಬಂದೆ.

ಪ್ರಸನ್ನ ಅವರ ಮನೆಯಲ್ಲಿದ್ದಂತಹ ಮರದ ಕಂಬ, ಬಾಗಿಲುಗಳು ನನ್ನ ತೋಟದ ಮನೆಯಲ್ಲೂ ಇದ್ದರೆ ಚೆಂದ ಎಂದು ನಿರ್ಧರಿಸಿದೆ. ಹೇಗಿದ್ದರೂ ನಾನು ನನ್ನ ಅಂಗಡಿಗೆ ರೇಷ್ಮೆ ಸೀರೆಗಳನ್ನು ಖರೀದಿಸಲು ಕಂಚಿಗೆ ಹೋಗುತ್ತಿದ್ದೆನಲ್ಲ, ಆಗ ಕಂಚಿಯಲ್ಲಿ ಒಂದು ಗುಜರಿ ಅಂಗಡಿಯನ್ನು ನೋಡಿದ್ದೆ. ಕಂಚಿಯಲ್ಲಿನ ಜನ ತಮ್ಮ ಹಳೆ ಮನೆಗಳನ್ನು ಕೆಡವಿ ಹೊಸ ಮನೆಗಳನ್ನು ಕಟ್ಟಿಸುವಾಗ ಹಳೆ ಮನೆಯ ಬಾಗಿಲುಗಳು, ಕಂಬಗಳು, ಮಂಚ, ತೊಟ್ಟಿಲು, ಕುರ್ಚಿ ಇತ್ಯಾದಿಗಳನ್ನು ಆ ಗುಜರಿ ಅಂಗಡಿಗೆ ಮಾರುತ್ತಿದ್ದರು. ನಾನು ಆ ಅಂಗಡಿ ಯಿಂದ ಅಂತಹ ಬಾಗಿಲು ಮತ್ತು ಕಂಬಗಳನ್ನು ಖರೀದಿಸಿ ಇಟ್ಟುಕೊಂಡೆ. ಕೊನೆಗೆ ಆರ್ಕಿಟೆಕ್ಟ್ ಮತ್ತು ಮೇಸ್ತ್ರಿಯವರನ್ನೂ ಹೆಗ್ಗೋಡಿಗೆ ಕರೆದುಕೊಂಡು ಹೋಗಿ ಪ್ರಸನ್ನ ಅವರ ಮನೆಯನ್ನು ತೋರಿಸಿ ಅಂತಹದ್ದೇ ಮನೆ ಕಟ್ಟಬೇಕೆಂದು ಅವರಿಬ್ಬರಿಗೂ ಹೇಳಿದೆ. ಆದರೂ ಅವರಿಬ್ಬರು ಮನೆಯ ಪ್ಲಾನ್‌ನಲ್ಲಿ ಒಂದಿಷ್ಟು ಬದಲಾವಣೆಗಳನ್ನು ಮಾಡಿ ನನ್ನ ತೋಟದ ಮನೆ ಅತ್ತ ಸಂಪೂರ್ಣವಾಗಿ ಒಂದು ಹಳ್ಳಿಯ ಮನೆಯೂ ಅಲ್ಲ, ಇತ್ತ ನಗರದ ಮನೆಯೂ ಅಲ್ಲ ಎಂಬಂತೆ ಮಾಡಿಟ್ಟರು.

ನನ್ನ ತೋಟದ ಮನೆ ಪ್ರಸನ್ನ ಅವರ ಹೆಗ್ಗೋಡಿನ ಮನೆಯಷ್ಟು ಅಂದವಾಗಿರದಿದ್ದರೂ ನನ್ನ ಪಾಲಿಗೆ ಅದು ಚೆನ್ನಾಗೇ ಇದೆ....

****



ಲಂಕೇಶರು ಸಮಯಪ್ರಜ್ಞೆಯ ಬಗ್ಗೆ ಪತ್ರಿಕೆಯಲ್ಲಿ ಹಲವಾರು ಬಾರಿ ಬರೆದಿದ್ದನ್ನು ಓದುಗರು ಗಮನಿಸಿರುತ್ತಾರೆ. ಅವರದ್ದು ಎಂತಹ ಪರ್‌ಫೆಕ್ಟ್ ಟೈಮ್‌ಸೆನ್ಸ್ ಅಂದರೆ ಅವರು ಮನೆಯಿಂದ ಹೊರಟು ಆಫೀಸ್ ತಲುಪುವುದಕ್ಕೂ, ಆಫೀಸಿನಿಂದ ಅವರ ಸಹಾಯಕ ಗಿರಿ ಫ್ಲಾಸ್ಕ್ ಹಿಡಿದು ಕಾಫಿ ತರಲು ಹೋಟೆಲ್‌ಗೆ ಹೋಗುವುದಕ್ಕೂ, ಹಲವೊಮ್ಮೆ ಮಾತ್ರ ಒಂದೆರಡು ಸೆಕೆಂಡ್‌ಗಳ ವ್ಯತ್ಯಾಸವಾಗುತ್ತಿತ್ತು.

ಲಂಕೇಶರ ಈ ಸಮಯಪ್ರಜ್ಞೆ ಕುರಿತು ಅವರ ಮಿತ್ರ ರಾಮದಾಸ್ ಅವರು ಹೇಳುತ್ತಿದ್ದ ಒಂದು ಪ್ರಸಂಗ ಮೋಜಾಗಿದೆ. ಅದನ್ನು ಯಾರೂ ಇಲ್ಲಿಯತನಕ ಎಲ್ಲೂ ದಾಖಲಿಸಿಲ್ಲವಾದ್ದರಿಂದ ಆ ಪ್ರಸಂಗವನ್ನು ಇಲ್ಲಿ ನೆನಪಿಸಿಕೊಳ್ಳುತ್ತೇನೆ.

ಒಮ್ಮೆ ಮಾಜಿ ಸಚಿವ ಬಿ.ಶಂಕರಾನಂದ ಅವರ ಪುತ್ರ ಓಂ ಪ್ರಕಾಶ್ ಎಂಬುವವರು ಬೆಳಗಾವಿಯ ಚಿಕ್ಕೋಡಿ... ಒಂದು ಕಾರ್ಯಕ್ರಮಕ್ಕೆ ಲಂಕೇಶ್ ಮತ್ತು ರಾಮ... ಅವರನ್ನು ಆಹ್ವಾನಿಸಿದ್ದರು. ಬೆಂಗಳೂರಿನಿಂದ ಚಿಕ್ಕೋ... ಲಂಕೇಶ್ ಮತ್ತು ರಾಮದಾಸ್ ಕಾರಿನಲ್ಲಿ ಹೋ... ಎಂದಿನಂತೆ ಲಂಕೇಶರು ಸಂಜೆ ಸಮಯಕ್ಕೆ ಸರಿ... ಕಾರ್ಯಕ್ರಮ ನಡೆಯಬೇಕಿದ್ದ ಜಾಗಕ್ಕೆ ಹೋದರು. ಅಲ್ಲಿ ನೋಡಿದರೆ, ಕಾರ್ಯಕ್ರಮ ಪ್ರಾರಂಭವಾಗುವ... ಅದರ ಆಯೋಜಕರ ಪತ್ತೆಯೂ ಇರಲಿಲ್ಲ. ಇ... ಕೋಪಗೊಂಡ ಲಂಕೇಶರು "ಇದ್ಯಾವ ಕಾರ್ಯಕ್ರಮ... ಹೋಟೆಲ್ ರೂಮಿಗೆ ಹೋಗೋಣ" ... ರಾಮದಾಸರನ್ನು ಕರೆದುಕೊಂಡು ಹೊರಟೇಬಿಟ್ಟರು...

ಇದು ಕಾರ್ಯಕ್ರಮದ ಆಯೋಜಕರಿಗೆ ಗೆ... ಅವರು ಲಂಕೇಶರು ತಂಗಿದ್ದ ಹೋಟೆಲ್ ರೂಮಿಗೆ ... ಬೇಡಿಕೊಂಡರೂ ಲಂಕೇಶರು ಜಪ್ಪಯ್ಯ ಎನ್ನಲಿಲ್ಲ. ... ಓಂ ಪ್ರಕಾಶ್ ಕಡೆಯವರು ಬೆಳಗ್ಗೆ ಲಂಕೇಶರು ಓಂ ... ಅವರ ಮನೆಗೆ ತಿಂಡಿಗಾದರೂ ಬರಬೇ... ಒತ್ತಾಯ ಮಾಡಿದರು. ಅದಕ್ಕೂ ಲಂಕೆ... ಒಪ್ಪಲಿಲ್ಲವಾದ್ದರಿಂದ ಬೆಳಗ್ಗೆ ಬಂದು ಲಂಕೇಶರ ಮ... ಒಲಿಸಿದರಾಯಿತು ಎಂದು ಅವರೆಲ್ಲ ಹೊರಟುಹೋ... ಆದರೆ ಹೋಗುವ ಮುನ್ನ ಬೇಕಂತಲೇ ಲಂಕೇಶರ ... ಒಂದು ಟೈಯರ್‌ನಲ್ಲಿನ ಗಾಳಿಯನ್ನು ತೆಗೆದುಹೋ... ರಾತ್ರಿ ಲಂಕೇಶ್ ಮತ್ತು ರಾಮದಾಸ್ 'ಗುಂಡು' ... ಮಾಡಿ ಮಲಗಿದರು. ಬೆಳಗ್ಗೆ ಮುಂಜಾನೆಯೇ ಎದ್ದು ... ಬಂದು ಮತ್ತೆ ಒತ್ತಾಯ ಮಾಡುವ ಮುನ್ನ ಅ... ಹೊರಟುಹೋಗಬೇಕೆಂದು ಇವರಿಬ್ಬರೂ ನಿರ್ಧರಿ... ಆದರೆ ಬೆಳಗ್ಗೆ ಎದ್ದು ನೋಡಿದರೆ ಕಾರ್ ಟೈಯರ್‌ನಿಂ... ತೆಗೆದಿರುವುದು ಗೊತ್ತಾಗಿ ರಾಮದಾಸ್ ತಾವು ... ಪಂಚೆಯಲ್ಲೇ ಕಾರ್‌ನ ಚಕ್ರವನ್ನು ಬದಲಾಯಿಸಿದರು. ... ಹೊತ್ತಿಗೆ ಲಂಕೇಶರು ರೆಡಿಯಾಗಿದ್ದರು. ರಾಮದಾಸ್ ... ಚಕ್ರ ಬದಲಾಯಿಸುವುದಕ್ಕೂ, ಓಂ ಪ್ರಕಾಶ್ ಕಡೆ... ಹೋಟೆಲ್‌ಗೆ ಬರುವುದಕ್ಕೂ ಸರಿಹೋಯಿತು. ... ಲಂಕೇಶರು ತಮ್ಮ ಮತ್ತು ರಾಮದಾಸ್ ಅವರ ಲಗ... ಕಾರಿನಲ್ಲಿ ಹಾಕಿದ್ದರು. ಓಂ ಪ್ರಕಾಶ್ ಕಡೆಯವರಿಗೆ ರಾಮ... ತಾವು ಹೊರಟಿರುವುದಾಗಿ ಹೇಳುತ್ತಿರುವಾಗಲೇ ಲ... ಅಲ್ಲಿದ್ದ ಯಾರಿಗೂ ಒಂದು ಸುಳಿವೂ ಕೊಡದೆ ತಮ್ಮ... ಹತ್ತಿ ಅಲ್ಲಿಂದ ಹೊರಟೇಬಿಟ್ಟರು.


ರಾಮದಾಸರಿಗೆ ಅಚ್ಚರಿಯೋ ಅಚ್ಚರಿ. ಅವರಿನ್ನೂ ... ಪಂಚೆಯಲ್ಲಿದ್ದಾರೆ. ಲಂಕೇಶರ ಕಾರಿನಲ್ಲಿ ತಮ್ಮ ಬಟ್ಟೆ... ಇತ್ಯಾದಿಗಳಿವೆ. ಕೂಡ... ಓಂ ಪ್ರಕಾಶ್ ಕಡೆಯವರು ತಂದಿದ್ದ ಕಾರನ್ನೇರಿದ ರಾಮದಾಸ್ ಲಂಕೇಶರ ಕಾರನ್ನು ಹಿಂಬಾಲಿಸಿದರು. ರಾಮದಾಸ್ ಅದೆಷ್ಟೇ ವೇಗವಾಗಿ ಕಾರ್ ಓಡಿಸಿದರು ಲಂಕೇಶ್ ಅವರಿಗಿಂತ ವೇಗವಾಗಿ ತಮ್ಮ ಕಾರ್ ಓಡಿಸಿದ್ದಾರೆ. ಅದಕ್ಕೆ ಕಾರಣ ಎಲ್ಲಿ ಅವರೆಲ್ಲ ತಮ್ಮನ್ನು ... ವಾಪಸ್ ಚಿಕ್ಕೋಡಿಗೆ ಕರೆದುಕೊಂಡು ಹೋಗುತ್ತಾ... ಎಂಬ ಲಂಕೇಶರ ಸಂದೇಹ. ಹೈವೇಯಲ್ಲಿ ಹಲವಾ... ಕಿಲೋ ಮೀಟರ್ ಹೋದ ನಂತರ ಲಂಕೇಶರ ಕಾ... ಸಮೀಪಿಸಿದ ರಾಮದಾಸ್ "ನಿಲ್ಲಿಸ್ರೀ ಲಂಕೇಶ್, ನಾ... ನಿಮ್ಮ ಕಾರ್ ಹತ್ತಬೇಕು" ಎಂದು ಜೋರಾಗಿ ಕರೆ... ಆಗ ಲಂಕೇಶ್ ತಮ್ಮ ಕಾರನ್ನು ನಿಲ್ಲಿಸಿ ರಾಮದಾಸರ... ಹತ್ತಿಸಿಕೊಂಡರಂತೆ....

ಈ ಪ್ರಸಂಗವನ್ನು ನೆನಪಿಸಿಕೊಂಡು ರಾಮ... ಜೋರಾಗಿ ನಗುತ್ತಿದ್ದರು......

ವ್ಯಭಿಚಾರ

• ಡಿ.ಎ. ಶಂಕರ್

ಕಣ್ಣುಗಳು
ವ್ಯಭಿಚಾರ ಮಾಡುತ್ತವೆ,
ಕಂಡದ್ದೆಲ್ಲ ದರ ಕೂಡೆ;
ವ್ಯಭಿಚಾರವೆಂದರೆ
ಕಿವಿಗಳು
ಆಗುತ್ತವೆ ಸೂಕ್ಷ್ಮಧ್ವನಿಗ್ರಾಹಕಗಳು;
ವ್ಯಭಿಚಾರವೆಂದರೆ
ಮೂಗಿನ ಹೊಳ್ಳೆಗಳು
ಅರಳುತ್ತವೆ;
ವ್ಯಭಿಚಾರವೆಂದರೆ
ಕೈಕಾಲುಗಳು ಅದಿರುವಾಯು ಬಡಿದಹಾಗೆ
ಎತ್ತೆತ್ತಲೋ ಹರಿದಾಡುತ್ತವೆ;
ವ್ಯಭಿಚಾರವೆಂದರೆ ಕಾಲುಗಳು
ಮದವೇರಿದ ಆನೆಗಳ ಹಾಗೆ, ವಾಸನೆಯ ಗಾಳಿ
ಹಿಡಿದು,
ದಾಪುಗಾಲಿಟ್ಟು ಓಡುತ್ತವೆ.
ವ್ಯಭಿಚಾರವೆಂದರೆ
ಹೃದಯ ಕಮಲ ಸಹಸ್ರಾರದಂತಾಗಿ
ನಿಶ್ಚಲ ನಿಂತುಬಿಡುತ್ತದೆ;
ವ್ಯಭಿಚಾರವೆಂದರೆ
ಸಕಲ ಚರಾಚರವೆಲ್ಲ
ಮೈಯಾಗಿ ಕಣ್ಣಾಗಿ ಕಾಲು ಕಿವಿಯಾಗಿ
ಶಾಪಗ್ರಸ್ತ ಇಂದ್ರನ ಹಾಗೆ
ಸಹಸ್ರಯೋನಿಗಣ್ಣಾಗಿ ನಿಲ್ಲುತ್ತದೆ,
ವ್ಯಭಿಚಾರ ಪ್ರೇಮಪ್ರಪಂಚದ
ಸಹಜ ವ್ಯಾಪಾರ.



...ಡೂರಪ್ಪ ನಿಜವಾದ ಕಾಗೆ, ಕುಮಾರಣ್ಣ ಕೋಗಿಲೆ ಕಂಪ್ರೊ...

...ಕಾಳಮಾವ ಗೊಣಗುತ್ತಲೇ ಇದ್ದ.

"ಆ ಹುಲ್ಲುಕೊಪ್ಪಲ ಬೇಲಿಯ ಸರಿಯಾಗಾಕ ಅಂತ ...ದ್ವೆ. ಕೇಳ್ಕರೆ ನನ್ನ ಮಾತ. ಯಾವಾರ ದನಕರ ನುಗ್ಗಿದ್ರೆ ...ಬಿಟ್ಟವೆ. ಅದೋಗ್ಲಿ ಅಲ್ಲೊಂದು ಅಳಸಿನ ಸೊಸಿ ...ಆಡೇನಾರ ನುಗ್ಗಿದ್ರೆ ಹಪ್ಪಳ ತಿಂದಂಗೆ ತಿನ್ನಕತ್ತದೆ. ...ಸೊಸಿ ಮುಳ್ಳು ಕಟ್ಟ ಅಂದೆ. ಕೇಳಿಸಿಗಂಡರೆ ನನ್ನ ... ಹಾಳಾಗೋಯ್ತರೆ ಇವುರು" ಎಂದ.

...ಯ ಲು ಸೀ ಮೆ

...ಕಟ್ಟೆಪುರಾಣ

▸ಬಿ. ಚಂದ್ರೇಗೌಡ

"ನಿನಿಗ್ಯಾಕೆ ಬೇಕು ಅದ್ಯಲ್ಲವಾ? ಮುಂದೆ ಬದುಕೋರು ...ಕಂಡೊಯ್ತರೆ ಸುಮ್ಮನಿರು ಅತ್ತಗೆ" ಎಂದಳು ಜುಮ್ಮಿ.

"ಅಂಗಂತ ಸುಮ್ಮನಿದ್ರೆ ಯಲ್ಲ ಹಾಳಾಗೋಯ್ತರೆ ..."

"ಕಾಳಮಾವನಿಗೋಗಿ ಬುದ್ಧಿ ಹೇಳ್ತಿಯಲ್ಲೆ ನೀನು. ...ಯುಕ್ಯಾಗದೆಯಿದ್ರೂ ಕಣದೊಲ, ಹುಲ್ಲುಕೊಪ್ಪಲು, ...ನುಡಿನ್ಯಲ್ಲ ನೋಡಿಕಂಡು ಬತ್ತನೆ. ಆ ದ್ಯಾವೇಗೌಡನೂ ...ನಂಗೆಯ. ಅವುರಿವರ ಭುಜ ಹಿಡಕಂಡು ಜೆಡಿಎಸ್ ...ಹೋಯ್ತನೆ. ಕತ್ತು ನಿಲ್ದೆಯಿದ್ರು ಸಿವುಡು ಸುತ್ತಿಗಂಡು ...ಡ್ತನೆ. ಅಂಗೇ ನೋಡಿದೂ ಅದೇ ತಳಿ" ಎಂದ ...

"ಕಾಳಮಾವನಿಗೆ ಹೊಲಮನಿದ್ದಂಗೆ ದ್ಯಾವೇಗೌಡನಿಗೆ ...ಎಸ್ಸು ಪಾರ್ಟಿ ಅದೆ."

"ಊ, ಅವುನ ಮನತನದ ಪಾರ್ಟಿಯಲವೆ, ಅದ್ಕೆ ...ಡ್ತನೆ."

"ಅದೇನಿದ್ಕಕಿದ್ದಂಗೆ ಮಕ್ಕಳ ಕಟಿಗಂಡು ...ರುವಂಟವುನಲ್ಲಾ ಸರಕಾರೇನಾರ ಬಿದ್ದತೇನ್ಲ" ಎಂದ ...

"ಅದ್ಯಾಕೊಂಟವುನೆ ಗೊತ್ತೇನೋ? ಬಿಜೆಪಿ ಮಂತ್ರಿಗಳು ...ನಸೌಧದಲ್ಲಿ ನೋಡಬಾರದ್ದ ನೋಡ್ತ ಕುಂತಿದ್ದು ಟಿವಿಲಿ, ...ಲ್ಯಲ್ಲ ಬತ್ತು, ನೋಡು ಆಗ ಇಡೀ ಕರ್ನಾಟಕದ ...ಉಗುದುಬುಟ್ರು ಅವುರಿಗೆ. ಇದೇ ಸರಿಯಾದ ಟೈಮು ... ದ್ಯಾವೇಗೌಡ ಕದಬಳ್ಳಿ ನರಿ ಹಬ್ಬದಲ್ಲಿ ಬಲೆ ...ಂಡೋಗಿ ಬೇಟೆ ಹಿಡಕೊಂಡು ಬತ್ತರೆ ನೋಡು ಅಂಗೆ ...ನ ಪರಿವಾರನ್ನಲ್ಲ ಹೊಂದಿಸಿಗಂಡು ಏಳೆಂಟು ಜಿಲ್ಲೆ ...ಬುಟ್ಟ ಅತ್ತಗೆ. ಅವುನು ಪಾರ್ಟಿ ಕಟ್ಟಕ್ಕೆ ಆರಿಸಿಗಳೊ ...ು ನೋಡು ಯಂಗದೆ."

"ಓಹೋ, ಅದಕೆ ಅನ್ನು, ನಾನೆಲ್ಲೊ ಯಲಕ್ಷನ್ನ ಬಂದು ...ತ್ತೇನೋ ಅದಕ್ಕೆ ವಂಟವುನೆ ಅನ್ನಕಂಡೆ."

"ಹೋದ್ರು ಯಂಗೆ ಮಾಡಿದಾ ಅಂತೀ. ಅಪ್ಪಿತಪ್ಪಿ ...ನ ಪಾರ್ಟಿಯೋರು ಆ ಬಿಜೆಪಿ ಮಂತ್ರಿಗಳು ...ಡಿದರಲ್ಲ, ಆ ಸುದ್ದಿ ತಗಿದಂಗೆ ಎಚ್ಚರಿಕೆ ಹೇಳಿದ್ದ. ಒಂದು ವೇಳೆ ಅದ್ನೆ ಮಾತಾಡಿದ್ರೆ, ಓಹೋಹೊ. ಇದಕೆ ಬಂದವುನಿವುನು ಅನ್ನಕತ್ತರೆ ಅಂತ, ಎಲ್ರೂ ಆ ಸುದ್ದಿನೆ ತಗಿಲಿಲ್ಲ. ನಿಜವಾಗ್ಲೂ ಪಾರ್ಟಿಕಟ್ಟೊ ಜನ ಅವುನ ಬುದ್ಧಿ ನೋಡಿ ಕಲಿಬೇಕು."

"ಈ ವಯಸ್ಸಿನಲ್ಲಿ ಅದ್ಯಲ್ಲ ಯಾಕಬೇಕು ಅವುನಿಗೆ?"

"ಏ ತಿರಗ ಅದ್ನೆ ಹೇಳ್ತಿಯಲ್ಲೊ ನೀನು. ಕಾಳಮಾವನಿಗೆ ತೋಟ, ಕಣದೊಲ, ಹುಲ್ಲುಕೊಪ್ಪಲು, ಮನೆ, ಹಿತ್ಲು ಯಂಗೊ ಅದೇತರ ದ್ಯಾವೇಗೌಡನಿಗೆ ಜೆಡಿಎಸ್ಸು ಅವನ ಖಾತೆಲಿರೊ ಆಸ್ತಿ. ಆದ ಆ ಬದ್ದು ಮಾಡಿಕಂಡು ಅಭಿವೃದ್ಧಿ ಮಾಡಿ, ಮಕ್ಕಳ ವಾರಸುದಾರ್ರು ಮಾಡದು ಅವುನ ಹಟ. ಅದ್ಕೆ ಪಾಪ ಹಗಲೂ ರಾತ್ರಿ ಹ್ಯಣಗತನೆ."

"ಗೊತ್ತಾಯ್ತು ಬುಡ್ಡ. ಅಂಗಾದ್ರೆ ಸುಮ್ಮನಿರದಿಲ್ಲ ಬುಡವ್ನುನು."

"ಅವುನೂ ಸುಮ್ಮನಿರದಿಲ್ಲ, ಯಾರ್ನೂ ಸುಮ್ಮನಿರಕ್ಕೆ ಬುಡದಿಲ್ಲ ಕಣೊ. ಆ ದಾವಣಗ್ಯರಿಗೋಗಿ ಯಂಥಾ ಕ್ಯಲಸ ಮಾಡ್ಯವುನೆ ಗೊತ್ತೆ?"

"ಏನು ಮಾಡಿದ್ದನೊ?"

"ಶ್ಯಾಮನೂರು ಶಿವಶಂಕರಪ್ಪನ ಮನಿಗೆ ನಾಷ್ಟ ಮಾಡಕ್ಕೆ ಹೋಗಿಬುಟ್ಟವುನೆ. ಪಾಪ ಅವುನು, ಅವುನ ಮಕ್ಕಳ್ಯಲ್ಲ ಕಾಲಾದಿಂದ್ಲೂ ಕಾಂಗ್ರೆಸ್ಸಿನೋರು. ಶಾಮನೂರು ಶಿವಶಂಕರಪ್ಪನಂತೂ ಕೈಯಿಂದ ಕಾಸು ಕರ್ಚುಮಾಡಿಕಂಡು ಕಾಂಗ್ರೆಸ್ ಕಟ್ಯವುನೆ. ಅಂಥೋನು ಮನಿಗೆ ಇವುನು ಹೋಗಿ ಬುಡದೆ?"

"ಇಸಿಸಿ, ಇಸ್ವಾಸಕ್ಕೆ ಹೋಯ್ತರೆ ಕಂಡ್ರ. ನಿನಿಗದೇ ಒಂದಿದೆ" ಎಂದ ಕಾಳಮಾವ.

"ಪ್ರಧಾನಿಯಾಗಿದ್ದೊನಲವೆ, ಅಂಥೋನು ಮನೆತಕ್ಕೆ ಬಂದಾ ಅಂದ್ರೆ ಅವುರಿಗೆ ಒಂದಿದಲವೇನ್ಲ?" ಎಂದಳು ಜುಮ್ಮಿ.

"ಪ್ರಧಾನಿಯಾಗಿ ಬಂದೋನು ಆ ಜಾಗದ ಘನತೆ ಕಾಪಾಡೋ ತರ ಇರಬೇಕು ಕಣೆ. ವರ್ತೂರು ಪ್ರಕಾಶನ್ನ ಫ್ರೆಂಡ್ ಮಾಡಿಕಂಡಲ್ಲ ತಿರಗದು."

"ಯಾರಪ್ಪ ವರ್ತೂರು ಪ್ರಕಾಶನ ಫ್ರೆಂಡು" ಎಂದು ವಾಟಿಸ್ಸೆ ಕೇಳಿದ.

"ಇನ್ನಾರಿದ್ದರೊ, ದ್ಯಾವೇಗೌಡ್ರಲವೆ."

"ಮಿಸ್ಟರ್ ಉಗ್ರಿ, ದ್ಯಾವೇಗೌಡ್ರು ಒಂದು ಮಾರಿ ಬಲೆ ಯಣಿತಾಯಿದ್ದರಂತೆ ಗೊತ್ತೆನೊ. ದೊಡ್ಡ ದೊಡ್ಡ ಮೀನೇ ಬೀಳಬೇಕು ಅಂಥ ಬಲೆ ಯಣಿಕಂತಾ ಕುಂತಿದ್ದರಂತೆ. ಯಾವು ಯಾವು ಬೀಳ್ತದೆ ನೋಡಬೇಕು."

"ನಾನು ಅದ್ನೆ ಹೇಳ್ತಾಯಿದ್ದೆ ಕಣೊ. ಆಗ್ಲೆ ದಾವಣಗೆರೆ ಕಡೆ ಬೀಸಿ ಆ ಶಾಮನೂರು ಪ್ಯಾಮಿಲಿನೆ ಕೆಡಗಿದ್ದನಂತೆ. ಅದ್ಕೆ ಕಾಂಗ್ರೆಸ್ಸಿನವು ನಿದ್ದೆನೆ ಕಳಕಂಡಿದ್ದವಂತೆ. ಅದ್ನೆ ಹೇಳ್ತಾಯಿದ್ದೆ ಆಟೊತ್ತಿಗೆ ನೀನು ಬಂದೆ."

"ಗಾಂಧಿ ಮಾತ್ಮನ ಮನೆತನದ ಹುಡುಗಿ ಬಂದು ದ್ಯಾವೇಗೌಡ್ರು ಪಾರ್ಟಿ ಸೇರಿದ್ಲು ಅಂದ್ರೆ ಲ್ಯಕ್ಕಸಾಕು" ಎಂದ ಸೀರ.

"ಯಾರು ಚಿಗಪ್ಪ ನಿನಿಗೆ ಆ ಹುಡುಗಿ ಗಾಂಧೀಜಿ ರಿಲೇಶನ್ ಅಂತ ಹೇಳಿದ್ದು? ಮುಂಗಾರು ಮಳೆ ಸಿನುಮ ಹೀರೋಯಿನ್ ಅವಳು. ಅವಳೆಸುರು ಪೂಜಾ ಗಾಂಧಿ ಅಂತ. ಅದ್ಕೆ ನೀನು ಗಾಂಧೀಜಿ ಫ್ಯಾಮಿಲಿ ಅಂದು ಬುಡದೆ."

"ಅಂಗರೆ ಗಾಂಧಿ ಹೆಸರ್ಯಾಕೆ ಇಟಗಂಡವ್ಳೆ?"

"ನಮ್ಮೂರ ಶೆಟ್ಟೋಜಿರಾವ್ ಮಗನೆಸರು ಶಿವಾಜಿರಾವ್ ಅಂತ. ಅವುನು ಛತ್ರಪತಿ ಶಿವಾಜಿ ರಿಲೇಶನ್ ಅನ್ನಕ್ಯಾಯ್ತದಾ?"

"ಓಹೋ ಅಂಗೇ ಅನ್ನು."

"ಊ ಮತ್ತೆ, ಪಾಪ ಆ ಹುಡುಗಿಗೆ ಪಿಚ್ಚರ್ ಅಕ್ಕಿಂಗು ಕಡಮೆ ಆಗವೆ. ಅದೇ ಟೈಮಿಗೆ ಕುಮಾರಣ್ಣ ಇರಕ್ಕೊಂದು ಮನೆಯ ಗಿಪ್ಟ್‌ಕೊಟ್ಟು, ನಮ್ಮ ಪಾರ್ಟಿಗೆ ಬಂದು ಸೇರಿಕೊ ಅಂದ. ಅದ್ಕೆ ಬಂದು ಹುಲ್ಲೊರೆ ಹೊತ್ತಗಂಡ್ಲು."

"ಅವುಳ್ಯಾಕ್ ತಂದು ಪಾರ್ಟಿಗೆ ಸೇರಿಸಿಗಂಡ್ರು ಗೊತ್ತೇನೋ?"

"ಗೊತ್ತು ಕಣೊ ಉಗ್ರಿ. ಹೊಸ ತಲಿಮಾರಿನ ಜನ ಜೆಡಿಎಸ್ ಸಬಿಗೆ ಬಂದ್ರೆ ಅದೇ ಕುಮಾರಣ್ಣ, ರೇವಣ್ಣ, ಬಾಲಣ್ಣ ದೇವು ಮುಖ ನೋಡಬೇಕು. ಹಿಂಗಾದ್ರೆ ಯಾರು ಬತ್ತರೆ ಅಂತ ಪೂಜಾಗಾಂಧಿ ತಂದ್ರು ಅಲವೇನೊ?"

"ಅದೂ ಒಂದು ಕಾರಣ. ಇನ್ನೊಂದು ಕಾರಣ ಏನಪ್ಪಾ ಅಂದ್ರೆ, ಆ ರಮ್ಯನ್ನ ಕುಮಾರಣ್ಣನ ವೈರಿ ಡಿ.ಕೆ.ಶಿವುಕುಮಾರ ಯಳಕಂಡೋದನಲ್ಲಾ. ಅದ ನೋಡಿದ ಕುಮಾರಣ್ಣ ನಾವೂ ಏನಾರ ಮಾಡಬೇಕು ಅಂತ ಹೋಗಿ ಪೂಜಾ ಗಾಂಧಿ ಯಳಕಂಡು ಬಂದು ದೇವೇಗೌಡ್ರು ಮುಂದೆ ನಿಲ್ಲಿಸಿದನಂತೆ."

"ಅದಪ್ಪ ಪೈಪಾಟಿ ಅಂದ್ರೆ" ಎಂದ ಸೀರ.

"ರಾಜಕೀಯ, ಸಿದ್ಧಾಂತ, ಕಾರ್ಯಕ್ರಮ ಯಲ್ಲ ಯಕ್ಕುಟ್ಟಿ ಹೋದೊ. ಇನ್ನ ಏನಿದ್ರು ಕಡಸಗಳ ಖರೀದಿನೆ ರಾಜಕಾರಣ ಚಿಗಪ್ಪ."

"ರಾಜಕಾರಣದಲ್ಲಿ ಹೆಂಗಸರನ ಯಾವ ತರ ಬಳಸಿಗತ್ತರೆ ನೋಡು."

"ಇದೇ ದ್ಯಾವೇಗೌಡ್ರು ಸಿನಿಮಾ ನಟರಿಂದ ನಾವು ರಾಜಕಾರಣ ಮಾಡೊಕೆ ಆಗದಿಲ್ಲ ಅಂದಿದ್ರು ದೊಡಪ್ಪ. ಅದೇ ಅವುನ ಮಕ್ಕಳಿಗೆ, ಅವುರೇ ಗತಿಯಾದ್ರು."

"ಕುಮಾರಣ್ಣ ಮದಿವಾಗಿರೊ ರಾಧಿಕಾ ಅನ್ನೋಳು ರಾಜಕೀಯಕೆ ಬರದಿಲ್ಲವೇ?"

"ಇಲ್ಲ ಕಣಕ್ಕ. ಅವುಳು ಮನೆಲೀರತಳೆ. ಅನಿತ ರಾಜಕೀಯದಲ್ಲಿರತಳೆ."

"ಅಂಗರೆ ಹೊಲದತ್ರ ಒಬ್ಬಳು, ಮನೆಲೊಬ್ಬಳು ಅನ್ನಂಗಾಯ್ತಲ್ಲಾ."

"ಅಂಗೆ ಆಯ್ತವ್ವ. ಅದರಲ್ಯಲ್ಲ ಎಡೂರಪ್ಪನ ಮನೇಲಿ ಯಾರೂ ಇಲ್ಲ."

"ಎಡೂರಪ್ಪ ಕಾಶಿಯಾತ್ರೆ ಮಾಡುವಾಗ ಸೋಬಾ ಕರಂದ್ಲಾಜೆ. ಜ್ವತೆಲೆ ಇದ್ಲು, ಅದಕ್ಯೇನೇಳ್ತಿ."

"ಅದಕ್ಯೇನೂ ಹೇಳಂಗಿಲ್ಲ, ಆದ್ರೆ ಕುಮಾರಣ್ಣ ಕಾಶಿಯಾತ್ರೆಗೋದ್ರು ಕಾಗೆ ಕೋಗಿಲೆಯಾಗದಿಲ್ಲ ಅಂದವುನೆ."



"ಅಂಗೇ ನೋಡಿದ್ರೆ ಉಗ್ರಿ, ಎಡೂರಪ್ಪ ನಿಜವಾದ ಕಾಗೆ ಕಣೊ. ಯಾಕೆ ಅಂದ್ರೆ, ಕೋಗಿಲೆ ಮಟ್ಟೆಯ ಗೂಡಲ್ಲಿಟಗೊಂಡು, ಕಾವುಕೊಟ್ಟು, ಮರಿಮಾಡಿ, ಗುಟುಕು ತಂದು ಕೊಟ್ಟು ಸಾಕ್ತದೆ. ಅದೇ ತರ ಎಡೂರಪ್ಪ ತಾನೇ ನಾಯಿ ತಿರಗಿದಂಗೆ ತಿರಗಿ, ಪಾರ್ಟಿ ಕಟ್ಟಿ, ಪವರ್‍ರಿಗೆ ತಂದ. ಈಗ ಮುಖ್ಯಮಂತ್ರಿಯಾಗಿರೋನು ಸದಾನಂದ. ಇದಕ್ಯೇನೇಳ್ತಿ"

"ಹೇಳದೇನು ಕೋಗಿಲೆ ಕಾಗೆಯ ಜರಿಯಂಗಿಲ್ಲ."

"ಇದೇ ಜನತಾದಳದ ಲೀಡ್ರುಗಳ್ಯಲ್ಲ ಕಷ್ಟಪಟ್ಟು ಪಾರ್ಟಿ ಕಟ್ಟಿ ಪವರ್‍ರಿಗೆ ತಂದ್ರು. ಆದ್ರೆ ಕುಮಾರಣ್ಣ ಹೋಗಿ ಮುಖ್ಯಮಂತ್ರಿಯಾಗಿ ಬುಟ್ಟ. ಅವುರ್ಯಲ್ಲ ಪಾರ್ಟಿ ಬುಟ್ಟು ಕೆಲವರು ಹಾಳಾದ್ರು, ಕೆಲವರು ಸತ್ತೋದ್ರು. ಅದಕ್ಕೆ ಕುಮಾರಣ್ಣ ಕೋಗಲೆ ಅನ್ನಕಳದು ಸರಿ."

"ಅದೇನೊ ಸರಿ, ಅವರಪ್ಪನ ತಾರಾ ತಿಗಡಿ ರಾಜಕಾರಣಕೆ ಐವತ್ತು ವರ್ಷ ಆಯ್ತಂತೆ. ಇಷ್ಟು ವರ್ಸದಲ್ಲಿ ಏನು ಕಡುದೆತ್ತಾಕಿದ ಅಂತ ನೋಡಿದ್ರೆ ಏನೂ ಇಲ್ಲ. ತನ್ನ ಬುಡಕಟ್ಟ ಭದ್ರ ಮಾಡಿ ಬುಟ್ಟು ಹೋಯ್ತಾ ಅವುನೆ ಅಷ್ಟೇ."


"ಅಷ್ಟು ಮಾಡಕ್ಕೆ ಹಗಲು ರಾತ್ರಿ ಕಷ್ಟಪಟ್ಟು ಗೊತ್ತೇ?!"

ಝೆ

...ನೆಳಲು, ಬೆಳಕು ▸▸▸


ಕೆ.ವಿ. ಅಯ್ಯರ್ ಅವರ 'ದೆವ್ವದ ಮನೆ'ಯಲ್ಲಿ ಏನಾಗುತ್ತದೆ ಎಂಬುದನ್ನು ಬಲ್ಲಿರಿ. ದೆವ್ವದ ಮನೆಗೆ ಹೋಗಿ ದೆವ್ವವಿಲ್ಲ ಎಂದು ಪರೀಕ್ಷಿಸುವ ಪಣ ತೊಟ್ಟ ಒಬ್ಬ ಆ ಪುರಾತನ ಮನೆಯ ಮಹಡಿ ಇಳಿಯುವಾಗ ಯಾರೋ ಅಂಗಿ ಹಿಡಿದು ಜಗ್ಗಿದಂತೆ ಅನ್ನಿಸಿ ಕಿಟಾರನೆ ಚೀರಿಕೊಂಡು ಬಿದ್ದು ರಕ್ತಕಾರಿ ಸಾಯುತ್ತಾನೆ. ನಿಜಕ್ಕೂ ಒಂದು ಮೊಳೆಗೆ ಆತನ ಕೋಟ್ ಸಿಕ್ಕಿಕೊಂಡಿರುತ್ತದೆ!

...ಕಳೆದ ಸಂಚಿಕೆಯಲ್ಲಿ ನಾನು ಅವರಿವರು ದೇವರನ್ನು ಕುರಿತು ಹೇಳಿದ್ದನ್ನೇ ಚರ್ಚಿಸಿದ್ದೆ. ನಾನೇ ದೇವರ ಬಗ್ಗೆ ...ಯುತ್ತಿದ್ದೇನೆ ಎಂದು ಹೇಳುವ ಧೈರ್ಯ ನನಗೆ ಇಲ್ಲ. ದೆವ್ವದ ಉದಾಹರಣೆಯನ್ನೇ ತೆಗೆದುಕೊಳ್ಳಿ. ವಿಚಾರವಂತ ...ದು ಹೇಳಿಕೊಳ್ಳುವ ನಾನು ಒಬ್ಬಂಟಿಯಾಗಿ ಅಮಾವಾಸ್ಯೆಯ ರಾತ್ರಿ ನಡೆಯುತ್ತಿದ್ದಾಗ ...ಕ್ಕಿದ್ದಂತೆ ದೆವ್ವದ ನೆನಪಾಗುತ್ತದೆ. ದೆವ್ವವನ್ನೆಲ್ಲಿಯೂ ನಾನು ನೋಡಿಲ್ಲ, ನೋಡುವ ...ಭವವೂ ಇಲ್ಲ. ಆದರೆ ಇಲ್ಲ ಎನ್ನುವುದು ನಿಜವಾದರೂ ಒಂದುಕ್ಷಣ 'ಇದ್ದುಬಿಟ್ಟರೆ' ...ಬ ಆತಂಕ ಶುರುವಾಗುತ್ತದೆ. ತಿರುಗಾಮುರುಗ ಪಾದವುಳ್ಳ, ಹಠಾತ್ತನೆ ಮುಟ್ಟ... ...ದು, ಗುದ್ದಿ ಅದೃಶ್ಯವಾಗಬಲ್ಲ ದೆವ್ವ! ಹಾಗೆ ತಿವಿಯಿತು ಅಂದರೂ ಯಾರೂ ನಂಬುವುದಿಲ್ಲ. ...ಗೆ ಅವರು ನಂಬದಿರುವುದೂ ಅಮಾವಾಸ್ಯೆಯ ನಡುರಾತ್ರಿ ಒಬ್ಬಂಟಿಯಾಗಿ ದೆವ್ವಕ್ಕೆ ...ಹಾಕಿಕೊಳ್ಳುವವರೆಗೆ. ಒಮ್ಮೆ ನಾನು ಯಾವುದೋ ದೂರದ ಊರಿಗೆ ಹೋಗಿ ...ಂದಾಗ ಮಧ್ಯರಾತ್ರಿಯಾಯಿತು. ಹೆದ್ದಾರಿಯನ್ನು ಬಿಟ್ಟು ಬೇರೆ ಮಾರ್ಗದಲ್ಲಿ ಒಬ್ಬನೇ ...ಬೇಕಾಯಿತು. ಕಾರಿನ ಲೈಟ್‌ಗಳನ್ನು ಬಿಟ್ಟರೆ ಬೇರೆ ಬೆಳಕೇ ಇರಲಿಲ್ಲ. ಮೂತ್ರ ...ರ್ಜನೆಗೆ ಅವಸರವಾದರೂ 'ಈಗ ಕಾರ್ ನಿಲ್ಲಿಸುವುದು ಬೇಡ' ಎಂದು ಮುಂದುವರಿದೆ. ...ದುರಿಗೆ ಬರುತ್ತಿದ್ದ ವಾಹನಗಳೂ ಇಲ್ಲವಾದವು. ಕಾರಿನ ಲೈಟ್ ಆರಿಸಿ ನೋಡಿದೆ. ...ಟ್ಟಬಹುದಾದಷ್ಟು ದಟ್ಟ ಕತ್ತಲು. ಮತ್ತೆ ಲೈಟ್ ಹಾಕಿ ನನ್ನ ವಿಚಾರವಾದದ ಬಗ್ಗೆ ...ಪ್ಪ ಮಾಡಿಕೊಂಡು ಮುಂದುವರಿದೆ. ಆದರೆ ಇದ್ದಕ್ಕಿದ್ದಂತೆ ಖಾಲಿ ಇದ್ದ ಹಿಂದಿನ ...ಸೀಟ್‌ನಲ್ಲಿ ದೆವ್ವ ಕೂತಿದ್ದರೆ.... ಅನ್ನಿಸಿತು. ತಿರುಗಿ ನೋಡಲು ಅಂಜಿಕೆ. 'ಅಯ್ಯೋ ...ಮರ್ಖ!' ಅಂದುಕೊಂಡು ತುಂಬ ಧೈರ್ಯದಿಂದ ಮುಂದುವರಿದೆ. ಭಯ ಮಾತ್ರ ...ಗುತ್ತಲೇ ಹೋಯಿತು. ಸಣ್ಣಗೆ ಬೆವರತೊಡಗಿದೆ. ಕಾರ್ ನಿಲ್ಲಿಸಿ ಬರೀ ಕೈಗಳನ್ನು ...ದಕ್ಕೆ ಕಳಿಸಿ ತಡಕಾಡಿದರೆ ಅಲ್ಲಿ ಮನುಷ್ಯರ ದೇಹದಂಥ ವಸ್ತು ತಾಗಿದಂತಾಗಿ ಬೆಚ್ಚಿದೆ. ಅಲ್ಲಿ ನಿಜಕ್ಕೂ ಹಣ್ಣುಗಳಿದ್ದವು. ...ವನ್ನು ಮರೆತೇಬಿಟ್ಟಿದ್ದೆ. ಮುಂದೆ ಚಿಕ್ಕ ಊರೊಂದು ಸಿಕ್ಕುವವರೆಗೆ ಉಸಿರುಕಟ್ಟಿ ಕಾರ್ ನಡೆಸಿದೆ. ಆಮೇಲೆ ಹಿಂದಿನ ...ಟಿಗೆ ಹೋಗಿ ಹುಡುಕಾಡಿ, ಅಲ್ಲಿ ಸ್ವಲ್ಪ ಹೊತ್ತು ಕೂತಿದ್ದು ಸ್ಟಿಯರಿಂಗ್‌ಗೆ ಬಂದೆ!



ದೆವ್ವಕ್ಕಿಂತ ದೇವರು ಭಯಂಕರ. ನಾವು ಈ ವಸ್ತುವಿನ ಬಗ್ಗೆ ಎಷ್ಟು ಕೇಳಿದ್ದೇವೆಂದರೆ, ಕ್ರಿಸ್ತ, ಶಂಕರ, ಮಧ್ವ ಮುಂತಾದವರೇ ಅಷ್ಟೊಂದು ದೇವರ ಬಗ್ಗೆ ಬಡಿದುಕೊಳ್ಳುವಾಗ ನಾವು ನಂಬದಿರುವುದು ಹೇಗೆ?

ಇದೇ ಮುಖ್ಯ ಪ್ರಶ್ನೆ. ನಮ್ಮ ಕಾಯಿಲೆ, ನೋವು ಇತ್ಯಾದಿಗಳಂತೆಯೇ ನಮ್ಮ ಸಾವು, ಆತ್ಮಕ್ಕಾಗುವ ಗತಿ ಮುಂತಾದ ಪ್ರಶ್ನೆಗಳನ್ನೆಲ್ಲ ನಾವೇ ಬಗೆಹರಿಸಿಕೊಳ್ಳಬೇಕು. ಸತ್ತರೆ ನಾನು ಆತ್ಮದ ರೂಪದಲ್ಲಿ ಸಂಚರಿಸುತ್ತಾ ಇನ್ನೊಂದು ದೇಹಕ್ಕೆ ಹೋಗುವುದು ಗ್ಯಾರಂಟಿ ಎಂದು ಗೊತ್ತಾಗುವಂತಿಲ್ಲ; ಹಾಗೆ ನಿಶ್ಚಿತವಾಗಿ ಗೊತ್ತಾದರೆ ನೆಮ್ಮದಿಯಾಗಿ ಸಾಯಬಹುದು. ಇಲ್ಲಿ ಇನ್ನೊಂದು ಕಷ್ಟದ ಪ್ರಶ್ನೆಯನ್ನು ಎದುರಿಸಲು ಪ್ರಯತ್ನಿಸಿ. ಅದು ಈ ಸಾವು, ಪುನರ್ಜನ್ಮಕ್ಕಿಂತಲೂ ಕಷ್ಟದ್ದು–ಅದು ಮೋಕ್ಷ. ನಾವು ಇಷ್ಟೊಂದು ವರ್ಷ ಬಾಳಿ, ಬದುಕುವುದನ್ನೇ ಅಭ್ಯಾಸ ಮಾಡಿಕೊಂಡಿರುವುದರಿಂದ ಮೋಕ್ಷ ಅನ್ನುವುದೂ ಮಹಾ ಪೆಚ್ಚುಸ್ಥಿತಿಯಾಗಿ ಕಾಣಿಸುತ್ತದೆ. ಹುಟ್ಟು, ಸಾವು, ಯಾವುದೂ ಇಲ್ಲದೆ ಗೊತ್ತುಗುರಿಯಿಲ್ಲದೆ ಅಲೆಯುವ ಆತ್ಮಕ್ಕೆ ಇಂದ್ರಿಯಗಳು ಕೂಡ ಇಲ್ಲ. ಇಂದ್ರಿಯಗಳಿಲ್ಲದ ಆ ಸ್ಥಿತಿ ಸ್ಫೂರ್ತಿ ಮೂಲಗಳಿಂದ ವಂಚಿತವಾಗಿರುತ್ತದೆ–ಅಂದರೆ ಮಜಾ ಮಾಡಿರುವ ಮೂಲಗಳಿಂದ ಕೂಡ. ಇಲ್ಲವಿದ್ದರೆ ನೋಡಿ: ಸಂತೋಷಗಳಿಂದ ಪೂರ್ತಿ ಮುಕ್ತನಾದ ವ್ಯಕ್ತಿ ಯಾವುದೋ ಒಂದು ರೀತಿಯ ಸಂತೋಷ ಪಡೆಯುತ್ತಿರಬೇಕು. ಅಲ್ಲವೆ?




ಫೆಬ್ರವರಿ 5, 1997

ಬ್ಲೂ ಮುದಿಯಾಸ್ ತಂದ ಆಪತ್ತು


ಕರ್ನಾಟಕದ 'ಬ್ಲೂ ಮುದಿಯಾಸ್'ಗಳ ಕಾಮಲೋಕ ಜಗಜ್ಜಾಹೀರು ಆಗಿತ್ತು. ಈಗ ಚೆಂಡು ಸ್ಪೀಕರ್ ಅಂಗಳಕ್ಕೆ ಬಂದುಬಿದ್ದಿದೆ. ಅವರೋ ಸದಾ ರಾಜ್ಯದ ಹಿತವನ್ನೇ ಬಯಸುವವರು. ಐವರು ಪಕ್ಷೇತರ ಶಾಸಕರ ಸದಸ್ಯತ್ವವನ್ನು ಕಿತ್ತು ಬಿಸಾಕಿದರಲ್ಲಾ ಯಾಕೆ ಅಂತೀರಾ. ಆ ಪಾಪಿ ಮುಂದೇವು ಹೇಗಿದ್ದರೂ ಯಡ್ಯೂರಪ್ಪನೋರಿಗೆ ಮತ ಹಾಕಲ್ಲ, ಹಂಗೇನಾದರೂ ಆದರೆ ಸರ್ಕಾರ ಅನ್ನೋದು ಚೆಂಡಾಡಿ ಹೋಗುತ್ತೆ. ಆಗ ಮತ್ತೆ ಚುನಾವಣೆ ಅನಿವಾರ್ಯ ಆಗುತ್ತೆ. ಅದೇನು ವಸಿಖರ್ಚಿನ ಬಾಬತ್ತಾ. ಏನಿಲ್ಲ ಅಂದರೂ ನಾಲ್ಕು ಸಾವಿರ ಕೋಟಿಯಾದರೂ ಆಗುತ್ತದೆ. ಈ ಹೊರೇ ಜನರ ಮೇಲೆ ಹೇರಬಾರದು ಅಂತೆಲ್ಲ ಯೋಚಿಸಿ ಮತ ನೀಡಲ್ಲ ಅಂತ ಗೊತ್ತಾದ ಐವರ ಸದಸ್ಯತ್ವವನ್ನು ಕಿತ್ತುಹಾಕಿದರು. ಆ ಶಾಸಕರು ಸುಪ್ರೀಂಕೋರ್ಟ್‌ಗೆ ಹೋದರು. ಅದು ಸ್ಪೀಕರ್ ವರ್ತನೆ ಬಗ್ಗೆ ಛೀಮಾರಿ ಹಾಕ್ತು ಅನ್ನೋದು ಅಲಾಯಿದ ಇರಲಿ.

ಚುನಾವಣೆ ತಡೀಬೇಕು ಅನ್ನೊ ಸದುದ್ದೇಶದಿಂದ ಸ್ಪೀಕರ್ ಸಾಹೇಬರು ಹಿಂಗೆ ಮಾಡಿ ಹೆಂಗೋ ಸರ್ಕಾರ ಉಳಿಸಿದ್ದರಲ್ಲಾ. ಈಗ ಮೂವರು ಮಂತ್ರಿಗಳು ಸದನದಲ್ಲಿ ರಂಗೀಲಾ ಆಟ ಆಡೋಕೆ ಹೋಗಿ ತಗುಲಾಕ್ಕಂಡವ್ರೆ. ಹಿಂದೆ ಮಾಡಿದಂತೆ ಇವರ್‍ನೂ ಕಿತ್ತೆಸೆಯಬಹುದು. ಚುನಾವಣೆ ಏನೂ ನೆತ್ತಿ ಮೇಲೆ ಕುಂತುಕೊಳ್ಳುವುದಿಲ್ಲ, ನಿಜ, ಆದರೆ ಸ್ಪೀಕರ್ ಅವರ ಧರ್ಮಸಂಕಟ ನೋಡಿ ಈ ಮಂತ್ರಿಗಳು, ಶಾಸಕರುಗಳು ಹೆಂಗಿದ್ದಾರೆ ಅಂದರೆ ಹುಟ್ಟಿದಾಗಿನಿಂದ ಹೆಣ್ಣನ್ನೇ ಕಂಡಿಲ್ಲವೇನೋ, ದುಡ್ಡನ್ನೇ ನೋಡಿಲ್ಲವೇನೋ ಅನ್ನೋ ತರಹ ಕಂಡದ್ದನ್ನೆಲ್ಲ ಮುಕ್ಕುತ್ತಾ ಕುಂತವೆ. ಯಾರು ಯಾವತ್ತು ಎಲ್ಲಿ ಸಿಗಾಕಿಕೊಳ್ಳುತ್ತಾರೋ ಹೇಳುವುದಕ್ಕೆ ಬರುವುದಿಲ್ಲ, ಇಂತಹವರನ್ನೆಲ್ಲ ಕಿತ್ತಾಕ್ತ ಕುಂತ್ರೆ ಆಮೇಲೆ ಕೀಳೋಕೆ ಏನೂ ಇರದಂತೆ ಆದರೂ ಆಗಬಹುದು. ಚುನಾವಣೆ ಅನಿವಾರ್ಯ ಆಗಬಹುದು. ಜನರ ಬಗ್ಗೆ ಕಾಳಜಿ ಇರೋರಲ್ವ ಸ್ಪೀಕರ್ ಸಾಹೇಬರು; ಜನರ ಮೇಲೆ ಹೊರೆ ಬೀಳಬಾರದು. ಇದ ಹೆಂಗೆ ನಿಭಾಯಿಸಬೇಕು ಅಂತಾವ ಬಾರಿಬಾರಿ ಯೋಚಿಸಿ 'ಸದನ ಸಮಿತಿ' ಅನ್ನೋ ತಿಪ್ಪೆ ಸಾರಿಸೋ ಸಮಿತಿ ನೇಮಿಸಿದ್ರು.

ಇದೇನಾಗಿದೆ ಈಗ ಅಂದರೆ ಸದನ ಸಮಿತಿ ನೇಮಿಸಿದ್ದೇ ತಾಪತ್ರಯಕ್ಕಿಟ್ಟುಕೊಂಡಿದೆ. ಭಾಜಪಗೆ ಮಾತ್ರ ಅಲ್ಲ, ವಿಪಕ್ಷಗಳಿಗೂ ತಲೆನೋವಿನ ಸಂಗತಿಯಾಗಿದೆಯಂತೆ. ವಿರೋಧ ಪಕ್ಷದವರು ಮೇಲುನೋಟಕ್ಕೆ ಸದನ ಸಮಿತಿ ಅವಶ್ಯಕತೆ ಇಲ್ಲ; ಅವರೇ ಒಪ್ಪಿಕೊಂಡಿರುವಾಗ ಇನ್ನೇನು ತನಿಖೆಯಾಗುವುದಿದೆ; ನಾವು ಸಮಿತಿಯನ್ನು ಬಹಿಷ್ಕರಿಸುತ್ತೇವೆ ಎಂದೆಲ್ಲ ಹಾರಾಡುತ್ತಿದ್ದಾರೆ ನಿಜ. ಆದರೆ ಒಳಗಿನ ಕಾರಣ ಬೇರೆಯೇ ಇದೆ. ಅಶ್ಲೀಲ ಚಿತ್ರವನ್ನು ಪೂರ್ತಿ ನೋಡಲಾಗಿಲ್ಲ, ಇನ್ನೂ ಒಳಗೆ ಎಂತಹ ಬಿಸಿಬಿಸಿ ದೃಶ್ಯಾವಳಿಗಳು ಇರುವುವೋ.



ತನಿಖೆ ಎಂಬ ಹೆಸರಿನಲ್ಲಿ ಅವೆಲ್ಲವನ್ನೂ ಮತ್ತೆಮತ್ತೆ ಆಸ್ವಾದಿಸುತ್ತಾ ಆನಂದಿಸಬಹುದು ಎಂದು ಶಾಸಕರು ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಿದ್ದಾರಂತೆ. ಅಂತಹವರಿಗೆ ತಮ್ಮನ್ನು ಬಿಟ್ಟು ಬೇರೆಯವರನ್ನು ನೇಮಕ ಮಾಡಿರುವುದು ಬೇಸರ, ಸಿಟ್ಟು ಬರಿಸಿದ್ದು ಎಲ್ಲರ ಮೇಲೂ ಕಂಡಾಬಟ್ಟೆ ಹಾರಾಡ್ತಾ ಇದ್ದಾರಂತೆ. ಆಗದವರ ಕತೆ ಹೀಗಾದರೆ, ನೇಮಕಗೊಂಡಿರುವವರ ಮನೆ ಎಂಬುದು ರಣರಂಗ ಆಗಿದೆಯಂತೆ. 'ಅಸೆಂಬ್ಲಿ' ಎಂದರೇ ಎಗರಿಬೀಳ್ತಾರಂತೆ. 'ಅಸೆಂಬ್ಲಿಗೆ ಹೋಗಿ ಬರ್‍ತೀನಿ ಕಣೆ' ಅಂದರೆ ಮುಗಿದೇಹೋಯಿತಂತೆ. 'ಯಾಕೆ ಬ್ಲೂಫಿಲಂ ನೋಡೋಕಾ' ಅಂತ ಮೇಲೇ ಬೀಳ್ತಾರಂತೆ. 'ಹಂಗಲ್ಲ ಕಣೆ ನಾನು ಸದನ ಸಮಿತಿ ಮೆಂಬರ್ ಅಲ್ವಾ. ಹೋಗಲೇಬೇಕು' ಅಂತ ವೈನ ಮಾಡೋಕೆ ಹೋದ್ರೆ 'ನಿಮ್ ಯೋಗ್ತಿ ನಂಗೆ ಗೊತ್ತಿಲ್ಲವಾ. ಅವುಳ್ಯಾವ್ಯೋಳೋ ಮಾನ ಗೆಟ್ಟೋಳು ಬಟ್ಟೆಬಿಚ್ಚಿ ಕುಣೀತಾಳೆ. ಅದ ನೀವು ಜೊಲ್ಲು ಸುರಿಸ್ತಾ ನೋಡ್ತಾ ಕುಂತಿರ್‍ತೀರಿ' ಅಂತ ಮಾನ ಹರಾಜು ಮಾಡ್ತರಂತೆ. 'ಹಂಗಲ್ಲ ಚಿನ್ನ' ಅಂತ ಪುಸಲಾಯಿಸೋಕೆ ಹೋದ್ರೆ 'ಹಂಗೂ ಇಲ್ಲ ಹಿಂಗೂ ಇಲ್ಲ ನಾ ಕಾಣೆನಾ ಗಂಡಸರ ಚಾಲಾ' ಅಂತ ಪುರುಷಜನ್ಮವನ್ನೇ ಜಾಲಾಡುತ್ತಿದ್ದಾರಂತೆ. 'ಬಿಲ್‌ಕುಲ್ ಹೋಗ ಕೂಡ್ದು' ಅಂತ ಚಂಡಿ ಚಾಮುಂಡಿ ಅವತಾರ ತಾಳುತ್ತಿದ್ದಾರಂತೆ. ಬಹಿರಂಗವಾಗಿ ಇದನ್ನು ಒಪ್ಪಿಕೊಳ್ಳಲಾರದ ಸಂಕಟಕ್ಕೆ ವಿಪಕ್ಷ ನಾಯಕರುಗಳು ಏನೇನೋ ಸಬೂಬು ಹೇಳುತ್ತಾ ಕುಂತವರಂತೆ!



ಎಚ್.ಎಲ್. ಕೇಶವಮೂರ್ತಿ

ಅಣಕ

ರೀಲಾ? ರಿಯಲ್ಲಾ?

ಗಂಡ ಹೆಂಡತಿ ಟಿವಿ ನೋಡುತ್ತಾ ಕುಂತಿದ್ರೊ. ಹುಟ್ಟಿದ ಹಬ್ಬದ ಸಡಗರ ಸಂಭ್ರಮ ತೋರಿಸುತ್ತಿದ್ದರು. ಯಾರದ್ದು ಅಂತೀರಿ. ಚಾಲೆಂಜಿಂಗ್ ಸ್ಟಾರ್‌ದು!

ಅಷ್ಟೆ ಆಗಿದ್ದರೆ ಪರವಾಗಿರಲಿಲ್ಲ, ಹೆಂ[...] ಅನ್ನಿಸಿಕೊಂಡೋಳು ಅವನಿಗೆ ಗಿಫ್ಟ್ ಬೇರೆ ಕೊಟ್ಟಿದ್ದಳಂ[...] ಅದು ದಿನಾ ಕೊಡೋ ಗಿಫ್ಟ್ ತರಹದ್ದು ಅಲ್ಲವಂ[...] ಹುಟ್ಟಿದ ಹಬ್ಬಕ್ಕೆ ಸ್ಪೆಷಲ್ ಗಿಫ್ಟು- ಜಾಗ್ವಾರ್ ಕಾರು!

ಹೊಟ್ಟೆ ಉರಿದುಹೋಯಿತು.

'ಹೆಂಡತಿ ಅಂದರೆ ಹಿಂಗಿರಬೇಕು' ಅಂದೆ.

'ಹಂಗೆ? ಹಂಗಾ?' ಕೊಂಕು ನುಡಿದಳು.

'ಅವುಳ ನೋಡಿ ಕಲಿತುಕೊ'

'ಏನನ್ನ ಕಲಿಯೋದು ಅವಳಿಂದ? ಗಂಡನ್ನ ಜೈಲಿ[...] ಕಳಿಸೋದ್ನ?'

'ಅಲ್ಲ ಕಣೆ ಗಂಡನಿಗೆ ಜಾಗ್ವಾರ್ ಕಾರು ಕೊಟ್ಟವ[...]'

'ಅವನಂಗೆ ನೀವೂ ಆಸ್ತೀನೆಲ್ಲ ನನ್ನೆಸರಿಗೆ ಬರೀರಿ.'

'ಬರೀತ್ತೀನಿ ತಗೊ.'

'ಬರೀರಿ ಮತ್ತೆ.'

'ಬರೀತೀನಿ. ಆಮೇಲೆ ಏನು ಮಾಡ್ತೀನಿ ಗೊತ್ತ?'

'ಏನ್ಮಾಡ್ತೀರಿ?'

'ವಾಪಸ್ಸು ಬರೆಸಿಕೊಳ್ತೀನಿ.'

'ಬರೆದು ಕೊಡಲ್ಲ ಅಂದ್ರೆ?'

'ಮುಸಡಿ ಮೇಲ್ಗೆ ನಾಲ್ಕು ಬಿಗಿದು ಉರಿಯೋ[...] ಸಿಗರೇಟಲಿ ಸುಡ್ತೀನಿ, ಗೊತ್ತ?'

'ಗೊತ್ತು. ಆಮೇಲೆ ನಾನೇನ್ಮಾಡ್ತೀನಿ ಗೊತ್ತ?'

'ಏನು ಮಾಡೋ ಹಂಗಿದೀಯೆ?'

'ಏನು ಮಾಡೋ ಹಂಗಿದೀನಾ..... ಪೊಲೀಸ್ ಕಂಪ್ಲೇಂಟ್ ಕೊಟ್ಟು ಜೈಲಿಗೆ ಕಳುಸ್ತೀನಿ.'

ಹೌದಾ!!

ಇವರದ್ದು ರಿಯಲ್ ಲೈಫಲ್ಲೂ ರೀಲಾ!

ಲಂಕೇಶರು ಹಾಕಿಕೊಟ್ಟ ಹಾದಿಯಲ್ಲಿ

ಸತ್ತವರ ಬಗ್ಗೆ ಒಳ್ಳೆಯದನ್ನೇ ಮಾತಾಡಬೇಕು ಅಂತ ಹೊಗಳಿ ನಾಲ್ಕಾರು ಸಾಲು ಬರೆದು ಕೈತೊಳೆದುಕೊಳ್ಳುವ ಕಾಲದಲ್ಲಿ ಚಿಂತನದ ಲಹರಿಯೊಂದಿಗೆ ವೈಚಾರಿಕತೆಯ ನಿರಂತರ ಸೆಲೆಯೊಂದನ್ನು ಪತ್ರಿಕೆ ಕಾಯ್ದುಕೊಳ್ಳುತ್ತಿದೆಯೆಂದು, ಅಗಲಿದ ಆಚಾರ್ಯರ ಕುರಿತ ಗಂಭೀರ ಲೇಖನಗಳನ್ನು ಓದಿದಾಗ ಅನಿಸಿತು.

ಲಂಕೇಶರು ಹಾಕಿಕೊಟ್ಟ ಹಾದಿಯೆಂದರೆ ಇದುವೇ ಅಲ್ಲವೇ?

- ಡಾ.ಅಮೀರುದ್ದೀನ್ ಖಾಜಿ, ವಿಜಾಪುರ


ಕಾಮನ ಬಿಲ್ಲಿಗೆ ಏಳುಬಣ್ಣ, ಕಾಮನ ಬಾಣಕ್ಕೆ ನೂರಾರು ವರ್ಣ. ಕಮಲದ ಮೂಲ ಬಣ್ಣ ಗುಲಾಬಿ ಅಧಿಕಾರ ಸಿಕ್ಕಾಗ ಖುಷಿಯಿಂದ ಬಿಳಿಯಾಯ್ತು, ನಂತರ ಬಣ್ಣ ಬಯಲಾಯ್ತು. ಆಪರೇಶನ್‌ನಿಂದ ರಕ್ತ ಅಂಟಿ ಕೆಂಪಾಯ್ತು, ಕೋಮುವಾದದಿಂದ ಕೇಸರಿಯಾಯ್ತು, ಪಕ್ಷೇತರರ ವಜಾದಿಂದ ಸೊರಗಿ ನೇರಳೆಯಾಯ್ತು, ತಮ್ಮಲ್ಲೇ ಕಚ್ಚಾಟ ಮತ್ಸರದಿಂದ ಹಸಿರಾಯ್ತು, ಗಣಿಧೂಳು ಮುಸುಕಿ ಕಪ್ಪಾಯ್ತು, ಭೂಹಗರಣದಿಂದ ಮಣ್ಣ ಬಣ್ಣವಾಯ್ತು, ಜೈಲಿಗೋಗಿ ಮುದುಡಿ ಹಳದಿಯಾಯ್ತು, ಈಗ ಬ್ಲೂಫಿಲಂನಿಂದ ನೀಲಿಯಾಯ್ತು.

ಕನ್ನಡಿಗರ ಆಸೆ-ನಿರೀಕ್ಷೆ ಬೂದಿಯಾಯ್ತು, ಕರ್ನಾಟಕದ ಮುಖ ಮಸಿಯಾಯ್ತು, ಎಲ್ಲಾ ಬಣ್ಣ ಒಟ್ಟು ಸೇರಿ ಕರಿಯಾಯ್ತು, ವರ್ಣರಂಜಿತ ನೈದಿಲೆ ಒಣಗಿ ವರ್ಣರಹಿತವಾಯಿತು. ಕಮಲದ ಮೇಲೆ ಕುಳಿತಿರುವ ಲಕ್ಷ್ಮಿ ಚಂಚಲೆ. ಕಮಲ ಪ್ರಿಯರೂ, ಮಹಾಚಂಚಲರು. ಮತದಾರರು ಮಾತ್ರ ಗಾಂಪರು!

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

ರಾತ್ರಿ ಬೆಳಗಾಗುವುದರೊಳಗೆ ಕರ್ನಾಟಕದ ಮೂರು ಜನ ಮಂತ್ರಿಗಳು ಸದನದಲ್ಲಿ ಬ್ಲೂಫಿಲಂ ನೋಡಿದ್ದಕ್ಕಾಗಿ ರಾಜೀನಾಮೆ ಕೊಟ್ಟಿದ್ದನ್ನು "ಇದ್ದಕ್ಕಿದ್ದಂತೆ ಇಲಿ ಪಾಶಾಣ ತಿಂದು ಸತ್ತ ಹೆಗ್ಗಣಗಳಂತೆ ಆದ ಸ್ಥಿತಿ" ಎಂದು 'ಕಟ್ಟೆ ಪುರಾಣ'ದಲ್ಲಿ ಬಿ. ಚಂದ್ರೇಗೌಡರ ಹೋಲಿಕೆ ಸರಿಯಾದುದು.

ಈ ರೀತಿ ರಾಜೀನಾಮೆ ಪಡೆದಿದ್ದು ಬಿಜೆಪಿಯ ತತ್ವ ಸಿದ್ಧಾಂತವೇನಲ್ಲ, ಈಗ ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಮಹಾಚುನಾವಣೆಯಲ್ಲಿ ಈ ಘಟನೆಯನ್ನು ಇವರ ರಾಜಕೀಯ ವಿರೋಧಿಗಳು ಬಳಸಿಕೊಂಡು ಇವರ ಜನ್ಮ ಜಾಲಾಡಿಸುತ್ತಾರೆಂದು ಮತ್ತು ಅಲ್ಲಿ ಕುಸಿಯುತ್ತಿರುವ ಬಿಜೆಪಿಯ ಜನಪ್ರಿಯತೆ ಇನ್ನೂ ಪಾತಾಳ ಸೇರಬಹುದೆಂದು ಹೆದರಿಕೆ ಅಷ್ಟೇ. ಅದಕ್ಕಾಗಿಯೇ ಬಿಜೆಪಿ ಹೈ ಕಮಾಂಡ್ ಈ ಬ್ಲೂಫಿಲಂ ಸಚಿವರಿಂದ ರಾಜೀನಾಮೆ ಪಡೆಯುವ ಪ್ರಹಸನ ನಡೆಸಿದೆ.



ಇದರ ಮುಂದುವರಿಕೆಯಾಗಿ ಸ್ಪೀಕರ್ ಬೋಪಯ್ಯನವರ ಮೂಲಕ ಒಂದು 'ಸದನ ಸಮಿತಿ' ರಚಿಸಿ, ಈ ಘಟನೆಗೆ ತಿಪ್ಪೆ ಸಾರಿಸಿ ಮತ್ತೆ ಇವರುಗಳನ್ನೇ ಇನ್ನೊಂದು ರೀತಿಯ ಸ್ಥಾನಮಾನದಲ್ಲಿ ಮುಂದುವರೆಸಿಕೊಂಡು ಹೋಗುವ ವ್ಯವಸ್ಥೆಯನ್ನು ಮಾಡಿದೆ. ಬಿಜೆಪಿಯ ಉದ್ದೇಶವಿಷ್ಟೆ: ಸಿಗುವ ಅವಕಾಶಕ್ಕಾಗಿ ಕಾಯುತ್ತಾ ಕೂರುವುದು, ಸಿಕ್ಕಿದಾಗ ಎಲ್ಲವನ್ನು ದೋಚಿಕೊಂಡು ಪರಾರಿಯಾಗುವುದು.

- ಹೆಚ್.ಕೆ. ಈರಪ್ಪ, ಬೆಂಗಳೂರು

ಜಿಂದಾಲ್ ಕಂಪನಿಯವರು ಕೊಡುತ್ತಿರುವ ಪ್ರಶಸ್ತಿಯನ್ನು ಮಾಜಿ ಲೋಕಾಯುಕ್ತರಾದ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ತಿರಸ್ಕರಿಸಬೇಕು.

- ಬಸು ಎಚ್. ಗುಡಗುಂಟಿ, ಹುಗ್ಗಳ್ಳಿ

ಇಂದು ಕನ್ನಡ ಪತ್ರಿಕೋದ್ಯಮದಲ್ಲಿ ಗಂಭೀರವಾದ ಚರ್ಚೆ ಅಪರೂಪವಾಗುತ್ತಿರುವ ಸಂದರ್ಭದಲ್ಲಿ ಆ ತರಹದ (ವೈ ದಿಸ್ ಕೊಲವೆರಿ ಡಿ, ಚಾರ್ವಾಕ, ಜನವರಿ 25, 2012ರ ಸಂಚಿಕೆ) ಪ್ರಯತ್ನ ನಡೆಯುತ್ತಿರುವುದು ಬಹುಶಃ ಗೌರಿ ಲಂಕೇಶ್ ಪತ್ರಿಕೆಯಲ್ಲಿ ಮಾತ್ರ. "ಕೊಲವೇರಿ ಹಾಡಿನ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ" ಎಂದು ಧನುಷ್ ಟಾಂಟಾಂ ಮಾಡುತ್ತಲೇ ಐಐಎಂನಲ್ಲಿ ಆ ಹಾಡಿನ ಬಗ್ಗೆ ಭಾಷಣ ಮಾಡೋದು, ಬೆಂಗಳೂರಿನ ಪ್ಯಾಲೇಸ್ ಮೈದಾನದಲ್ಲಿ ಕೊಲವೆರಿ ಹಾಡಿಗಾಗಿ ಸಭೆ ನಡೆಸೋದು, ಹೀಗೆ ಕಾರ್ಪೊರೇಟ್ ಸಂಸ್ಕೃತಿಯನ್ನು ಬೆಳೆಸುತ್ತಿರುವಾಗ ಹಾಡಿನ ಸಾಂಸ್ಕೃತಿಕ ರಾಜಕಾರಣದ ಬಗ್ಗೆ ಶಿವಸುಂದರ್ ಗಂಭೀರವಾದ ಪೋಸ್ಟ್‌ಮಾರ್ಟಂ ಮಾಡಿರೋದು ಸ್ವಾಗತಾರ್ಹ. ಈ ಲೇಖನವನ್ನು ಓದಿದ ಮೇಲೆ ನನಗನ್ನಿಸಿದ್ದು ಇಷ್ಟು:

1. ಕೊಲವೆರಿ ಹಾಡಿನ ಸಂಗೀತ ನಿರ್ದೇಶಕ ಅನಿರುದ್ಧ್ ಧನುಷ್‌ನ ನೆಂಟ. ಇಳಯರಾಜ, ರೆಹಮಾನ್, ಹ್ಯಾರೀಸ್ ಜಯರಾಜ್, ಇಮಾನ್, ಜೇಮ್ಸ್ ವಸಂತ್ ಮುಂತಾದ ಹೆಸರಾಂತ ಸಂಗೀತ ನಿರ್ದೇಶಕರು ತುಂಬಿರುವ ತಮಿಳು ಚಿತ್ರರಂಗದಲ್ಲಿ ಅನಿರುದ್ಧ್ ತರಹದ ಎಳಸುಗಳು ಬೇರು ಬಿಡೋದು ಸುಲಭವಲ್ಲ, ಅದಕ್ಕಾಗಿ ಅನಿರುದ್ಧ್‌ನ ಪ್ರವೇಶಕ್ಕೆ ನಾಟಕೀಯ ತಿರುವು ಬೇಕಿತ್ತು, ಅದರ 'ಅರಂಗ್ರೇಟಂ'ಮೇ ಕೊಲವೆರಿ ಹಾಡಿನ 'ಲೀಕ್' ನಾಟಕ.

2. ಇಂದು ತಮಿಳುನಾಡಿನಲ್ಲಿ ದ್ರಾವಿಡ ಪಕ್ಷಗಳ ರಾಜಕೀಯ ಅಸ್ಥಿರತೆ ಹೆಚ್ಚಿದೆ. ಕೂಡಾಂಕುಲಂ ಅಣುವಿದ್ಯುತ್‌ಸ್ಥಾವರ ವಿರುದ್ಧ ಜನಸಾಗರ ನೆರೆದಿದೆ. ಮುಲ್ಲೈ ಪೆರಿಯಾರ್ ಅಣೆಕಟ್ಟು ಹೋರಾಟ ತೀವ್ರವಾಗಿದೆ. ಆಳುವ ಜನಕ್ಕೆ ಇಂತಹ ಜ್ವಲಂತ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಮತ್ತು ಜನರನ್ನು ದಿಕ್ಕು ತಪ್ಪಿಸಲು ಹೊಸ ತಂತ್ರ ಬೇಕಿದೆ. ಅದಕ್ಕೆ ವರದಾನವಾಗಿದ್ದು ಕೊಲವೆರಿ ಹಾಡಿನ ಜನಪ್ರಿಯತೆ. ಇಂದು ಪ್ರಭುತ್ವ ಸಾಂಸ್ಕೃತಿಕ ಗೊಂದಲಕ್ಕೆ ಎಲ್ಲಾ ರೀತಿಯ ಪ್ರಯತ್ನಕ್ಕಿಳಿದಿದೆ. ಈ ಸಾಂಸ್ಕೃತಿಕ ಗೊಂದಲಕ್ಕೆ ಧನುಷ್ ಮತ್ತು ಪಟಾಲಂನ ಕೊಡುಗೆ ಎಷ್ಟರಮಟ್ಟಿದ್ದೆಂದರೆ ಜಪಾನೀ ಪ್ರಧಾನಿಯ ಡೆಲ್ಲಿ ಔತಣಕೂಟದಲ್ಲಿ ಪಾಲ್ಗೊಳ್ಳುವಂತೆ ಆಮಂತ್ರಿಸಲಾಗಿತ್ತು.

3. ತಮಿಳು ಚಿತ್ರರಂಗದಲ್ಲಿ ಮಿಶ್ಕಿನ್, ಪ್ರಭುಸಾಲಮಾನ್, ಶಶಿಕುಮಾರ್, ಸಮುದ್ರಕಣಿ ಮುಂತಾದ ನಿರ್ದೇಶಕರು ವಿಭಿನ್ನ ಚಿತ್ರಗಳನ್ನು ನಿರ್ಮಿಸುವ ಪ್ರಯತ್ನದಲ್ಲಿ ತೊಡಗಿಸಿಕೊಂಡಿರೋ ಸಂದರ್ಭದಲ್ಲಿ ರಷ್ಯಾದ ಆಂಟನಿ ಚೆಕಾವ್‌ನ ಉತ್ತಮ ಕತೆ, ಉತ್ತಮ ಛಾಯಾಗ್ರಹಣ ಹೊಂದಿದ 'ಮೈನಾ' ಚಿತ್ರಕ್ಕೆ ಒಂದೇ ಒಂದು ಪ್ರಶಸ್ತಿ ಕೊಟ್ಟು ಧನುಷ್‌ನ 'ಆಡುಕಳಂ' ಚಿತ್ರಕ್ಕೆ ಆರು ರಾಷ್ಟ್ರಪ್ರಶಸ್ತಿಗಳನ್ನು ಕೊಟ್ಟಾಗಲೇ ಪ್ರಭುತ್ವ ಏನನ್ನು ಇಷ್ಟಪಟ್ಟಿದೆಯೆಂದು ಅರ್ಥವಾಗಬಹುದು.

ರಜನಿ ಆಗಲಿ, ಅಳಿಯ ಧನುಷ್ ಆಗಲಿ ಪಾಳೇಗಾರಿ ಮನೋಧರ್ಮದ ಪ್ರತೀಕವಾದ ಹೀರೋ ಕಲ್ಪನೆಗಳನ್ನು ಹುಟ್ಟುಹಾಕಿ ಪ್ರೋತ್ಸಾಹಿಸುತ್ತಿರುವವರು. ರಜನಿ ಚಿತ್ರದಲ್ಲಿ ಎಂದೂ ಹೆಣ್ಣನ್ನು ಪಾಳೇಗಾರಿ ಮನೋಧರ್ಮಕ್ಕಿಂತ ಬೇರೆಯದಾಗಿ ನೋಡೇ ಇಲ್ಲ.

ಈ ಎಲ್ಲ ಕಾರಣಗಳಿಂದ ಧನುಷ್‌ನ ಹಾಡಿನಲ್ಲಿ ಸಾಮಾಜಿಕ ಕಳಕಳಿಯಾಗಲಿ, ಬದ್ಧತೆಯಾಗಲಿ ಹುಡುಕುವುದು ದಡ್ಡತನ. ಇದನ್ನೇ ಪ್ರಸಿದ್ಧ ಸಂಗೀತ ನಿರ್ದೇಶಕರಾದ ಇಳೆಯರಾಜ ಮತ್ತು ಬರಹಗಾರ ಜಾವೇದ್ ಅಖ್ತರ್ ಹೇಳುತ್ತಿರುವುದು.

-ಎ.ನಾಗರಾಜನ್, ಬೆಂಗಳೂರು

ಫೆಬ್ರವರಿ 22ರ ಸಂಚಿಕೆಯಲ್ಲಿ 'ಅಯ್ಯೋ ರಾಮಾ ಇದು ಕಾಮ ಕಮಲ' ಎಂಬ ಪತ್ರಿಕೆ ಮುಖಪುಟ ಸಖತ್ತಾಗಿ ಮೂಡಿಬಂದಿದೆ. ಬಿಜೆಪಿ ಸರ್ಕಾರದ ಲಂಪಟ ಮಂತ್ರಿಗಳ ನೀಚವೃತ್ತಾಂತ ಓದುತ್ತಿದ್ದರೆ 'ಬಿಜೆಪಿ ಹಟಾವ್ಹೋ ಸಂಸ್ಕೃತಿ ಬಚಾವ್ಹೋ' ಅನ್ನುವ ಕಾಲ ಸನ್ನಿಹಿತವಾಗಿದೆ. ನರ್ಸ್ ರೇಣುಕನ ಹಡಬೆ ಪುರಾಣ, ಹಾಲಪ್ಪನ ಐನಾತಿಗುಣ, ಟಿವಿ ವರದಿಗಾರ್ತಿಯೊಬ್ಬರಿಗೆ ಪೋಲಿ ಎಸ್ಸೆಮ್ಮೆಸ್ ಕಳಿಸಿದ ಕಚ್ಚೆಹರುಕ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯ ಸ್ತ್ರೀಲೋಲತನ... ಇವೆಲ್ಲ ಜನರ ನೆನಪಿನಿಂದ ಮಾಸುವ ಮುನ್ನವೇ ಸದನ ಕಲಾಪದಲ್ಲಿ ಲಕ್ಷ್ಮಣ ಸವದಿ, ಸಿಸಿ ಪಾಟೀಲ, ಕೃಷ್ಣ ಪಾಲೇಮಾರ್ ಎಂಬ ಬದ್ಮಾಶರು ಬ್ಲೂಫಿಲಂ ವೀಕ್ಷಿಸಿ ಸಿಕ್ಕಿಬಿದ್ದಿರುವುದು ಈ ನಾಡಿನ ಜನತೆ ತಲೆತಗ್ಗಿಸುವಂತಹದ್ದು. ಆಚಾರವೇ ಸ್ವರ್ಗ ಅನಾಚಾರವೇ ನರಕವೆಂಬ ನಾಣ್ಣುಡಿಯನ್ನು ಹಾಳು ಮಾಡಿ ಅಧಿಕಾರದ ಮದದಿಂದ ಸೆಕ್ಸ್ ಸಿಡಿ ವೀಕ್ಷಣೆಯೇ ಸ್ವರ್ಗ, ಸದನ ಕಲಾಪವೇ ನರಕ ಎಂದು




'ಬದುಕಿದ ರೀತಿಯೇ ಮಾನದಂಡವಾಗಬೇಕು' ಎನ್ನುವ ನಿಮ್ಮ ಸಂಪಾದಕೀಯ ನುಡಿಗಳು ಚಿಂತನಾರ್ಹವಾಗಿವೆ. ಆಚಾರ್ಯರು ವ್ಯಕ್ತಿಗತವಾಗಿ ಪರಿಶುದ್ಧರು. ಆದರೆ ಜನಪರ, ಸಮಾಜಮುಖಿ ನಿಲುವು ಹೊಂದುವಲ್ಲಿ ಎಡವಿದ್ದು ಸಹಜ. ಆದರೂ ಅವರ ಒಳ್ಳೆಯತನ ಮತ್ತು ನಿರಂತರ ದುಡಿಮೆ ಮರೆಯುವಂತಹುದಲ್ಲ, ಬಿಜೆಪಿ ಸರ್ಕಾರದಲ್ಲಿ ಅವರಂಥ ಒಳ್ಳೆಯವರು ಇದ್ದುದರಿಂದಲೇ ಆ ಸರ್ಕಾರಕ್ಕೆ ಗೌರವ, ಅಂಥವರ ಅಗಲುವಿಕೆಗೆ ಸಾಂತ್ವನ ಹೇಳಬೇಕಾದುದು ಅಪೇಕ್ಷಣೀಯ.

ಇತ್ಯಾಶಿಷಃ

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ,
ತರಳಬಾಳು ಜಗದ್ಗುರು ಬೃಹನ್ಮಠ, ಚಿತ್ರದುರ್ಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ಬ್ಲೂಫಿಲಂ ಪ್ರಿಯ

ಯಡ್ಯೂರಪ್ಪನವರಿಗೆ ಎಲ್ಲವೂ ಅಯೋಮಯ ಆಗಿದೆಯಂತೆ.

ಮಠಾಧೀಶರು ಅಂದರೆ ಯಾರು? ಸರ್ವಸಂಗಪರಿತ್ಯಾಗಿಗಳು. ಅನ್ಯಾಯ, ರ್ಮಗಳ ವಿರೋಧಿಗಳು. ತಮ್ಮ ವಿರುದ್ಧ ವಿರೋಧಿಗಳು ಷಡ್ಯಂತ್ರ ಸಿದಾಗ ಬೀದಿಗಿಳಿದು ಹೋರಾಡಿದವರು. ಸದನದಲ್ಲಿ ಮೂವರು ಸಚಿವರು ಚಿತ್ರ ವೀಕ್ಷಿಸಿದ್ದರು. ಅದು ಸರ್ವಸಂಗ ಪರಿತ್ಯಾಗಿಗಳ ಗಮನಕ್ಕೂ ಬಂದಿತ್ತು ರೂ ಅವರು ಮೌನ ವಹಿಸಿದ್ದರು. ಧರ್ಮರಕ್ಷಕರ ಈ ನಡೆ ಸುದ್ದಿ ಮದವರಿಗೆ ಮಾದರಿ ಆಗಬೇಕಿತ್ತು ಆದರೆ ಆಗಲಿಲ್ಲ ಎನ್ನುವುದು ದುರಂತ!

ದೊಂದು ಆಕಸ್ಮಿಕ ಘಟನೆ. ಮಂತ್ರಿಗಳ ಬಳಿ ಮೊಬೈಲು ಇರುತ್ತೆ. ನ್ಯವಾಗಿ ಅದು ಅತ್ಯಾಧುನಿಕವಾಗಿಯೂ ಇರುತ್ತೆ. ಮಂತ್ರಿವರ್ಯರು ಅದನ್ನು ನಲ್ಲಿಟ್ಟಿರುತ್ತಾರೆ. ಯಾವಾಗಲೋ ಕೈ ತಾಕಿರುತ್ತೆ. ಯಾವುದೋ ಗುಂಡಿ ಮಿರುತ್ತೆ. ತೆಗೆದು ನೋಡಿದರೆ ಅಶ್ಲೀಲ ಚಿತ್ರ ಬರುತ್ತಿರುತ್ತೆ. ಕುತೂಹಲದಿಂದ ದಿರುತ್ತಾರೆ. ಇಂತಹ ಚಿತ್ರಗಳೇ ಹಾಗೆ. ಕೆಲವು ಸಮಯ ಮಾತ್ರ ಕುತೂಹಲ ಡಿಸುತ್ತವೆ. ನಂತರ ಬೇಸರ ತರಿಸುತ್ತವೆ. ಇವರಿಗೆ ಹಾಗೆ ಆಗಿರುತ್ತದೆ. ಆಫ್ ತಿರುತ್ತಾರೆ. ನಡೆದಿರುವುದು ಇಷ್ಟೆ. ಇದರಲ್ಲಿ ತಪ್ಪೇನು ಇದೆ ಎಂಬುದೇ ವಾಗುವುದಿಲ್ಲ.

ಇಂತಹ ಘಟನಾವಳಿಗಳನ್ನು ವೈಭವೀಕರಿಸುವವರು ಬ್ಲೂಫಿಲಂ ಡುವುದೇ ಇಲ್ಲವೆ? ಅವರೂ ಮನೆಯ ಒಳಗೆ ಮಾಡುವುದು ಇದನ್ನೇ! ಆಟ್ಟೇಪಾರಿಗಳು ಇರಬಹುದು. ಅವರು ನೋಡೇ ಇಲ್ಲ ಎನ್ನಬಹುದು. ಡದೆ ಇದ್ದರೆ ತಾನೆ ಏನಂತೆ? ಅಲ್ಲಿ ತೋರಿಸುವುದು ಥಿಯರಿ ಅಷ್ಟೇ. ಹವರು ಪ್ರಾಕ್ಟಿಕಲ್ಲೇ ಮಾಡಿರುತ್ತಾರೆ! ಅದೂ ಸುಳ್ಳು ಅಂದ್ರೆ ಅವರ ಮಕ್ಕಳೇನು ತ್ರಕ್ಕೆ ಉದುರಿದವಾ?

ಇದನ್ನೆಲ್ಲ ಚಿಂತನಮಂಥನ ಮಾಡಿದ ಯಡ್ಯೂರಪ್ಪನವರು 'ನೀವೇನು ಯಲ್ಲಿ ಬ್ಲೂಫಿಲಂ ನೋಡೋದೇ ಇಲ್ವಾ' ಎಂದು ಮಾಧ್ಯಮದವರನ್ನು ಬರ್ರಿ ಜಾಡಿಸವ್ರೆ.

ಒಂದು ಸಣ್ಣ ಅನುಮಾನ. ಯಡ್ಯೂರಪ್ಪನವರು ಯಡ್ಡಯ್ಯೂರಪ್ಪ ಆದರಾ ವ. ಯಾಕೆ ಅಂತೀರಾ. 'ನೀವೇನು ಮನೆಯಲ್ಲಿ ಬ್ಲೂಫಿಲಂ ನೋಡೋದೆ ವಾ' ಅಂದರೆ ಎಲ್ಲರೂ ನೋಡುತ್ತಾರೆ. ನಾನೂ ಮನೆಯಲ್ಲಿ ನೋಡುತ್ತೇನೆ ಪರೋಕ್ಷವಾಗಿ 'ನಾನು ಬ್ಲೂಫಿಲಂ ಪ್ರಿಯ' ಅಂತ ಒಪ್ಪಿಕೊಂಡ ಹಾಗೆ ತೋ ಏನೋ ಅಂತಾವ. ಇನ್ನೂ ಒಂದು. ಮನೆ ಒಳಗೆ ಮಾಡುವುದನ್ನ ಯಲ್ಲಿ ಮಾಡಿದರೂ ಅಪರಾಧ ಅಲ್ಲ ಅಂದ ಹಾಗಾಯಿತಾ ಅಂತ....

ಸಿದಂತಿರುವ ಈ ನಾಲಾಯಕರ ಬಣ್ಣ ಬಯಲು ಮಾಡಿರುವ 'ಲಂಕೇಶ್' ಕೆಗೆ ವಂದನೆಗಳು...

-ರಮಜಾನ ಕೆ.ಕೊರ್ತಿ, ಬಾದಾಮಿ

ಮಂಗಳೂರಿನ ಕಾವೂರು ಬಳಿ ಮರಕಡ ಎಂಬ ಜಾಗವಿದೆ. ಇಲ್ಲಿ ಕೃಷ್ಣ ರೇಮಾರನ ಬಲಗೈ ಬಂಟ ಮರಕಡಸ್ವಾಮಿ ಮಾಟಮಂತ್ರ ಹೇಳಿ ರೇಮಾರನಿಗೆ ಜಮೀನು ಒದಗಿಸಿಕೊಡುತ್ತಾನೆ. ಮರಕಡಸ್ವಾಮಿ ಮೂಲತಃ ಎಲೆಕ್ಟ್ರಿಷಿಯನ್. ಅವನ ಹೆಸರು ನರೇಂದ್ರ. ಇವನು ಪಾಲೇಮಾರ್‌ನ ಬಂಧಿ. "ನಾನು ದೇವಿ ದರ್ಶನ ಪಡೆದಿರುವ" ಎನ್ನುವ ಅವನಿಗೆ ರೇಮಾರನು ಮರಕಡದಲ್ಲೊಂದು ದೇವಸ್ಥಾನ ಕಟ್ಟಿಸಿಕೊಟ್ಟಿದ್ದಾನೆ. ಪಾಲೇಮಾರ್ ಮೇರಿ ಹಿಲ್‌ನಲ್ಲಿ ಬಡಕುಟುಂಬದ ಐದು ಎಕರೆ ಮಿಯನ್ನು ವಿಕಾಸ್ ಎಜ್ಯುಕೇಷನ್ ಟ್ರಸ್ಟ್ ಹೆಸರಲ್ಲಿ ನುಂಗಿ ವಿಕಾಸ್ ರು. ಕಾಲೇಜು ಆರಂಭಿಸಿದ್ದಾನೆ. 25 ಕೋಟಿ ಬೆಲೆಬಾಳುವ ಇವನ ಮ ಚಟುವಟಿಕೆಗಳಲ್ಲಿ ಸ್ಥಳೀಯ ಭಜರಂಗಿ, ವಿಹೆಚ್‌ಪಿ ಮತ್ತು ಆರೆಸ್ಸೆಸ್ ಕೊಡುತ್ತಿವೆ.

ಉಸ್ತುವಾರಿ ಮಂತ್ರಿಯಾಗಿ ಪಾಲೇಮಾರ್ ಮಂಗಳೂರಿನ ಭೂ ಮಾಫಿಯಾ ಗೂ ಬಿಲ್ಡರ್ ಮಾಫಿಯಾಗಳಿಗೆ ರಕ್ಷಣೆ ನೀಡುವುದರಲ್ಲೇ ಕಾಲ ಕಳೆದಿದ್ದಾನೆ.

- ವಿನಯ್ ಶೆಟ್ಟಿ, ಮಂಗಳೂರು

'ಹುಳಿಮಾವು ಮತ್ತು ನಾನು' (ಭಾಗ 30ರಲ್ಲಿ) "ಆ ಉಡುಪುಗಳು ಷ್ಟು ವಿಚಿತ್ರವಾಗಿದ್ದವೆಂದರೆ ಅವು ಒಂದು ರೀತಿಯಲ್ಲಿ ಹಳ್ಳಿಗಾಡಿನ ರೈತರು ಸುವ ಬನಿಯನ್ ತರಹ ಇದ್ದವು' ಎಂದು ಬರೆದಿರುವುದು ಎಂತಹ ರಹಂಕಾರದ ಮಾತು?!

ಇಂದಿರಾ ಲಂಕೇಶ್ ಅವರು ತಾವು ಹಳ್ಳಿಯಿಂದ ಬಂದವರು ಎಂದು ಂಭದಲ್ಲಿ ಹೇಳಿಕೊಂಡಿದ್ದರು. ಮೇಡಂ, ಹಳ್ಳಿಗಾಡಿನವರು ತೊಡುವುದು ಚಿತ್ರ ಉಡುಪು'ಗಳೇ?

- ಸಂತೋಷ್ ಗುದ್ದಿಯಂಗಡಿ, ಎಸ್ ಎಂ ಎಸ್ ಮೂಲಕ

(ಸಂತೋಷ್, ಇಂದಿರಾ ಅವರು ಲಂಕೇಶರು ಡಿಸೈನ್ ಮಾಡಿದ್ದ ಡುಪುಗಳು ಅತ್ತ ಶರ್ಟೂ ಅಲ್ಲ, ಇತ್ತ ಜುಬ್ಬವೂ ಅಲ್ಲ, ಹಾಗೆಯೇ ಗಾಡಿನ ಜನರು ಧರಿಸುವ ಬನಿಯನ್ ತರಹವೂ ಇರಲಿಲ್ಲ ಎಂದು ಳಲು ಇಷ್ಟಪಟ್ಟಿರಬೇಕು. ಅವರಿಗೆ ಹಳ್ಳಿಗಾಡಿನ ಜನರು ತೊಡುವ ಉಡುಪುಗಳ ಯಾವ ಅಸಹನೇ ಇಲ್ಲವೇ ಇಲ್ಲ - ಸಂ)


'ಹುಳಿ ಮಾವು ಮತ್ತು ನಾನು' ತುಂಬಾ ಚೆನ್ನಾಗಿ ಬರುತ್ತಿದೆ. ಆದರೆ ವೊಂದು ಸಲ ಪತ್ರಿಕೆ ನಮಗೆ ಮಿಸ್ ಆಗಿದೆ. ಆದ್ದರಿಂದ ಅದಷ್ಟು ಗ ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ.

- ಪ್ರೇಮ ಸಿ. ಸಾಗರ

ಪ್ರೀತಿಯ ಗೌರಿ ಅಕ್ಕ, ನೀವು ಹೀಗೆ ಮೋಸ ಮಾಡಬಾರದಿತ್ತು, ನಾನು ಸಿ ತಿಂಗಳ ಮೊದಲೇ ನಾನು ಮತ್ತು ಅಪ್ಪನಿಗೆ ಬೆಂಗಳೂರಿಗೆ ಟಿಕೆಟ್ ಸಿ ಎಲ್ಲ ತಯಾರಿ ಮಾಡಿಕೊಂಡಿದ್ದರೆ ನೀವು ಮಾರ್ಚ್ 11ರ ರ್ಯಕ್ರಮವನ್ನು ಮಂಗಳೂರಿನಲ್ಲಿ ಅರೇಂಜ್ ಮಾಡಿದ್ದೀರಿ. ಅದಕ್ಕೆ ನಾವು ಸಲ ಲಂಕೇಶರ ಹುಟ್ಟುಹಬ್ಬದ ಕಾರ್ಯಕ್ರಮಕ್ಕೆ ಬರಲಾಗುವುದಿಲ್ಲ, ಪ್ರ ಬೋಧಿಸಿಂದ.

- ಸುಷ್ಮಾ, ಸಾಗರ

ಅಂಬಿಗೆ ಅರವತ್ತು



ಬರುವ ಮೇ 30ರಂದು ರೆಬಲ್‌ಸ್ಟಾರ್ ಅಂಬರೀಷ್ ಅವರಿಗೆ 60 ವರ್ಷ ತುಂಬುತ್ತದೆ. ಆ ಪ್ರಯುಕ್ತ 'ಅಂಬಿ - 60 ಸಮಾರಂಭ'ವನ್ನು ವಿಶೇಷವಾಗಿ ಮಾಡಬೇಕೆಂದು ಅವರ ಅಭಿಮಾನಿಗಳು ಈಗಾಗಲೇ ಹಲವಾರು ಯೋಜನೆಗಳನ್ನು ರೂಪಿಸುತ್ತಿದ್ದಾರೆ.

ಅದ್ಧೂರಿಯಾದ ಅಭಿನಂದನಾ ಸಮಾರಂಭದೊಂದಿಗೆ ಅಂಬರೀಷ್ ನಾಯಕನಾಗಿ ನಟಿಸಿರುವ ಹೊಸ ಚಿತ್ರದ ಬಿಡುಗಡೆ, ಅಂಬಿಯ ಆತ್ಮಚರಿತ್ರೆ ಪುಸ್ತಕದ ಲೋಕಾರ್ಪಣೆ, ಅಂಬಿಯ ಹೆಸರಿನಲ್ಲಿ ಕ್ರಿಕೆಟ್ ಪಂದ್ಯಾವಳಿ, ಜೊತೆಗೆ ಯಾವುದಾದರೊಂದು ವಿಶ್ವವಿದ್ಯಾನಿಲಯದಿಂದ ಅಂಬಿಗೆ ಡಾಕ್ಟರೇಟ್ ಗೌರವವನ್ನು ಪ್ರಧಾನ ಮಾಡಿಸುವುದು... ಇಂತಹ ಹತ್ತು ಹಲವು ಯೋಜನೆಗಳನ್ನು ಅವರ ಅಭಿಮಾನಿಗಳು ಹೊಂದಿದ್ದಾರೆ.

ಅಂಬಿಯ ಹುಟ್ಟುಹಬ್ಬಕ್ಕೆ ಇನ್ನೊಂದು ತಿಂಗಳು ಮಾತ್ರ ಉಳಿದಿರುವುದರಿಂದ ಅವರು ನಾಯಕನಾಗಿ ನಟಿಸಲಿರುವ ಹೊಸ ಸಿನಿಮಾ ತರಾತುರಿಯಲ್ಲಿ ಸೆಟ್ಟೇರುತ್ತಿದೆ. ಈ ಚಿತ್ರದ ಹೆಸರು 'ಚೌಡಯ್ಯ'. ಇದರ ಮುಹೂರ್ತ ಬರುವ ಮಾರ್ಚ್ 2 ರಂದು ಅಂಬರೀಷ್ ಅವರ ಮನೆಯಲ್ಲೇ ಬೆಳಗ್ಗೆ 6.30 ಕ್ಕೆ ನಡೆಯಲಿದೆ. ಒಂದೇ ಶೆಡ್ಯೂಲ್‌ನಲ್ಲಿ ಈ ಚಿತ್ರವನ್ನು ಮುಗಿಸಲು ಯೋಚಿಸಿರುವ ಅದರ ನಿರ್ಮಾಪಕ - ನಿರ್ದೇಶಕ ಎಸ್.ನಾರಾಯಣ್ ಅಂಬಿ ಹುಟ್ಟುಹಬ್ಬದ ದಿನದಂದೇ ಅದನ್ನು ಬಿಡುಗಡೆ ಮಾಡುವ ಸ್ಕೆಚ್ ಹಾಕಿಕೊಂಡಿದ್ದಾರೆ. ಅಂದರೆ 'ಅಂಬಿ-60'ಗಾಗಿ ಒಂದು ಸಿನಿಮಾ ಬಿಡುಗಡೆ ಕಾರ್ಯಕ್ರಮವೂ ಗಾಂಧಿನಗರದಲ್ಲಿ ನಡೆಯುತ್ತಿದೆ ಎಂದಾಯಿತು.

'ಚೌಡಯ್ಯ' ಹೆಸರು ಕೇಳಿದಾಕ್ಷಣ ಕೆಲವರಿಗೆ ಮೈ ಪುಳಕವಾಗಬಹುದು. ಏಕೆಂದರೆ ಅಂಬರೀಷ್ ಖ್ಯಾತ ಪಿಟೀಲುವಾದಕ ಚೌಡಯ್ಯ ಅವರ ಮೊಮ್ಮಗ. ಆದರೆ ಆ ಚೌಡಯ್ಯನಿಗೂ ಈ ಚೌಡಯ್ಯನಿಗೂ ಏನೂ ಸಂಬಂಧವಿಲ್ಲ ಎಂದು ನಾರಾಯಣ್ ಸ್ಪಷ್ಟಪಡಿಸಿದ್ದಾರೆ. "ಈ ಚಿತ್ರದಲ್ಲಿ ಅವರ ತಾತನ ತರಹ ಅಂಬರೀಷ್ ಪಿಟೀಲು ಬಾರಿಸುವುದಿಲ್ಲ. ಅಂದರೆ ಈ ಚಿತ್ರದಲ್ಲಿ ವಯಲಿನ್ ಮತ್ತು ವಯಲೆನ್ಸ್ ಎರಡೂ ಇಲ್ಲ" ಎಂದು ನಾಣಿ ಹೇಳಿದ್ದಾರೆ.

ಅಂಬರೀಷ್ ಅವರ ಮನೆಯಲ್ಲೇ ಬೆಳಗ್ಗೆ 6.37 ಕ್ಕೆ ಮುಹೂರ್ತ ಮಾಡುವ ಮುಖಾಂತರ ಎಸ್. ನಾರಾಯಣ್ ತನ್ನ ಜಾಣ್ಮೆಯನ್ನು ಮತ್ತೊಮ್ಮೆ ತೋರಿದ್ದಾರೆ. ಮೊದಲನೆಯದಾಗಿ ಅಂಬಿ ಅಭಿಮಾನಿಗಳು ಅಂಬಿ ಮನೆಯಲ್ಲಿನ ಈ ಮುಹೂರ್ತವನ್ನು ಯಾವ ಕಾರಣಕ್ಕೂ ಮಿಸ್ ಮಾಡಿಕೊಳ್ಳುವುದಿಲ್ಲ. ಎರಡನೆಯದಾಗಿ ಈ ಮುಹೂರ್ತವನ್ನು ನಾಣಿ ಬೇರೆಯಲ್ಲಾದರೂ ಮಾಡಲು ಹೊರಟಿದ್ದರೆ ಬೆಳಗ್ಗೆ 6.30ಕ್ಕೆ ಅಂಬರೀಷ್ ಮೇಕಪ್ ಸಮೇತ ಅಲ್ಲಿಗೆ ಹಾಜರಾಗುವ ಸಾಧ್ಯತೆ ಖಂಡಿತ ಇರುತ್ತಿರಲಿಲ್ಲ!

ಅರವತ್ತು ಗಡಿಯತ್ತ ಸಾಗುತ್ತಿರುವ ಅಂಬರೀಷ್‌ಗೆ ಚಿತ್ರೋದ್ಯಮದಲ್ಲಿ ಈ ಹಿಂದೆ ಇದ್ದಷ್ಟು ವರ್ಚಸ್ಸು ಈಗಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಎರಡು ವರ್ಷಗಳ ಹಿಂದೆ ಅಶೋಕ್ ಖೇಣಿ ಎಂಬ ಖದೀಮನ ಹುಟ್ಟುಹಬ್ಬದ ಸಮಾರಂಭಕ್ಕೆ ಅಂಬಿ ಉದ್ಯಮದ ಹಲವು ನಟ-ನಟಿಯರನ್ನು ಮಂಡ್ಯಕ್ಕೆ ಕರೆದುಕೊಂಡು ಹೋಗಿದ್ದನ್ನು ಕೆಲವರು ಇಷ್ಟಪಟ್ಟಿರಲಿಲ್ಲ. ಅಷ್ಟೇ ಅಲ್ಲದೆ, ಕೇವಲ ಒಂದೆರಡು ಕೋಟಿ ರೂ.ಗಳಿಗಾಗಿ ಕನ್ನಡ ಸಿನಿಮಾದ ಕ್ರಿಕೆಟ್ ಟೀಮನ್ನು ಅದೇ ಖೇಣಿಗೆ ಅರ್ಪಿಸಿದ್ದಾರೆ ಅಂಬರೀಷ್ ಎಂಬ ಅಪಸ್ವರದ ಮಾತುಗಳು ಕೂಡ ಈಗ ಕೇಳಿಬರುತ್ತಿದೆ.

ಅದೆಲ್ಲ ಏನೇ ಇದ್ದರೂ ಅಂಬರೀಷ್ ಚಿತ್ರೋದ್ಯಮದಲ್ಲಿ ಅಜಾತಶತ್ರು ಎಂಬುದರ ಬಗ್ಗೆ ಎರಡು ಮಾತಿಲ್ಲ. ಈಗ ಸೆಲೆಬ್ರಿಟಿ ಕ್ರಿಕೆಟ್ ತಂಡದ ಪ್ರಮುಖರಾದ ಸುದೀಪ್ ಮತ್ತು ದರ್ಶನ್ ಅಂಬರೀಷ್ ಅವರ ಜೊತೆಗಿದ್ದಾರೆ. ರಾಜ್ ಕುಟುಂಬದೊಂದಿಗೂ ಅಂಬಿ ನಿಕಟ ಸಂಬಂಧ ಇಟ್ಟುಕೊಂಡಿರುವುದರಿಂದ ಹೆಡ್‌ಆಫೀಸ್‌ನವರೂ ಅಂಬಿ-60 ಸಮಾರಂಭದಲ್ಲಿ ಭಾಗವಹಿಸುತ್ತಾರೆ. ಆಫ್‌ಕೋರ್ಸ್, ವಿಷ್ಣುವರ್ಧನ್ ಅಂಬಿಯ ಆಪ್ತ ಗೆಳೆಯರಾಗಿದ್ದವರು, ಆದ್ದರಿಂದ ವಿಷ್ಣು ಕುಟುಂಬವೂ ಅಲ್ಲಿರುತ್ತದೆ. ಕ್ರೇಜಿ ಸ್ಟಾರ್ ರವಿಚಂದ್ರನ್ ಕೂಡ ಎಷ್ಟೋ ವರ್ಷಗಳಿಂದ ತಮ್ಮ ಹುಟ್ಟುಹಬ್ಬವನ್ನು ಅಂಬರೀಷ್ ಹುಟ್ಟುಹಬ್ಬದ ಜೊತೆಗೇ ಆಚರಿಸಿಕೊಂಡು ಬರುತ್ತಿದ್ದಾರೆ.

ಚಿತ್ರೋದ್ಯಮದ ಹೊರಗೂ ಅಂಬರೀಷ್‌ಗೆ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಮತ್ತು ದೋಸ್ತ್‌ಗಳು ಇದ್ದಾರೆ. ರಾಜಕೀಯದಲ್ಲಿ ಶತ್ರುಘ್ನ ಸಿನ್ಹ ಮತ್ತು ಫಾರುಕ್ ಅಬ್ದುಲ್ಲಾ ಅಂಬಿಯ ಸ್ನೇಹಿತರು. ಹಾಗೆಯೇ ರಜನಿಕಾಂತ್, ಚಿರಂಜೀವಿ, ದಿಲೀಪ್‌ಕುಮಾರ್ ಅಂಬಿಯ ಸ್ನೇಹಿತರು. ಅಷ್ಟೇ ಅಲ್ಲದೆ, ಅನೇಕ ಕ್ರೀಡಾಪಟುಗಳು, ಉದ್ಯಮಿಗಳು ಕೂಡ ಅಂಬಿಗೆ ಬೇಕಾದವರು. ಅವರಲ್ಲಿ ಬಹಳಷ್ಟು ಜನ ಅಂಬಿಯ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು.

ಅಂದಹಾಗೆ, ಅಂಬಿ - 60 ಕಾರ್ಯಕ್ರಮಕ್ಕೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಆರ್ಥಿಕ ನೆರವು ನೀಡಬೇಕೆಂದು ಅಂಬಿಯ ಅಭಿಮಾನಿಗಳು ಕೇಳಿದರಂತೆ. ಆದರೆ ಅಂತಹ ಬೇಡಿಕೆಯನ್ನು ನಯವಾಗಿ ನಿರಾಕರಿಸಿರುವ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಕೆ.ಸಿ.ಎನ್. ಚಂದ್ರಶೇಖರ್ ಎಲ್ಲರಿಗೂ ಈ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅನುಕೂಲವಾಗುವಂತೆ ಬೇಕಾದರೆ ಒಂದೆರಡು ದಿನ ರಜಾ ಘೋಷಿಸುವುದಾಗಿ ಆಶ್ವಾಸನೆ ನೀಡಿದರಂತೆ.

ಇದೆಲ್ಲದರ ನಡುವೆ ಅಂಬರೀಷ್‌ಗೆ ಇಲ್ಲಿಯತನಕ ಕರ್ನಾಟಕದ ಯಾವುದೇ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡದಿರುವುದು ಅಂಬಿ ಅಭಿಮಾನಿಗಳಲ್ಲಿ ಬೇಸರಕ್ಕೆ ಕಾರಣವಾಗಿದೆ. ಆದ್ದರಿಂದ ಅವರು ಅಂಬಿ-60ರ ಸಂದರ್ಭದಲ್ಲೇ ತಮ್ಮ ನಾಯಕ 'ಡಾ. ಅಂಬರೀಷ್' ಎಂದೆನಿಸಿಕೊಂಡರೆ ಆ ಸಮಾರಂಭಕ್ಕೊಂದು ಕಳೆ ಬರುತ್ತದೆ ಎಂದು ಆಶಿಸುತ್ತಿದ್ದಾರೆ. ಯಾರಿಗೆ ಗೊತ್ತು ಅಷ್ಟರೊಳಗೆ ಯಾವುದಾದರೂ ಒಂದು ವಿಶ್ವವಿದ್ಯಾನಿಲಯ ಚಿತ್ರರಂಗದ ಈ ದಾನಶೂರ ಕರ್ಣನಿಗೆ ಗೌರವ ಡಾಕ್ಟರೇಟ್ ಪದವಿ ಘೋಷಿಸಿದರೆ ಅಚ್ಚರಿ ಇಲ್ಲ.

ಈಗ ತನ್ನ ಜೀವನದ 60ರ ಘಟ್ಟ ತಲುಪಿರುವ ಅಂಬರೀಷ್ ಕನ್ನಡ ಚಿತ್ರರಂಗ ಕಂಡ ಅತ್ಯಂತ ವರ್ಣರಂಜಿತ ನಾಯಕ ನಟ. ತನ್ನ ನೇರ ನಡೆ-ನುಡಿಗಳಿಂದ ಅಭಿಮಾನಿಗಳ ಹೃದಯವನ್ನು ಗೆದ್ದವರು ಇವರು. ಬರೀ ನಟನೆಯಿಂದ ಮಾತ್ರವಲ್ಲ, ಕ್ರಿಕೆಟ್, ಟೆನ್ನಿಸ್, ಕಾರ್ ರೇಸ್, ಇಸ್ಪೀಟ್, ಕುದುರೆ ರೇಸ್ ಹೀಗೆ ಹಲವಾರು ಕ್ರೀಡೆಗಳಲ್ಲೂ ತನ್ನನ್ನು ತೊಡಗಿಸಿಕೊಂಡು ಅಲ್ಲೂ ಅಭಿಮಾನಿಗಳ ಮನಸ್ಸು ಗೆದ್ದವರು. ಈ ಮಧ್ಯೆ ರಾಜಕೀಯದಲ್ಲೂ ಅತ್ಯಂತ ಸಕ್ರಿಯವಾಗಿ ಕಾಣಿಸಿಕೊಂಡಿರುವ ಅಂಬರೀಷ್ ಕೇಂದ್ರ ಸಚಿವರಾಗಿ ಮಾತ್ರ ಅತ್ಯಂತ ಕಡಿಮೆ ಅವಧಿಯಲ್ಲೇ 'ಔಟ್' ಆದವರು.

ಪುಟ್ಟಣ್ಣ ಕಣಗಾಲ್ ಅವರ 'ನಾಗರಹಾವು' ಚಿತ್ರದ ಒಂದು ಸಣ್ಣ ಪಾತ್ರದಿಂದ ಚಿತ್ರರಂಗಕ್ಕೆ ಕಾಲಿರಿಸಿದ ಅಂಬರೀಷ್ ಇವತ್ತು ಇಡೀ ಚಿತ್ರರಂಗದ ನಾಯಕನಾಗಿ ಬೆಳೆದು ನಿಂತಿರುವುದು ಅವರ ಸ್ನೇಹಪರತೆಗೆ ಸಾಕ್ಷಿ. 'ಅಂಬಿ-60' ಕಾರ್ಯಕ್ರಮ ಯಶಸ್ವಿಯಾಗಲಿ. ಆನಂತರ ಅಂಬಿ ಇನ್ನೂ ಹೆಚ್ಚಿನ ಜವಾಬ್ದಾರಿಯುತ ಸ್ಥಾನವನ್ನು ಚಿತ್ರರಂಗದಲ್ಲಿ ನಿರ್ವಹಿಸಲಿ ಎಂಬುದು ನಮ್ಮ ಸದಾಶಯ.

• ಶೆಣೈ

ಭರಣರ ಕಂಸಾಳೆ - ಕಲ್ಯಾಣ್ ಕೈಸಾಳೆ!





ನಾಗಾಭರಣ ನಿರ್ದೇಶನದ 'ಕಂಸಾಳೆ ಕೈಸಾಳೆ' ಚಿತ್ರ ಇನ್ನೇನು ಬಿಡುಗಡೆಯಾಗಲಿದೆ. ಈ ಚಿತ್ರದ ಸಂಗೀತ ನಿರ್ದೇಶಕರಾಗಿ ಕಲ್ಯಾಣ್ ಕಾರ್ಯ ನಿರ್ವಹಿಸಿದ್ದಾರೆ. ಆದರೆ ವಿಶೇಷವೇನೆಂದರೆ ಈ ಚಿತ್ರದ ಹಾಡುಗಳಿಗೆ ಕಲ್ಯಾಣ್ ತಮ್ಮ ಹೆಸರನ್ನು ಬಳಸಿಕೊಳ್ಳುವ ಬದಲಾಗಿ 'ಜನಪದ ಸಂಗ್ರಹ' ಎಂದು ನಮೂದಿಸಿದ್ದಾರೆ. ಇದಕ್ಕೆ ಒಂದು ಕಾರಣ ಇದೆ. ಈ ಹಿಂದೆ ಶಿವರಾಜ್‌ಕುಮಾರ್ ನಾಯಕನಟನಾಗಿ ನಟಿಸಿದ್ದ 'ಜನುಮದ ಜೋಡಿ' ಚಿತ್ರದ ಕಂಸಾಳೆ ಹಾಡು ಸಾಕಷ್ಟು ವಿವಾದವನ್ನು ಸೃಷ್ಟಿಸಿತ್ತು. ಈ ಹಾಡನ್ನು ಕವಿ ದೊಡ್ಡರಂಗೇಗೌಡ ಬರೆದಿದ್ದರು ಎಂದು ಪ್ರಚಾರ ಮಾಡಲಾಗಿತ್ತು. ಆ ಹಾಡಿಗಾಗಿ ಅವರಿಗೆ ರಾಜ್ಯ ಪ್ರಶಸ್ತಿಯೂ ದೊರಕಿತ್ತು. ಆದರೆ 'ವಾಸ್ತವವಾಗಿ ಆ ಹಾಡನ್ನು ಅವರು ಬರೆದಿಲ್ಲ, ಅದು ಜನಪದ ಹಾಡು' ಎಂದು ಅನೇಕರು ತಕರಾರು ಎತ್ತಿದ್ದರು.

ಈ ಹಿನ್ನೆಲೆಯಲ್ಲಿ ಕಲ್ಯಾಣ್ ಅಂತಹ ಯಾವ ತಕರಾರೂ ಬೇಡವೆಂದು 'ಜನಪದ ಸಂಗ್ರಹ' ಎಂದು ದಾಖಲಿಸುವ ಮೂಲಕ ಜನಪದ ಕಲಾವಿದರಿಗೆ ಕ್ರೆಡಿಟ್ ಕೊಟ್ಟಿದ್ದರೆ ಅಚ್ಚರಿ ಇಲ್ಲ.

ಹರ್ಷನ ಬಂಗಾರಿಗೆ ಮಿಸ್ ಆಯ್ತು ಚೆಂಗಾರಿ!





'ಚೆಂಗಾರಿ' ಚಿತ್ರದಲ್ಲಿ ಎರಡನೇ ನಾಯಕಿಯ ಪಾತ್ರ ಮಾಡಿರುವ ತೇಜು ಸದ್ಯ ಸುದ್ದಿಯಲ್ಲಿರುವ ನಟಿ. ಚಿತ್ರದ ಉದ್ದಕ್ಕೂ ಆಕೆಯಿಂದ "ರೇಪ್ ಮಾಡು, ರೇಪ್ ಮಾಡು" ಎಂಬ ಅಸಭ್ಯ ಡೈಲಾಗ್ ಹೇಳಿಸಿರುವ ನಿರ್ದೇಶಕ ಹರ್ಷ ವಾಸ್ತವವಾಗಿ ಆ ಪಾತ್ರವನ್ನು ತನ್ನ ಪತ್ನಿ ಸಿತಾರಾ ವೈದ್ಯ ಕೈಯಲ್ಲಿ ಮಾಡಿಸಬೇಕು ಎಂಬ ಹಂಬಲದಲ್ಲಿದ್ದರಂತೆ. ಹರ್ಷ ಈ ಹಿಂದೆ ನಿರ್ದೇಶಿಸಿದ್ದ 'ಗೆಳೆಯ' ಮತ್ತು 'ಬಿರುಗಾಳಿ' ಚಿತ್ರಗಳಲ್ಲೂ ತಮ್ಮ ಪತ್ನಿ ಸಿತಾರಾಗೆ ದೊಡ್ಡ ರೋಲ್‌ಗಳನ್ನು ಕೊಟ್ಟಿದ್ದರು. ಆದರೆ ಆ ಎರಡೂ ಚಿತ್ರಗಳು ಹೇಳಹೆಸರಿಲ್ಲದಂತೆ ನೆಲಕಚ್ಚಿದ್ದವು. ಆದರೂ 'ಚಂಗಾರಿ'ಯಲ್ಲೂ ಸಿತಾರಾಗೆ ಪಾತ್ರ ಕೊಡುವುದಾಗಿ ಹೇಳಿದ್ದ ಹರ್ಷ, ಕೊನೇ ಗಳಿಗೆಯಲ್ಲಿ ಅದನ್ನು ತೇಜುಗೆ ಕೊಟ್ಟರು ಎನ್ನುವುದು ಒಂದು ಮೂಲದ ಸುದ್ದಿ.

ಅಕಸ್ಮಾತ್ ಆ ಪಾತ್ರವನ್ನು ಹರ್ಷ ತನ್ನ ಹೆಂಡತಿಗೇ ಕೊಟ್ಟಿದ್ದರೆ, ಆಕೆಯ ಬಾಯಲ್ಲಿ ಗಂಟೆಗೆ ಮೂರು ಬಾರಿ "ರೇಪ್ ಮಾಡು, ರೇಪ್ ಮಾಡು" ತರಹದ ಕೊಳಕು ಡೈಲಾಗ್‌ಗಳನ್ನು ಹೇಳಿಸುತ್ತಿದ್ದರೆ?



ಮುಂಜಾನೆಯ ಮಬ್ಬು

ಗೋಲ್ಡನ್ ಸ್ಟಾರ್ ಗಣೇಶನ ಕತೆ ಎಲ್ಲಿಗೆ ಬಂದಿದೆ ನೋಡಿ!

ಕೆಲ ವರ್ಷಗಳ ಹಿಂದೆ ಗಣೇಶನ ಚಿತ್ರ ಸೆಟ್ಟೇರುತ್ತಿದ್ದಂತೆ ವಿತರಕರು ಅಡ್ವಾನ್ಸ್ ಹಣ ನೀಡಿ ಅದನ್ನು ಖರೀದಿಸುತ್ತಿದ್ದರು. ಆದರೀಗ ಗಣೇಶನ ಹತ್ತನ್ನೆರಡು ಚಿತ್ರಗಳು ಸಾಲಾಗಿ ಸೋತಿರುವುದರಿಂದ ಆತ ನಟಿಸಿರುವ, ಎಸ್.ನಾರಾಯಣ್ ನಿರ್ದೇಶಿಸಿರುವ 'ಮುಂಜಾನೆ' ಚಿತ್ರವನ್ನು ಕೊಳ್ಳುವವರೇ ಇಲ್ಲದಂತಾಗಿದೆ.

ಈ ಹಿಂದೆ ಇದೇ ನಾಣಿ-ಗಣೇಶ್ ಜೋಡಿ 'ಚೆಲುವಿನ ಚಿತ್ತಾರ' ಎಂಬ ರೀಮೇಕ್ ಚಿತ್ರವನ್ನು ಮಾಡಿ ಬಾಕ್ಸ್‌ಆಫೀಸನ್ನು ದೋಚಿತ್ತು. ಅದನ್ನು ನೋಡಿದ ನಿರ್ಮಾಪಕ ಕೊಬ್ರಿ ಮಂಜು ಅವರು ನಾಣಿ ನಿರ್ದೇಶನ ಮತ್ತು ಗಣೇಶ್ ನಾಯಕ ಆಗಿದ್ದ 'ಶೈಲೂ' ಎಂಬ ಮತ್ತೊಂದು ರೀಮೇಕ್ ಚಿತ್ರಕ್ಕೆ ಚಾಲನೆ ನೀಡಿದ್ದರು. ಮಂಜು ಲೆಕ್ಕಾಚಾರದ ಪ್ರಕಾರ 'ಚಿತ್ತಾರ'ದಂತೆ 'ಶೈಲೂ' ಕೂಡ ಹಿಟ್ ಆಗುತ್ತೆ ಎಂಬುದಾಗಿತ್ತು. ಆದರೆ 'ಶೈಲೂ' ಹಿಟ್ ಆಗುವುದಿರಲಿ, ಮಂಜುಗೆ ಬರೋಬ್ಬರಿ ಐವತ್ತು ಲಕ್ಷದಷ್ಟು ಕೈಕೊಟ್ಟಳು.



'ಶೈಲೂ' ಚಿತ್ರ ಇನ್ನೂ ನಿರ್ಮಾಣ ಹಂತದಲ್ಲಿರುವಾಗಲೇ ನಾಣಿ ಗಣೇಶನನ್ನು ಹಾಕಿಕೊಂಡು 'ಮುಂಜಾನೆ' ಎಂಬ ಇನ್ನೊಂದು ರೀಮೇಕ್ ಚಿತ್ರವನ್ನು ಆತುರಾತುರವಾಗಿ ಸುತ್ತಿಬಿಟ್ಟರು. ಈಗ ನೋಡಿದರೆ, 'ಶೈಲೂ' ಚಿತ್ರದ ಆಫ್ಟರ್ ಎಫೆಕ್ಟ್ ಎಂಬಂತೆ 'ಮುಂಜಾನೆ' ಚಿತ್ರವನ್ನು ಕೊಳ್ಳಲು ಒಬ್ಬೇಒಬ್ಬ ವಿತರಕನೂ ಧೈರ್ಯ ಮಾಡಿಲ್ಲ. ಈ ವಿಚಾರವನ್ನು ಸ್ವತಃ ನಾಣಿಯೇ ಮೊನ್ನೆ ಹೇಳಿಕೊಂಡಿದ್ದಾರೆ.

ಹೇಗಾದರೂ ಮಾಡಿ 'ಮುಂಜಾನೆ' ಚಿತ್ರವನ್ನು ಯಾರಿಗಾದರೂ ಮಾರಿ ಕೈತೊಳೆದುಕೊಳ್ಳಲು ಹೊಂಚು ಹಾಕಿರುವ ನಾಣಿ ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರಗಳಿಗೆ ಕೋಟಿ ಕೋಟಿ ಕೊಟ್ಟು ಖರೀದಿಸಿ ಭಾರೀ ಸುದ್ದಿ ಮಾಡುತ್ತಿರುವ ಸಮರ್ಥ ವೆಂಚರ್ಸ್‌ನ ಪ್ರಸಾದ್‌ಗೆ ಚಾಕ್ ಹಾಕುತ್ತಿದ್ದಾರೆ. ಪ್ರಸಾದ್ ಅವರು ನಾಣಿ ಬುಟ್ಟಿಗೆ ಬೀಳುತ್ತಾರೋ ಇಲ್ಲವೋ ಸದ್ಯಕ್ಕೆ ಗೊತ್ತಿಲ್ಲ.

ಅಲೆಮಾರಿಯ ಟ್ರೈಲರು!



ತೋಪೆದ್ದ ಸಿನಿಮಾ 'ಮಂದಾಕಿನಿ' ಖ್ಯಾತಿಯ ನಿರ್ಮಾಪಕ ಶ್ರೀನಿವಾಸ್ ಈಗ ಗಾಂಧಿನಗರದಲ್ಲಿ ಸದಾ ಸುದ್ದಿಯಲ್ಲಿರುತ್ತಾರೆ.

ಮೊನ್ನೆ ಮೊನ್ನೆತನಕ ನಿರ್ದೇಶಕ ಪ್ರೇಮ್ ಜೊತೆ 'ಅಡ್ಡ' ಎಂಬ ಟೈಟಲ್‌ಗಾಗಿ ಗುದ್ದಾಡುತ್ತಿದ್ದ ಶ್ರೀನಿವಾಸ್ ಈಗ ತಮ್ಮ ನಿರ್ಮಾಣದ 'ಅಲೆಮಾರಿ' ಚಿತ್ರದ ಮುಖಾಂತರ ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ.

'ಅಲೆಮಾರಿ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭವನ್ನು ಅರಮನೆ ಮೈದಾನದಲ್ಲಿ ಅತ್ಯಂತ ಅದ್ದೂರಿಯಾಗಿ ಮಾಡಿದ ಶ್ರೀನಿವಾಸ್ ಆ ಚಿತ್ರದ ಬಿಡುಗಡೆಯ ಮುನ್ನ ಅದರ ಎರಡೂವರೆ ನಿಮಿಷಗಳ 'ಟ್ರೈಲರ್' ನ್ನು ಸುಮಾರು 250 ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೋರಿಸುತ್ತಿದ್ದಾರೆ.



ಇತ್ತೀಚಿನ ವರ್ಷಗಳಲ್ಲಿ ಚಿತ್ರ ಬಿಡುಗಡೆಯ ಮುನ್ನ ಈ ರೀತಿ 'ಟ್ರೈಲರ್'ನ್ನು ತೋರಿಸುವ ಕಾರ್ಯಕ್ಕೆ ನಿರ್ಮಾಪಕರು ಕೈಹಾಕಿದ್ದೇ ಇಲ್ಲ. ಏಕೆಂದರೆ ಈ 'ಟ್ರೈಲರ್'ಗಾಗಿ ಯಾಕೆ ಹಣ ಖರ್ಚು ಮಾಡಬೇಕೆಂಬುದು ಹಲವರ ಮನೋಭಾವವಾದರೆ, ಇನ್ನೂ ಕೆಲವರ ಚಿತ್ರ ಬಿಡುಗಡೆಯಾಗುವುದೇ ತೂಗುಯ್ಯಾಲೆಯಲ್ಲಿರುವಾಗ ಇಂತಹ 'ಟ್ರೈಲರ್' ಬಗ್ಗೆ ಯಾಕೆ ತಲೆ ಕೆಡಿಸಿಕೊಳುಬೇಕೆಂಬ ಧೋರಣೆ.

ಅಂದಹಾಗೆ 'ಅಲೆಮಾರಿ' ಚಿತ್ರದ ಪ್ರಚಾರಕ್ಕಾಗಿಯೇ ಶ್ರೀನಿವಾಸ್ ಅವರು ಸುಮಾರು 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ.

ಕ್ರೇಜಿ ಶೋಗಳು!



ಇತ್ತೀಚೆಗೆ ಕವಿತಾ ಲಂಕೇಶ್ ನಿರ್ದೇಶನದ 'ಕ್ರೇಜಿ ಲೋಕ' ಚಿತ್ರದ ನಾಯಕ ಸೂರ್ಯ ಮತ್ತು ನಾಯಕಿ ಹರ್ಷಿಕಾ ಪೂಣಚ್ಚ ಫ್ಯಾಷನ್ ಡಿಸೈನರ್ ಪ್ರಸಾದ್ ಬಿದ್ದಪ್ಪ ಏರ್ಪಡಿಸಿದ್ದ ಒಂದು ಫ್ಯಾಷನ್ ಶೋನಲ್ಲಿ ಭಾಗವಹಿಸಿದರು. ಅಷ್ಟೇ ಅಲ್ಲ, ಅವತ್ತು ನಿರ್ದೇಶಕಿ ಕವಿತಾ ಕೂಡ ಬಿಳೀ ಸೀರೆ ಉಟ್ಟುಕೊಂಡು ತನ್ನ ಸಿನಿಮಾದ ನಟನಟಿಯರೊಂದಿಗೆ ತಾವೂ 'ರ‍್ಯಾಂಪ್' ಮೇಲೆ ನಡೆದಾಡಿದರು.

ಇದಾದ ಹತ್ತು ದಿನಗಳನಂತರ ಕವಿತಾರವರ ಸಹೋದರ ಇಂದ್ರಜಿತ್ ಲಂಕೇಶ್ ಕೂಡ ತಾವು ನಿರ್ದೇಶಿಸಿರುವ 'ದೇವ್' ಚಿತ್ರಕ್ಕಾಗಿ ಒಂದು 'ರ‍್ಯಾಂಪ್ ಶೋ'ವನ್ನು ಏರ್ಪಡಿಸಿದರು. ತಾನು ಯಾವುದೋ ಮಾಡೆಲ್‌ಗಳಿಗಿಂತ ಕಮ್ಮಿಯೇನಿಲ್ಲ ಎಂಬಂತೆ ಇಂದ್ರಜಿತ್ ತಮ್ಮ ಮಡದಿ ಅರ್ಪಿತಾ ಜೊತೆ 'ರ‍್ಯಾಂಪ್' ಮೇಲೆ ನಡೆದುಕೊಂಡು ಬಂದರು. ಆ ಸಮಾರಂಭದಲ್ಲಿ 'ದೇವ್' ಚಿತ್ರದ ನಾಯಕ ದಿಗಂತ್ ಮತ್ತು ನಾಯಕಿ ಚಾರ್ಮಿ ಕೂಡ ಭಾಗವಹಿಸಿದರು.



ಕವಿತಾ ಮತ್ತು ಇಂದ್ರಜಿತ್ ಅವರ ಈ ಫ್ಯಾಷನ್ ಶೋಗಳನ್ನು ಕನ್ನಡದ ಬಹುತೇಕ ಟಿವಿ ಚಾನೆಲ್‌ಗಳು ಪ್ರಮುಖ ಸುದ್ದಿತರಹ ವರದಿ ಮಾಡಿದವು. ಕನ್ನಡ ಚಿತ್ರರಂಗದಲ್ಲಿ ಇಂತಹ 'ರ‍್ಯಾಂಪ್ ಶೋ'ಗಳು ಅಪರೂಪ. ಅದಕ್ಕೆ ಕಾರಣ ಇಂತಹ ಪ್ರೋಗ್ರಾಂಗಳಿಂದಲೂ ತಮ್ಮ ಚಿತ್ರಕ್ಕೆ ಪ್ರಚಾರ ಸಿಗಬಹುದೆಂಬ ಆಲೋಚನೆ ನಮ್ಮ ಹೆಚ್ಚಿನ ನಿರ್ದೇಶಕರುಗಳಿಗೆ ಇಲ್ಲದಿರುವುದು.



ದುರ್ಗಾ ಶೆಟ್ಟಿ ಏನಾದಳು?


ಎಂಟು ವರ್ಷಗಳ ಹಿಂದೆ ಕನ್ನಡ ಚಿತ್ರರಂಗದಲ್ಲಿ ದುರ್ಗಾ ಶೆಟ್ಟಿ ಎಂಬ ಸೆಕ್ಸ್ ಬಾಂಬ್ ಹಾವಳಿಯಿಟ್ಟದ್ದು ನೆನಪಿದೆಯೇ?

ಪ್ರವೀಣ್ ನಾಯಕ್ ನಿರ್ದೇಶಿಸಿದ್ದ 'ಮೀಸೆ ಚಿಗುರಿದಾಗ' ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟಿದ್ದ ದುರ್ಗಾ ಶೆಟ್ಟಿ ಆನಂತರ 'ಶುಕ್ಲಾಂಬರಧರಂ', ಹೇಮಂತ್ ಹೆಗ್ಡೆಯ 'ಧಡ್ ಧಡ್'. 'ಶ್ರೀರಾಮ್‌ಪುರ ಪೊಲೀಸ್ ಸ್ಟೇಷನ್' ಸೇರಿದಂತೆ ಒಂದಷ್ಟು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಳು. 'ಮೊನಾಲಿಸಾ' ಚಿತ್ರದ ಹಾಡೊಂದರಲ್ಲಿ ಕೂಡಾ ಈಕೆ ಕುಣಿದಿದ್ದಳು. ನಟನೆಯ ಗಂಧಗಾಳಿ ಗೊತ್ತಿಲ್ಲದಿದ್ದ ಈಕೆ ತನ್ನ ದೇಹಸಿರಿಯಿಂದಾಗಿ ಐಟಂ ಸಾಂಗುಗಳಿಗೆ ಸೀಮಿತವಾದಳು.



ಇದೆಲ್ಲದರ ಮಧ್ಯೆ ಧರ್ಮ ಎಂಬ ನಟನ ತೆಕ್ಕೆಗೆ ಬಿದ್ದಳು. ಧರ್ಮ ಮತ್ತು ದುರ್ಗಾಳ ಪ್ರಣಯ ಪ್ರಸಂಗ ಎಲ್ಲಿಯತನಕ ಹೋಗಿತ್ತೆಂದರೆ ಇವರಿಬ್ಬರು ಮದುವೆಯಾಗುವುದಾಗಿ ಘೋಷಿಸಿದ್ದರು. ಆದರೆ ಅವರಿಬ್ಬರ ಮಧ್ಯೆ ಅದೇನಾಯಿತೋ, ಇದ್ದಕ್ಕಿದ್ದಂತೆ ದುರ್ಗಾ ರಾಜಕಾರಣಿಯ ಮಗನೊಬ್ಬನಿಗೆ ಗಾಳ ಹಾಕಿದಳು.

ಆತ ಕಾಂಗ್ರೆಸ್‌ನ ಹಿರಿಯ ನಾಯಕಿ ಮನೋರಮಾ ಮಧ್ವರಾಜ್ ಅವರ ಪುತ್ರ ಪ್ರಸಾದ್‌ರಾಜ್. ಮೈತುಂಬಾ ಶೋಕಿ ಮೆತ್ತಿಕೊಂಡಿದ್ದ ಪ್ರಸಾದ್‌ರಾಜ್‌ಗೆ ಅದಾಗಲೇ ಮದುವೆಯೂ ಆಗಿತ್ತು. ಆದರೆ ಈತನ ಕಿರುಕುಳದಿಂದ ಬೇಸತ್ತ ಆತನ ಪತ್ನಿ ತನ್ನ ಮಗುವಿನ ಸಮೇತ ಮಹಡಿಯಿಂದ ಬಿದ್ದು ಪ್ರಾಣ ಬಿಟ್ಟಿದ್ದಳು.



ಪತ್ನಿ ಮತ್ತು ಮಗುವಿನ ದುರ್ಮರಣವನ್ನು ಮರೆತ ಪ್ರಸಾದ್ ದುರ್ಗಾಳನ್ನು ಮದುವೆಯಾಗಲು ನಿಂತ. ಆವನ ತಾಯಿ ಮನೋರಮಾ ಅವರ ವಿರೋಧದ ನಡುವೆಯೂ ಪ್ರಸಾದ್ ಮತ್ತು ದುರ್ಗಾಳ ಮದುವೆಯನ್ನು ದುರ್ಗಾಳ ತಾಯಿ ಆರತಿ ಶೆಟ್ಟಿಯೇ ನಿಂತು ನೆರವೇರಿಸಿದ್ದಳು.

ಮದುವೆಯಾದ ನಂತರ ಪ್ರಸಾದ್ ಮಂಗಳೂರಿನ ಬೆಂದೂರ್‌ವೆಲ್ ಸರ್ಕಲ್ ಬಳಿ ದುರ್ಗಾಳಿಗೆ 'ಫೇಸ್‌ಲಿಫ್ಟ್' ಎಂಬ ಐಷಾರಾಮಿ ಬ್ಯೂಟಿ ಪಾರ್ಲರ್ ಒಂದನ್ನು ತೆರೆದುಕೊಟ್ಟ. ದುರ್ಗಾಶೆಟ್ಟಿ ಅಲ್ಲಿ ಬ್ಯೂಟಿಪಾರ್ಲರ್ ಕೆಲಸ ಮಾಡಿದ್ದಕ್ಕಿಂತ ಹಕ್ಕಿ ವ್ಯಾಪಾರ ಮಾಡಿದ್ದೇ ಹೆಚ್ಚು. ತನ್ನ ಮಗಳ ಸಕಲ ವ್ಯವಹಾರಗಳಿಗೂ ಬೆನ್ನುಕೊಟ್ಟು ನಿಂತಿದ್ದ ಆರತಿ ಶೆಟ್ಟಿ ಮೂರ್‍ನಾಲ್ಕು ವರ್ಷಗಳ ಹಿಂದಷ್ಟೇ ಕುಡಿದು ಕುಡಿದು ಪ್ರಾಣಬಿಟ್ಟಳು.

ಎರಡನೆ ಮದುವೆಯಾದ ನಂತರವೂ ಪ್ರಸಾದ್‌ರಾಜ್ ಸುಧಾರಿಸಿಕೊಳ್ಳಲಿಲ್ಲ. ಬದಲಿಗೆ ಆತನ ಶೋಕಿಗಳು ಮತ್ತು ಸೈಕೋ ಗುಣಗಳು ಹೆಚ್ಚಾಗುತ್ತಾ ಹೋದವು. ಯಾವಾಗ ಪ್ರಸಾದ್‌ರಾಜ್‌ನ ಚಟಗಳು ಮಿತಿಮೀರಿದವೋ ಆಗ ಆತನ ತಾಯಿ ಪ್ರಸಾದನ ಕೈಗೆ ನಯಾಪೈಸೆಯೂ ದಕ್ಕದಂತೆ ಬಿಗಿ ಮಾಡಿದರು. ಪರಿಣಾಮವಾಗಿ ಪ್ರಸಾದ್ ತನ್ನ ಖರ್ಚಿಗೇ ಒದ್ದಾಡುವಂತಾಯಿತು. ಇನ್ನು ಪ್ರಸಾದ್‌ನೊಂದಿಗೆ ಇದ್ದರೆ ಲಾಭ ಗಿಟ್ಟುವುದಿಲ್ಲ ಅಂತಾ ಗೊತ್ತಾಗಿದ್ದೇ ತಡ ದುರ್ಗಾ ಶೆಟ್ಟಿ ಆತನಿಗೆ ಕೋಕ್ ಕೊಟ್ಟು, ದೆಹಲಿಗೆ ಹಾರಿಹೋದಳು.

ಹಾಗೆ ದೆಹಲಿಗೆ ಹೋದ ದುರ್ಗಾ ಅದೇನು ಮಾಡಿದಳೋ ಗೊತ್ತಿಲ್ಲ. ಸದ್ಯ ಮಂಗಳೂರಿನ ವಾಣಿಜ್ಯೋದ್ಯಮಿ ಛೋಪ್ರಾ ಎಂಬಾತನನ್ನು ಮದುವೆಯಾಗಲಿದ್ದಾಳೆ ಎನ್ನುವ ಸುದ್ದಿ ಹಬ್ಬಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com